ಸಂಪುಟ: 13 Volume ಸಂಚಿಕೆ: 272 Issue ಪುಟಗಳು 08 Pages ಮಂಗಳವಾರ 16 ಡಿಸೆಂಬರ್ 2025 ₹6 PRGINO.120927 (RNINO:KARKAN/2011/48371) BDR/054/2026-2027 www.mallammanudi.in mallammanudi@gmail.com 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಪ್ರೀತಿ ಇದ್ದಲ್ಲಿ ನಂಬಿಕೆ ಇರಲೇಬೇಕೆಂದಿಲ್ಲ. ಆದರೆ ನಂಬಿಕೆ ಇದ್ದಲ್ಲಿ ಪ್ರೀತಿ ಇದ್ದೇ ಇರುವುದು.

–ಸಂತ ಕಬೀರ

ಸ್ವಯಂಪ್ರೇರಿತ ರಕ್ತದಾನ ಶಿಬಿರ ಯಶಸ್ವಿ 6 | ಅಪರಾಧ ತಡೆ ಮಾಸಾಚರಣೆ 7 | ವಚನಗಳ ಅಧ್ಯಯನದಿಂದ ಬದುಕು ಉನ್ನತಿ 8



ಗುರುನಾಥ ಜಾಂತಿಕರ್, ಕರ್ನಾಟಕ ರಾಜ್ಯ ಸಂಯುಕ್ತ ಸೌಹಾರ್ದ ಸಹಕಾರಿಯ ರಾಜ್ಯದ ಮಾಜಿ ಅಧ್ಯಕ್ಷರು. ಹಾಗೂ ಹಾಲಿ ನಿರ್ದೇಶಕರು, ಬೆಂಗಳೂರು. ಇವರನ್ನು ಬೀದರ್ ನಲ್ಲಿ ಭೇಟಿ ಮಾಡಿ ಪತ್ರಿಕೆ ನೀಡಲಾಯಿತು.

## ಸ್ವಯಂಚಾಲಿತ ಹವಾಮಾನ ಕೇಂದ್ರ

**ಬೆಂಗಳೂರು:** ಹವಾಮಾನ ವೈಪರೀತ್ಯದಿಂದ ಬೆಳೆಗಳನ್ನು ರಕ್ಷಿಸಲು, ರಾಜ್ಯದ ಕಾಫಿ ಬೆಳೆಗಾರರು ತಮ್ಮ ಎಸ್ಟೇಟ್‌ಗಳಲ್ಲಿ ಸ್ವಯಂಚಾಲಿತ ಹವಾಮಾನ ಕೇಂದ್ರಗಳನ್ನು ಸ್ಥಾಪಿಸುತ್ತಿದ್ದಾರೆ. ಭಾರತೀಯ ಹವಾಮಾನ ಇಲಾಖೆ ಮತ್ತು ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ಮೇಲ್ವಿಚಾರಣಾ ಕೇಂದ್ರವು ವಿವಿಧ ಸಂಶೋಧನೆ ಮತ್ತು ಶಿಕ್ಷಣ ಸಂಸ್ಥೆಗಳ ಜೊತೆಗೆ ಈ ಉದ್ಯಮಕ್ಕಾಗಿ ಎಸ್ಟೇಟ್ ಮಾಲೀಕರಿಗೆ ಬೆಂಬಲ ನೀಡುತ್ತಿದೆ.

# ರಾಷ್ಟ್ರೀಯ ಅಧ್ಯಕ್ಷರಾಗಿ ಖಂಡ್ರೆ ಅಧಿಕಾರ

**ಬೆಂಗಳೂರು:** ಶಾಮನೂರು ಶಿವಶಂಕರಪ್ಪ ಅವರ ನಿಧನದೊಂದಿಗೆ, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾವು ತ್ವರಿತ ನಾಯಕತ್ವ ಪರಿವರ್ತನೆಗೆ ಒಳಗಾಗಿದೆ. ಹಿರಿಯ ಕಾಂಗ್ರೆಸ್ ನಾಯಕ ಮತ್ತು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೊಸ ರಾಷ್ಟ್ರೀಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ, ಅತ್ಯಂತ ದೀರ್ಘಕಾಲ ಸೇವೆ ಸಲ್ಲಿಸಿದ ಮತ್ತು ಅತ್ಯಂತ ಶಕ್ತಿಶಾಲಿ ಮುಖ್ಯಸ್ಥರಾಗಿದ್ದ ಶಾಮನೂರು ಶಿವಶಂಕರಪ್ಪ ನಂತರ ಖಂಡ್ರೆ ಅಧಿಕಾರ ವಹಿಸಿಕೊಂಡಿದ್ದಾರೆ. ಈ ಹಿಂದೆ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಮತ್ತು ಹಿರಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ ಅವರು, ಸಂಘಟನೆಯ ಸೈದ್ಧಾಂತಿಕ ಚೌಕಟ್ಟಿನಲ್ಲಿ,



ವಿಶೇಷವಾಗಿ ಸಮುದಾಯದ ಏಕತೆಯನ್ನು ರೂಪಿಸುವಲ್ಲಿ ಮತ್ತು ವೀರಶೈವರಿಗೆ ಪ್ರತ್ಯೇಕ ಧಾರ್ಮಿಕ ಮಾನ್ಯತೆಗಾಗಿ ದೀರ್ಘಕಾಲದ ಹೋರಾಟ ನಡೆಸಿದ ನಾಯಕರಾಗಿದ್ದಾರೆ.

# ಶಾಮನೂರರ ಕೊಡುಗೆ ಅಪಾರ

**ಹುಮನಾಬಾದ್:** ಶಾಸಕ ಶಾಮನೂರ್ ಶಿವಶಂಕರಪ್ಪ ನಿಧನರಾದ ಹಿನ್ನಲೆ ನಗರದ ಮಾಜಿ ಸಚಿವರ ಗೃಹ ಕಚೇರಿಯಲ್ಲಿ ಶನಿವಾರ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಶಾಸಕ ಶಾಮನೂರ ಭಾವಚಿತ್ರಕ್ಕೆ ಮಾಜಿ ಸಚಿವ ರಾಜಶೇಖರ ಪಾಟೀಲ್ ಪುಷ್ಪನಮನ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, ಶಾಮನೂರ ರವರು ತಮ್ಮ ಜೀವನದುದ್ದಕ್ಕೂ ನೀಡಿರುವ ಸಾಮಾಜಿಕ ಸೇವೆ ಅಪಾರವಾಗಿದೆ. ಸಚಿವ, ಸಂಸದರಾಗಿ ಮಹತ್ತರ ಕಾರ್ಯಗಳನ್ನು ಮಾಡುವ ಮೂಲಕ ಶೈಕ್ಷಣಿಕ ಕ್ಷೇತ್ರದಲ್ಲಿ ಕ್ರಾಂತಿಯನ್ನು ಮಾಡಿದ ಶಾಸಕ ಶಾಮನೂರ್ ಶಿವಶಂಕರಪ್ಪ ನವರ ಅಗಲಿಕೆ ತುಂಬಲಾದರದ ನಷ್ಟವಾಗಿದೆ.



ಭಗವಂತ ಅವರ ಆತ್ಮಕ್ಕೆ ಶಾಂತಿ ಕರುಣಿಸಲಿ ಎಂದು ಪ್ರಾರ್ಥಿಸುವೆ ಎಂದರು.



ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಸೋಮವಾರ ದಾವಣಗೆರೆಯಲ್ಲಿ ರಾಜ್ಯದ ಹಿರಿಯ ಶಾಸಕರು ಹಾಗೂ ಮಾಜಿ ಸಚಿವರಾದ ಶಾಮನೂರು ಶಿವಶಂಕರಪ್ಪ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.



ಮಲ್ಲಮ್ಮ ನುಡಿ ಯನ್ನು ಓದುತ್ತಿರುವ ಮಾಜಿ ಸಚಿವ ರಾಜಶೇಖರ ಪಾಟಿಲ್ ಅವರು.

# ದಿಲ್ಲಿಯಲ್ಲಿ ದ್ವಿ ಬಣದ ಶಕ್ತಿ

## ವರಿಷ್ಠ ರಾಹುಲ್‌ಗಾಂಧಿ–ಡಿಸಿಎಂ ಡಿಕೆಶಿ ನಡುವಿನ ಮಾತಿನ ಚರ್ಚೆ | ರಾಜ್ಯ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಕುತೂಹಲ

• ಮಲ್ಲಮ್ಮ ನುಡಿ ವಾರ್ತೆ ಹೊಸದಿಲ್ಲಿ/ಬೆಂಗಳೂರು

ದೆಹಲಿಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಆಯೋಜಿಸಿದ್ದ ವೋಟ್ ಚೋರಿ ಅಭಿಯಾನದ ಬೆನ್ನಲ್ಲೇ ರಾಜ್ಯ ರಾಜಕೀಯದಲ್ಲೂ ಹೊಸ ಗಾಳಿ ಬೀಸುವ ಸೂಚನೆ ಸಿಕ್ಕಿದೆ.

ರಾಜ್ಯದ ಬಹಳಷ್ಟು ನಾಯಕರು ಭಾಗವಹಿಸಿದ್ದ ಈ ಅಭಿಯಾನದಲ್ಲೂ ಎರಡು ಬಣಗಳ ನಡುವೆ ಶಕ್ತಿ ಪ್ರದರ್ಶನ ನಡೆದಿದೆ. ಇಬ್ಬರು ನಾಯಕರಿಗೆ ಪ್ರತ್ಯೇಕವಾದ ಜೈಕಾರ ಲಭಿಸಿರುವುದು ಗಮನ ಸೆಳೆದಿದೆ.



**ದಿಲ್ಲಿಯಲ್ಲಿ ಘೋಷಣೆ:** ಮುಂದಿನ ಮುಖ್ಯಮಂತ್ರಿ ಡಿಕೆ ಶಿವಕುಮಾರ್, ಸಿದ್ದರಾಮಯ್ಯನವರೇ ಐದು ವರ್ಷ ಸಿಎಂ ಎನ್ನುವ ಘೋಷಣೆ ದೆಹಲಿಯಲ್ಲಿ ಮೊಳಗಿದೆ. ಕಾಂಗ್ರೆಸ್ ಹೈಕಮಾಂಡ್ ಸೂಚನೆಯ ಮೇರೆಗೆ, ಇಬ್ಬರು ನಾಯಕರು ಬ್ರೇಕ್ ಫಾಸ್ಟ್ ಮೀಟಿಂಗ್ ನಡೆಸಿದ್ದರು. ಬೆಳಗಾವಿ ಅಧಿವೇಶನದ ವೇಳೆ, ಬಣ ರಾಜಕೀಯ ಮತ್ತೆ ತಿರುವನ್ನು ಪಡೆದುಕೊಂಡಿತ್ತು.

### ಹೈ ನಿರ್ಧಾರ ಏನಿರಬಹುದು..?

ಭೋಜನಕೂಟದ ನಂತರ ಡಿಕೆ ಶಿವಕುಮಾರ್, ಎಐಸಿಸಿ ಉಸ್ತುವಾರಿ ರಣದೀಪ್ ಸುರ್ಜೇವಾಲ, ಸೋನಿಯಾ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಜೊತೆ–ಗೂ ಮಾತುಕತೆ ನಡೆಸಿದ್ದಾರೆ. ಕರ್ನಾಟಕದ ನಾಯಕರುಗಳಿಗೆ ಹೈಕಮಾಂಡ್ ನಿರ್ಧಾರಕ್ಕಾಗಿ ಕಾಯಬೇಕು ಎನ್ನುವ ಸಂದೇಶವನ್ನು ಗಣ್ಯರು ರವಾನಿಸಿರುವುದು ಕುತೂಹಲ ಹುಟ್ಟಿಸಿದೆ.

### ಔತಣ ಕೂಟದಲ್ಲಿ ಅವರಿರಲಿಲ್ಲ ಆದರೆ..

ದೆಹಲಿಯಲ್ಲಿ ನಡೆದ ವೋಟ್ ಚೋರಿ ರ‍್ಯಾಲಿಯಲ್ಲಿಗೆ ಬಂದಿದ್ದ ನಾಯಕರಿಗೆ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಇಂದಿರಾ ಭವನದಲ್ಲಿ ಭೋಜನಕೂಟ ಆಯೋಜಿಸಿದ್ದರು. ವಿಮಾನ ವಿಳಂಬ ವಾದ್ದರಿಂದ ಸಿಎಂ ಸಿದ್ದರಾಮಯ್ಯ ಇದರಲ್ಲಿ ಭಾಗವಹಿಸಿರಲಿಲ್ಲ. ಈ ಔತಣಕೂಟದಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಭಾಗವಹಿಸಿದ್ದರು.

### ಆ ಎರಡು ನಿಮಿಷ ಏನು ಮಾತು..?

ಎರಡು ನಿಮಿಷ ರಾಹುಲ್ ಗಾಂಧಿ, ಡಿಕೆ ಶಿವಕುಮಾರ್ ಅವರ ಜೊತೆ ಮಾತನಾಡಿದ್ದಾರೆ. ಉಭಯ ಕುಶಲೋಪರಿಯ ನಂತರ, ರಾಜ್ಯದ ಗೊಂದಲ ಶೀಘ್ರದಲ್ಲೇ ಬಗೆಹರಿಸುವುದಾಗಿ, ರಾಹುಲ್, ಡಿಕೆಶಿಗೆ ಹೇಳಿದ್ದಾರೆ. ಆದರೆ, ಯಾವ ಗೊಂದಲ ಎನ್ನುವುದನ್ನು ನಿರ್ದಿಷ್ಟವಾಗಿ ರಾಹುಲ್ ಉಲ್ಲೇಖಿಸಿಲ್ಲ ಎನ್ನುವುದು ಸ್ಪಷ್ಟವಾಗಿಲ್ಲ.

### ಅದೆಲ್ಲಾ ನಿಮ್ಮುಂದೆ ಹೇಳಕಾಗಲ್ಲ..!

ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿದ್ದೀರಿ, ಏನು ಮಾತುಕತೆ ಆಯಿತು ಎನ್ನುವ ಮಾಧ್ಯಮಗಳ ಪ್ರಶ್ನೆಗೆ ಡಿಕೆಶಿವಕುಮಾರ್, ಅದನ್ನೆಲ್ಲಾ ನಿಮ್ಮ ಮುಂದೆ ಹೇಳಲು ಸಾಧ್ಯವೇ ಎಂದು ಪ್ರಶ್ನಿಸಿದ್ದಾರೆ. ಬೆಳಗಾವಿಯ ಚಳಿಗಾಲದ ಅಧಿವೇಶನದ ನಂತರ, ಕುರ್ಚಿ ಕಿತ್ತಾಟಕ್ಕೆ ತೆರೆ ಬೀಳಬಹುದು ಎನ್ನುವುದು ಕಾರ್ಯಕರ್ತರ ನಿರೀಕ್ಷೆಯಾಗಿದೆ.

### ಇಕ್ಬಾಲ್ ಹೇಳಿಕೆಯ ಕುತೂಹಲ

ಡಿಕೆ.ಶಿ ಹಿತೈಷಿ ಹಾಗೂ ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಅವರು 2026 ಜ.6ರಂದು ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ ಎಂದು ಹೇಳಿದ್ದ ಬೆನ್ನಲ್ಲೇ ಸಿದ್ದರಾಮಯ್ಯ ಅವರ ಅನುಪಸ್ಥಿತಿಯಲ್ಲಿ ಈ ಭೋಜನಕೂಟ ನಡೆದಿದೆ. ಹೈಕಮಾಂಡ್–ಡಿಕೆ.ಶಿ ನಡುವಿನ ಮಾತುಕತೆ ಕುರಿತು ಕುತೂಹಲ ಶುರುವಾಗಿದೆ.

# ಅಜಾತಶತ್ರು ಯುಗಾಂತ್ಯ



• ಮಲ್ಲಮ್ಮ ನುಡಿ ವಾರ್ತೆ ದಾವಣಗೆರೆ

ರಾಜ್ಯದ ಹಿರಿಯ ರಾಜಕಾರಣಿ ಶಾಮನೂರು ಶಿವಶಂಕರಪ್ಪ ಅವರ ಶಿವೈಕ್ಯರಾಗಿದ್ದಾರೆ. ರಾಜಕಾರಣಿ ಮಾತ್ರವಲ್ಲ, ಉದ್ಯಮಿ, ಕೈಗಾರಿಕೋದ್ಯಮಿ, ಲೋಕೋಪಕಾರಿ, ಶಿಕ್ಷಣ ತಜ್ಞ, ಕೃಷಿಕ ಮತ್ತು ಸಮಾಜ ಸೇವಕರಾಗಿದ್ದರು. ಶಿವಶಂಕರಪ್ಪ ವಿನಮ್ರ ಹಿನ್ನೆಲೆಯಿಂದ ಬಂದಿದ್ದರೂ, ಅವರ ಮಹತ್ವಾಕಾಂಕ್ಷೆ ಅವರನ್ನು ರಾಷ್ಟ್ರೀಯ ನಾಯಕರನ್ನಾಗಿ ಮಾಡಲು ಸಹಾಯ ಮಾಡಿದ್ದು ಸ್ಮರಣೀಯವಾಗಿದೆ. ಸಾರ್ವಜನಿಕರ ದರ್ಶನ ಮುಕ್ತಾಯವಾದ ನಂತರ ಸಂಜೆ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಸಾಗಿ ಹೈಸ್ಕೂಲ್ ಮೈದಾನದಿಂದ ಕಲ್ಲೇಶ್ವರ ರೈಸ್ ಮಿಲ್‌ವರೆಗೆ ಅಂತಿಮ ಯಾತ್ರೆ ನಡೆಯಲಿದೆ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಡಿಸಿಎಂ ಡಿ.ಕೆ ಶಿವಕುಮಾರ್ ಸೇರಿದಂತೆ ಹಲವಾರು ಸಚಿವರು, ಶಾಸಕರು, ಮುಖಂಡರು ಆಗಮಿಸಿ ಅಗಲಿದ ಚೇತನಕ್ಕೆ ನಮನ ಸಲ್ಲಿಸಿದ್ದಾರೆ.

**ವಿಜಾಪುರ ಮೂಲ:** ಕಲ್ಲಪ್ಪ ಮತ್ತು ಸಾವಿತ್ರಮ್ಮ ಪುತ್ರರಾದ ಡಾ. ಶಿವಶಂಕರಪ್ಪ ಅವರ ಪೂರ್ವಜರು ಈಗ ವಿಜಯಪುರ ಜಿಲ್ಲೆಯ ಬಿಜಾಪುರದ ಶಾಮನೂರು ಮೂಲದವರು. ಕುಟುಂಬವು ಉದ್ಯೋಗ ಹುಡುಕುತ್ತಾ ರಾಣೆಬೆನ್ನೂರಿಗೆ ಬಂದು ದಾವಣಗೆರೆಯಲ್ಲಿ ನೆಲೆಸಿದರು, ಅಲ್ಲಿ ಅವರು ಅಕ್ಕಿ ವ್ಯಾಪಾರವನ್ನು ಪ್ರಾರಂಭಿಸಿದರು ಮತ್ತು ವ್ಯಾಪಾರದಿಂದ ಜನಪ್ರಿಯರಾಗಿದ್ದರು.

ದಾವಣಗೆರೆ ಜಿಲ್ಲೆ ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಯಾಗಿದ್ದಾರೆ ಅದಕ್ಕೆ ಶಾಮನೂರು ಶಿವಶಂಕರಪ್ಪ ಅವರು ಕಾರಣ.

–ಸಿದ್ದರಾಮಯ್ಯ, ಮುಖ್ಯಮಂತ್ರಿ.

### ಗೌರವ ಜೊತೆ ಅಂತ್ಯಕ್ರಿಯೆ

ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪನವರ ಅಂತ್ಯಸಂಸ್ಕಾರ ಸಕಲ ಸರ್ಕಾರಿ ಗೌರವದೊಂದಿಗೆ ಕಲ್ಲೇಶ್ವರ ರೈಸ್ ಮಿಲ್‌ನ ಆವರಣದಲ್ಲಿ ನಡೆದಿದೆ. ವೀರಶೈವ ಲಿಂಗಾಯತ ಸಂಪ್ರದಾಯದಂತೆ ಪತ್ನಿ ಪಾರ್ವತಮ್ಮ ಅವರ ಸಮಾಧಿ ಪಕ್ಕದಲ್ಲೇ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿದೆ.

### ಸಂತಾಪ:ಕಲಾಪ ಮುಂದೂಡಿಕೆ

ಬೆಳಗಾವಿಯ ಸುವರ್ಣ ಸೌಧದಲ್ಲಿ ಚಳಿಗಾಲದ ಅಧಿವೇಶನದಲ್ಲಿ ಹಿರಿಯ ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಅವರಿಗೆ ವಿಧಾನಸಭೆ ಮತ್ತು ವಿಧಾನ ಪರಿಷತ್ ನಲ್ಲಿ ಸಂತಾಪ ಸೂಚಿಸಲಾಯಿತು. ವಿಧಾನಸಭೆ ಕಲಾಪ ಆರಂಭವಾಗುತ್ತಿದ್ದಂತೆ ಶಾಮನೂರು ಶಿವಶಂಕರಪ್ಪಗೆ ಅವರಿಗೆ ಸಂತಾಪ ಸೂಚಿಸಲಾಯಿತು. ಬಳಿಕ ಕಲಾಪವನ್ನು ಮುಂದೂಡುಲಾಯಿತು.

# ಅಧಿವೇಶನ ವಿಸ್ತರಿಸಲು ಆರ್. ಅಶೋಕ್ ಪತ್ರ

• ಮಲ್ಲಮ್ಮ ನುಡಿ ವಾರ್ತೆ ಬೆಳಗಾವಿ

ರಾಜ್ಯ ವಿಧಾನಸಭೆಯ ಚಳಿಗಾಲದ ಅಧಿವೇಶನವನ್ನು ಇನ್ನೂ ಒಂದು ವಾರ ವಿಸ್ತರಿಸುವಂತೆ ಕರ್ನಾಟಕ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಸ್ಪೀಕರ್ ಯು.ಟಿ. ಖಾದರ್ ಅವರನ್ನು ಕೋರಿದ್ದಾರೆ.



ಸ್ಪೀಕರ್ ಅವರಿಗೆ ಬರೆದ ಪತ್ರದಲ್ಲಿ, ರಾಜ್ಯಕ್ಕೆ ಸಂಬಂಧಿಸಿದ ಹಲವಾರು ಸಮಸ್ಯೆಗಳನ್ನು ಚರ್ಚಿಸಿ ಅವುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ಅವಶ್ಯಕತೆಯಿದೆ ಎಂದು ಹೇಳಿದ್ದಾರೆ.

ಡಿ.8 ರಿಂದ 19 ರವರೆಗೆ ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನವನ್ನು ನಡೆಸಲು ನಿರ್ಧರಿಸಲಾಗಿತ್ತು ಆದರೆ ಕೆಲವು ಕಾರಣಗಳಿಂದಾಗಿ, ಅಧಿವೇಶನವನ್ನು 2 ದಿನ ಕಡಿಮೆ ಮಾಡಲಾಗಿದೆ ಎಂದು ವಿವರಿಸಿದ್ದಾರೆ.

# ಪ್ರತಿಪಕ್ಷಕ್ಕೆ ದೇವೇಗೌಡ ಟಾಂಗ್

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ವೋಟ್ ಚೋರಿ ಹೆಸರಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸರಕಾರ ಹಾಗೂ ಸಾಂವಿಧಾನಿಕ ಸಂಸ್ಥೆಗಳ ವಿರುದ್ಧ ಸುಳ್ಳಿನ ಸಂಕಥನ ಸೃಷ್ಟಿಸುತ್ತಿರುವ ಪ್ರತಿಪಕ್ಷಗಳು ಭವಿಷ್ಯದಲ್ಲಿ ಘೋರ ಪರಿಣಾಮ ಅನುಭವಿಸುತ್ತವೆ ಎಂದು ಮಾಜಿ ಪ್ರಧಾನಿಗಳಾದ ಹೆಚ್.ಡಿ. ದೇವೇಗೌಡರು ಗಂಭೀರ ಎಚ್ಚರಿಸಿದ್ದಾರೆ.



ರಾಜ್ಯಸಭೆಯಲ್ಲಿ ಈ ಕುರಿತ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿ; ಪ್ರತಿಪಕ್ಷಗಳು ನಿರಂತರವಾಗಿ ಸುಳ್ಳಿನ ಕಥೆಗಳನ್ನು ಪ್ರಚಾರ ಮಾಡುತ್ತಾ ಹೋದರೆ, ಮತದಾರರ ಮನಸ್ಸಿನಲ್ಲಿ ಅನುಮಾನಗಳನ್ನು ಹುಟ್ಟು ಹಾಕಿದರೆ ಅದರಿಂದ ಪ್ರತಿಪಕ್ಷಗಳಿಗೆ ಒಳ್ಳೆಯದು ಮಾಡುವುದಿಲ್ಲ ಎಂದು ಹೇಳಿದರು. ಪ್ರತಿಪಕ್ಷಗಳು ಪ್ರಧಾನಿಯವರ ಬಗ್ಗೆ ಹಾದಿಬೀದಿಗಳಲ್ಲಿ ಮತ್ತು ಸಾರ್ವಜನಿಕ ವೇದಿಕೆಗಳಲ್ಲಿ ಕಟ್ಟದ್ದಾಗಿ ಟೀಕೆ ಮಾಡುತ್ತಿರುವ ಬಗ್ಗೆ ಹರಿಹಾಯ್ದಿದ್ದಾರೆ. ನಮ್ಮದು ಬಹಳ ದೊಡ್ಡ ರಾಷ್ಟ್ರ. ಕಾಂಗ್ರೆಸ್ ಪಕ್ಷವು ಮೂರು ರಾಜ್ಯಗಳಲ್ಲಿ ಅಧಿಕಾರದಲ್ಲಿ ಇರಬಹುದು. ನನ್ನ ಪ್ರತಿಪಕ್ಷ ಸ್ನೇಹಿತರೇ ದಯವಿಟ್ಟು ನೆನಪಿಡಿ ವೋಟ್ ಚೋರಿ ಎಂಬ ಪದಗಳನ್ನು ಬಳಸುವುದರಿಂದ ನೀವು ಮುಂಬರುವ ದಿನಗಳಲ್ಲಿ ತೊಂದರೆ ಅನುಭವಿಸುತ್ತೀರಿ ಎಂದಿದ್ದಾರೆ.

# ಇತಿಹಾಸ ಸೃಷ್ಟಿಸಿದ ಬಿಜೆಪಿಯ ಕಾರ್ಯಕಾರಿ ಅಧ್ಯಕ್ಷ ನಿತಿನ್ ನಬಿನ್

**ಹೊಸದಿಲ್ಲಿ:** ಬಿಜೆಪಿಯ ಹೊಸ ಕಾರ್ಯಕಾರಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ನಿತಿನ್ ನಬಿನ್, ಪಕ್ಷದ ಇತಿಹಾಸದಲ್ಲಿ ಈ ಹುದ್ದೆಯನ್ನು ಅಲಂಕರಿಸಿದ ಎರಡನೇ ವ್ಯಕ್ತಿ ಎಂಬ ಹೆಗ್ಗಳಿಕೆಯನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.



ಪಕ್ಷದ ಹಾಲಿ ಮುಖ್ಯಸ್ಥ ಜಗತ್ ಪ್ರಕಾಶ್ ನಡ್ಡಾ ಅವರು ಈ ಹಿಂದೆ ಕಾರ್ಯಕಾರಿ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ್ದರು.

ಬಿಜೆಪಿಯ ನೂತನ ಕಾರ್ಯಾಧ್ಯಕ್ಷ ನಿತಿನ್ ನಬಿನ್, ಪಕ್ಷದ ಇತಿಹಾಸದಲ್ಲಿ ಈ ಹುದ್ದೆಯನ್ನು ಅಲಂಕರಿಸಿದ ಎರಡನೇ ವ್ಯಕ್ತಿಯಾಗಿದ್ದಾರೆ. ಇದಕ್ಕೂ ಮೊದಲು ಬಿಜೆಪಿಯ ಹಾಲಿ ರಾಷ್ಟ್ರಾಧ್ಯಕ್ಷ ಜೆಪಿ ನಡ್ಡಾ ಕಾರ್ಯಾಧ್ಯಕ್ಷರಾಗಿ ನೇಮಕಗೊಂಡಿದ್ದರು. ಬಿಜೆಪಿ ಪಕ್ಷದ ಸಂವಿಧಾನವು ಕಾರ್ಯಾಧ್ಯಕ್ಷರನ್ನು ನೇಮಿಸಲು ಯಾವುದೇ ಅವಕಾಶವನ್ನು ಹೊಂದಿಲ್ಲ. ಆದರೆ 2019 ರಿಂದ, ಈ ಹುದ್ದೆಯು ಬಿಜೆಪಿ ರಾಷ್ಟ್ರಾಧ್ಯಕ್ಷರ ಹುದ್ದೆ ವಹಿಸಿಕೊಳ್ಳುವ ಮೊದಲು ಒಂದು ಮೆಟ್ಟಿಲು ಕಲ್ಲಾಗಿ ಮಾರ್ಪಟ್ಟಿದೆ. ಜೂನ್ 2019 ರಲ್ಲಿ, ಶಾ ಕೇಂದ್ರ ಗೃಹ ಸಚಿವರಾದ ನಂತರ ನಡ್ಡಾ ಅವರನ್ನು ಬಿಜೆಪಿ ಕಾರ್ಯಕಾರಿ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು.

# ಮುರುಘಾ ಶರಣರಿಗೆ ಮತ್ತೆ ಸಂಕಷ್ಟ ಶುರು

• ಮಲ್ಲಮ್ಮ ನುಡಿ ವಾರ್ತೆ ಚಿತ್ರದುರ್ಗ

ಪೋಕ್ಸೊ ಪ್ರಕರಣದಲ್ಲಿ ಚಿತ್ರದುರ್ಗದ ಮುರುಘಾ ಮಠದ ಡಾ. ಶಿವಮೂರ್ತಿ ಶರಣರನ್ನು ಖುಲಾಸೆಗೊಳಿಸಿದ ಚಿತ್ರದುರ್ಗ ಜಿಲ್ಲಾ ನ್ಯಾಯಾಲಯ ಆದೇಶ ಪ್ರಶ್ನಿಸಿ ಸಂತ್ರಸ್ತೆ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ.



ನವೆಂಬರ್ 26 ರಂದು ಎರಡನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ ನೀಡಿದ ತೀರ್ಪಿನ ವಿರುದ್ಧ ಸಂತ್ರಸ್ತೆ ತನ್ನ ವಕೀಲ ಶ್ರೀನಿವಾಸ್ ಡಿಸಿ ಮೂಲಕ ಕ್ರಿಮಿನಲ್ ಮೇಲ್ಮನವಿ ಸಲ್ಲಿಸಿದ್ದಾರೆ. ಇಬ್ಬರು ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿದ್ದ ಮುರುಘಾ ಶ್ರೀಗಳ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿತ್ತು. ಪ್ರಕರಣದ ವಿಚಾರಣೆ ನಡೆಸಿದ ಹೆಚ್ಚುವರಿ ಸೆಷನ್ಸ್ ಕೋರ್ಟ್, ಮೊದಲ ಪೋಕ್ಸೋ ಪ್ರಕರಣದಲ್ಲಿ ಮುರುಘಾ ಶರಣರು ನಿರ್ದೋಷಿ ಎಂದು ತೀರ್ಪು ನೀಡಿದೆ. ಈ ತೀರ್ಪು ಪ್ರಶ್ನಿಸಿ ಸಂತ್ರಸ್ತೆ ಮೇಲ್ಮನವಿ ಸಲ್ಲಿಸಿದ್ದಾರೆ.

**25 ಲಕ್ಷಕ್ಕೂ ಹೆಚ್ಚು ಭಕ್ತರು ಶಬರಿಮಲೆಗೆ ಭೇಟಿ, 46 ಲಕ್ಷ ಟಿನ್ ಅರವಣ ದಾಸ್ತಾನಿದ್ದು, ಪ್ರಸ್ತುತ 25 ಲಕ್ಷ ಟಿನ್ ಬಾಕಿ ಉಳಿದಿದೆ.**

# ಶಿಷ್ಯ ಉನ್ನತಕ್ಕೇರಿದಾಗ ಗುರುವಿಗೆ ಸಂತಸ: ಧುಮ್ಮುರ್



**ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:** ವಿದ್ಯಾರ್ಥಿಗಳು ಕಲಿಸಿದ ಗುರುಗಳಿಗಿಂತ ಉನ್ನತ ಸ್ಥಾನ ತಲುಪಬೇಕು. ಆಗ ಮಾತ್ರ ವಿದ್ಯೆ ಕಲಿಸಿದ ಗುರುಗಳಲ್ಲಿ ಸಾರ್ಥಕಭಾವ ಮೂಡುತ್ತದೆ ಎಂದು ನಿವೃತ್ತ ಶಿಕ್ಷಕ ಎಸ್ ಎಸ್ ಧುಮ್ಮುರ್ ಹೇಳಿದರು. ತಾಲೂಕಿನ ನಿರ್ಣಾ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ 1987–88ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ರವಿವಾರ ಆಯೋಜಿಸಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಸರ್ಕಾರಿ ಪ್ರೌಢ ಶಾಲೆಯಲ್ಲಿ ವಿಧ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ವಿಶೇಷ ಸಾಧನೆ ಮಾಡಿರುವುದು ಶ್ಲಾಘನೀಯ. ಯುವ ಜನರು ಪಾಶ್ಚಿಮಾತ್ಯ ಸಂಸ್ಕೃತಿಗೆ ಅಂಟಿಕೊಳ್ಳದೇ ನಮ್ಮ ದೇಶದ ಸಂಸ್ಕೃತಿ ಅರಿತು ಆಚರಿಸಬೇಕು ಎಂದರು. ವಿನಾಯಕ ಜೋಶಿ ಮಾತನಾಡಿ, ಇಂದಿನ ದಿನಗಳಲ್ಲಿ ಮಕ್ಕಳು ವಿದೇಶಗಳಲ್ಲಿ ನೌಕರಿ ಮಾಡುತ್ತಿರುವುದು ಒಂದು ಕಡೆ ನೆಮ್ಮದಿ ಇದ್ದರೆ. ಅವರಲ್ಲಿ ಕೆಲವರು ತಂದೆ ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸುತ್ತಾರೆ. ಎಷ್ಟೇ ಕಷ್ಟವಾದರೂ ಹೆತ್ತವರ ಆರೈಕೆ ಮಾಡಬೇಕು ಎಂದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ನಿರ್ಣಾ ಮತ್ತು ಮುತ್ತಂಗಿ ಗ್ರಾಮದ ಶಿವಪುತ್ರ ಸಾದಾ, ವಿಠಲರೆಡ್ಡಿ ಚುಡಾ, ವಿಠಲ ಪಂಚಾಳ, ಸಂತೋಷ ಔರಾದ, ಚಿದಾನಂದ ಗುಳ್ಳಾ ಇವರುಗಳಿಗೆ ಸನ್ಮಾನಿಸಲಾಯಿತು. ಶಾಲೆಯ ಮುಖ್ಯ ಶಿಕ್ಷಕ ವಿಷ್ಣುವರ್ಧನ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಗೀತಾ ಎಂ. ಜೋಗಣಿ, ಪಿಎಸ್ಐ ಮಹಿಂದ್ರಕುಮಾರ್, ಶರಣುಪೊಲೀಸ್ ಪಾಟೀಲ್ ಗ್ರಾಮ ಪಂಚಾಯತ್ ಉಪಾಧ್ಯಕ್ಷ ಸಂಜೀವಕುಮಾರ್ ಎಸ್.ಕಿರಣ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ರಾಜಶೇಖರ ಉಪ್ಪಿನ, ಸಾವಿತ್ರಿಬಾಯಿ ಫುಲೇ ಶಿಕ್ಷಕಿಯರ ಸಂಘದ ತಾಲೂಕಾಧ್ಯಕ್ಷೆ ಪ್ರೇಮಿಳಾ ರೆಡ್ಡಿ, ಯಾಮರೆಡ್ಡಿ, ಜಗನ್ನಾಥರೆಡ್ಡಿ ಏಖೇಳ್ಳಿ, ಮಂಜುನಾಥ್ ಜೋಗಣಿ, ಜ್ಞಾನ ರೆಡ್ಡಿ, ವಿಜಯಕುಮಾರ್ ಬಿಜಾಪುರೇ, ತಾಜೋದ್ದಿನ್ ಲಶ್ಕೇರಿ, ರಾಜಕುಮಾರ್ ಮೇತ್ರಸ್ಕರ್, ಸಂಗಪ್ಪ ಕರಕನಳ್ಳಿ, ಅರುಣಾ, ರೇಣುಕಾ ಸೇರಿದಂತೆ ವಿದ್ಯಾರ್ಥಿಗಳಿದ್ದರು. ವೆಂಕಟ ಪಲಾಟಿ ಸ್ವಾಗತಿಸಿದರು. ವೀರಶೆಟ್ಟಿ ಬುಳ್ಳಾ ನಿರೋಪಿಸಿದರು.

# ಇಂದು ದಾಡಗಿ ಗ್ರಾಮದಲ್ಲಿ ಏಕಲ ಅಭಿಯಾನ್



**ಮಲ್ಲಮ್ಮ ನುಡಿ ವಾರ್ತೆ ಬೀದರ್:** ಶ್ರೀ ಹರಿ ಮಂದಿರ್ ರಥ ವನಯಾತ್ರಾ ಕಾರ್ಯಕ್ರಮದಲ್ಲಿ ಈಖಿಖ ಮಹಿಳಾ ಚಾಪ್ಟರ್ ಬೆಂಗಳೂರು ಸಮಿತಿಯವರು ಗ್ರಾಮಕ್ಕೆ ಆಗಮಿಸಿದರು. ಇವರಿಗೆ ದಾಡಗಿ ಹಾಗೂ ಬಾತಂಬ್ರ ಸಂಚಿನ ಸಮಿಡಿತಿಯವರು ಹಾಗೂ ಆಚಾರ್ಯರು ಬೀದರ್ ಸಮಿತಿಯ ಸದಸ್ಯರು, ಗ್ರಾಮದ ಜನರಿಂದ ಅದ್ದೂರಿಯಿಂದ ಸ್ವಾಗತಿಸಲಾಯಿತು. ಈ ಕಾರ್ಯಕ್ರಮವು ದಾಡಗಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಹೆಣ್ಣು ಮಕ್ಕಳು ಕಳಸ ಹೊತ್ತು, ಭಜನೆ ನೃತ್ಯದೊಂದಿಗೆ ಕಾರ್ಯಕ್ರಮದ ವೇದಿಕೆಗೆ ಬರಮಾಡಿಕೊಂಡಿದ್ದರು.

ಏಕಲ ವಿದ್ಯಾಲಯವು ಕರ್ನಾಟಕದಲ್ಲಿ 1 ಲಕ್ಷ ಶಾಲೆಗಳನ್ನು ನಡೆಸುತ್ತಿದ್ದು. ಏಕಲ ವಿದ್ಯಾಲಯವು ಐದು ಮೂಲ ಉದ್ದೇಶಗಳು ಇಟ್ಟುಕೊಂಡು ಗ್ರಾಮದಲ್ಲಿ ಕೆಲಸ ಮಾಡುತ್ತದೆ.

ಅವು ಪ್ರಾಥಮಿಕ ಶಿಕ್ಷಣ, ಆರೋಗ್ಯ ಶಿಕ್ಷಣ, ಸಂಸ್ಕಾರ ಶಿಕ್ಷಣ, ಗ್ರಾಮ ವಿಕಾಸ್, ಜಾಗರಣ ಈ 5 ವಿಷಯಗಳನ್ನು ಇಟ್ಟುಕೊಂಡು ಗ್ರಾಮದಲ್ಲಿ ಕೆಲಸ ಮಾಡುತ್ತದೆ ಎಂದು ಬೀದರ್ ಅಂಚಲ್ ಸಮಿತಿಯ ಅಧ್ಯಕ್ಷರಾದ ರಾಜಕುಮಾರ ಅಳ್ಳೆಯವರು ಪ್ರಾಸ್ತಾವಿಕ ನುಡಿ ಮಾತನಾಡಿ, ಈ ಸಂದರ್ಭದಲ್ಲಿ ಇಊಖ ಅಧ್ಯಕ್ಷರಾದ ರಾಜಕುಮಾರ್ ಅಗರ್ವಾಲ್ ಜಿ, ಇಔಫ ಅಧ್ಯಕ್ಷರಾದ ಶಿವಶರಣಪ್ಪ ಚಿಟ್ಟಾ, ನಿತೀಶ್ ಬಿರಾದರ್, ಬಾಲಾಜಿ ಜಬಾಡೆ, ರಾಮೇಶ್ವರ್ ಜಿ, ವಿಲಾಸ್ ಪಾಟೀಲ್, ಬಲವಂತರಾವ್, ಮಹೇಶ್ ರಾಜಟ್ಟೆ, ಬಾಬುರಾವ್ ಬೇಲೂರು, 60 ಗ್ರಾಮದ ಆಚಾರ್ಯರು, ಕಾರ್ಯಕರ್ತರು ಗ್ರಾಮಸ್ಥರು ಹಾಗೂ ಬೆಂಗಳೂರಿನ ಬಂದಂತಹ ಮಹಿಳಾ ಸಮಿತಿ ಸದಸ್ಯರುಗಳು ಸಂಜಯ್ ಅಗರ್ವಾಲ್ ಶಾಸ್ ಕಾರ್ಯದರ್ಶಿ, ಮಖಿನಕಿಶೋರ್ ಗೋಯಲ್ , ಸುರೇಕುಮಾರ್ ಮೋದಿ, ಸುನೀತಾ ಮಲ್ಲಪಾನಿ ರಥ ಪ್ರಭಾರಿ. ಕಾಂತ ಸೋಮಾನಿ, ಬಿಂದು ಗಿಲ್ಡಾ, ವಿಮಲಾ ಸಾಬೂ, ಅನಿತಾ ಲಹೋಟಿ, ಮನಿಷಾ ಮೋಹತಾ , ಸಂತೋಷ್ ಬುತ್ರಾನಿಧಿ, ಸಂಗೀತಾ ದರ್ಗಾರ್, ಸುಶೀಲಾ ಸೋಮಾನಿ, ಸರಿತಾ ಕೊಠಾರಿ, ನಿರ್ಮಲಾ ಪೆರಿವಾಲ್ ಉಪಸ್ಥಿತರಿದ್ದರು. ಪ್ರಭಾಗ ರಥ ಯೋಜನಾ ಪ್ರಮುಖರಾದ ಅದೃಶ್ಯ ಜೀ ಯವರು ನಿರೂಪಣೆ ಮಾಡಿದರು, ಮನೋಹರ್ ಖಂಡೆ ಅವರು ಸ್ವಾಗತಿಸಿದರು, ಚಿದಾನಂದ ಶಿಂಧೆ ಸರ್ ಅವರು ವಂಧಿಸುವುದರ ಮೂಲಕ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

## ನಿವೃತ್ತ ಶಿಕ್ಷಕಿ ಭಾರತಿ ಓಂಪ್ರಕಾಶ ರೊಟ್ಟೆ ಅವರಿಗೆ ಸನ್ಮಾನ

# ಸಂವಿಧಾನ ಪೀಠಿಕೆ ಸಂವಿಧಾನದ ಆತ್ಮ, ದಿಕ್ಸೂಚಿ



**ಮಲ್ಲಮ್ಮ ನುಡಿ ವಾರ್ತೆ**

**ಭಾಲ್ಕಿ :** ಭಾರತದ ಸಂವಿಧಾನ ಪೀಠಿಕೆಯು ಸಂವಿಧಾನದ ಆತ್ಮ ಮತ್ತು ದಿಕ್ಸೂಚಿಯಾಗಿದೆ ಎಂದು ನಿವೃತ್ತ ಉಪನ್ಯಾಸಕ ಚಂದ್ರಶೇಖರ ಬಿರಾದಾರ್ ಹೇಳಿದರು. ತಾಲೂಕಿನ ಬಾಳೂರು ಗ್ರಾಮದ ಸರಕಾರಿ ಪ್ರೌಢ ಶಾಲೆಯ ಆವರಣದಲ್ಲಿ ವಿಶ್ವಕ್ರಾಂತಿ ದಿವ್ಯಪೀಠ ವತಿಯಿಂದ ನಿವೃತ್ತ ಶಿಕ್ಷಕಿ ಭಾರತಿ ರೊಟ್ಟೆ ಸನ್ಮಾನ ಮತ್ತು ಸಂವಿಧಾನ ಅಂಗೀಕಾರ ವರ್ಷಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಇದು ಸಂವಿಧಾನದ ಮೂಲ ತತ್ವಗಳು, ಆಶಯಗಳು ಮತ್ತು ಗುರಿಗಳಾದ ಸಾರ್ವಭೌಮತೆ, ಸಮಾಜವಾದ,

ಜಾತ್ಯತೀತತೆ, ಪ್ರಜಾಪ್ರಭುತ್ವ, ನ್ಯಾಯ, ಸ್ವತಂತ್ರ್ಯ ಸಮಾನತೆ ಮತ್ತು ಭ್ರಾತೃತ್ವವನ್ನು ವಿವರಿಸುತ್ತದೆ. ನಾವೆಲ್ಲರೂ ಸಂವಿಧಾನ ಪೀಠಿಕೆಯನ್ನು ಅರ್ಥೈಸಿಕೊಂಡು ಬದುಕುವುದು ಅಗತ್ಯವಿದೆ ಎಂದು ತಿಳಿಸಿದರು. ಕಲ್ಯಾಣ ಕರ್ನಾಟಕ ಪ್ರತಿಷ್ಠಾನದ ಅಧ್ಯಕ್ಷ ಬಸವಕುಮಾರ ಪಾಟೀಲ್ ಮಾತನಾಡಿ, ಉತ್ತಮ ಸಮಾಜ ರೂಪಿಸುವುದಲ್ಲಿ ಶಿಕ್ಷಕರ ಪಾತ್ರ ತುಂಬ ಮಹತ್ವವಾದುದು. ಶಿಕ್ಷಕಿ ಭಾರತಿ ರೊಟ್ಟೆ ಅವರು ತಮ್ಮ ಜವಾಬ್ದಾರಿಯನ್ನು ಅರಿತು ನಿಷ್ಠೆಯಿಂದ ಸೇವೆಗೈದಿದ್ದಾರೆ. ಮಕ್ಕಳ ಉಜ್ವಲ ಭವಿಷ್ಯ ನಿರ್ಮಾಣಕ್ಕಾಗಿ ಶಿಕ್ಷಕರು ಸದಾ ಶ್ರಮಿಸಬೇಕು ಎಂದು ತಿಳಿಸಿದರು. ನಿವೃತ್ತ ಶಿಕ್ಷಕ ಡಾ. ಕಾಶಿನಾಥ ಚೆಲವಾ ಮಾತನಾಡಿ, ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾಗಿದೆ. ಸಾಮಾಜಿಕ, ಆರ್ಥಿಕ, ರಾಜಕೀಯ ಸೇರಿ ಎಲ್ಲ ರಂಗದಲ್ಲಿ ದೇಶದ ಪ್ರಗತಿ ಕಾಣಬೇಕಾದರೆ ಶೈಕ್ಷಣಿಕ ಅಭಿವೃದ್ಧಿ ಹೊಂದಬೇಕಿದೆ. ಯಾವುದೇ ಜಾತಿ, ಮತ, ಭೇದವಿಲ್ಲದ ಸಮಾನತೆ ಸಮಾಜ ನಿರ್ಮಿಸುವ ನಿಟ್ಟಿನಲ್ಲಿ ಯುವ ಜನಾಂಗ ಯೋಚಿಸಬೇಕು. ವಿದ್ಯಾರ್ಥಿಗಳು ಅನೇಕ ಮಹಾತ್ಮರ ತತ್ವಾದರ್ಶಗಳು ಬದುಕಿನಲ್ಲಿ ಅಳವಡಿಸಿಕೊಂಡು ಜೀವನ ರೂಪಿಸಿಕೊಳ್ಳಬೇಕು ಎಂದು ನುಡಿದರು. ಅಧ್ಯಕ್ಷತೆ ವಹಿಸಿದ ಶಾಲೆಯ ಮುಖ್ಯಗುರು ದತ್ತಾತ್ರಿ ಬಿರಾದರ್ ಮಾತನಾಡಿ, ಶಿಕ್ಷಕಿ ಭಾರತಿ ರೊಟ್ಟೆ ಅವರು ಮಕ್ಕಳಿಗೆ ಗುಣಮಟ್ಟ ಶಿಕ್ಷಣ ಜೊತೆಗೆ ಸಾಹಿತ್ಯ, ಸಂಸ್ಕೃತಿ ಮನೋಭಾವ ಬೆಳೆಸಿ ಮಕ್ಕಳ ಅಚ್ಚುಮೆಚ್ಚಿನ ಗುರುಗಳಾದವರು. ಅವರೊಂದಿಗೆ ಸೇವೆ ಸಲ್ಲಿಸಿದ ನನಗೂ ಸಂತೃಪ್ತಿ ಇದೆ ಎಂದರು.

ದಿಶಾ ಸಮಿತಿ ಸದಸ್ಯ ಶಿವಯ್ಯಾ ಸ್ವಾಮಿ, ಸರಕಾರಿ ನೌಕರರ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ರಾಜಪ್ಪ ಪಾಟೀಲ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸೂರ್ಯಕಾಂತ ಸುಂಟೆ, ಪತ್ರಕರ್ತ ಬಾಲಾಜಿ ಕುಂಬಾರ, ವಿಶ್ವಕ್ರಾಂತಿ ದಿವ್ಯಪೀಠದ

ಅಧ್ಯಕ್ಷ ಓಂಪ್ರಕಾಶ ರೊಟ್ಟೆ, ಜಗದೀಶ್ವರ ಬಿರಾದರ್ ಮತ್ತಿತರರು ಮಾತನಾಡಿದರು. ಈ ಸಂದರ್ಭದಲ್ಲಿ ಶಿಕ್ಷಕರಾದ ಬಾಬುಬಾರ, ವೆಂಕಟರಾವ್, ನಾಗನಾಥ ಘನ್ನಾಳೆ, ಸುವರ್ಣಾ, ಸಂಜು, ನೈನಾ, ಜ್ಯೋತಿ, ನವೀನಕುಮಾರ್, ನಾರಾಯಣ ಚೆಲವಾ ಸೇರಿದಂತೆ ಹಲವರು ಇದ್ದರು.

# ಸತ್ಯದ ಮಾರ್ಗ ಅನುಸರಿಸಲು ಕರೆ

ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ: ಸರಳ ಜೀವನ ಸಾಗಿಸಬೇಕು ಅಲ್ಲದೆ ಸತ್ಯದ ಮಾರ್ಗ ಅನುಸರಿಸ ಬೇಕು ಎಂದು ಮಂಗಳೂರಿನ ಪ್ರಸಿದ್ಧ ಪ್ರವಚನಕಾರರಾದ ಮೊಹಮ್ಮದ್ ಕುಂಞಿ ತಿಳಿಸಿದರು.



ಇಲ್ಲಿನ ರಥ ಮೈದಾನದ ಸಭಾಭವನದಲ್ಲಿ ಜಮಾತೆ ಇಸ್ಲಾಮಿ ಹಿಂದ್ ತಾಲೂಕು ಸಂಘಟನೆಯಿಂದ ಅಯೋಜಿಸಿದ 10 ನೇಯ ವಾರ್ಷಿಕ ಸಾರ್ವಜನಿಕ ಕುರ್ ಆನ್ ಪ್ರವಚನದ ಎರಡನೇ ದಿವಸದ ಸಮಾರಂಭದಲ್ಲಿ ಬಾಗವಹಿಸಿ ಮಾತನಾಡಿ ಆಸೆಯೆ ದುಃಖಕ್ಕೆ ಮೂಲ ಕಾರಣ ಆದರಿಂದ ಅತಿ ಆಸೆ ಮಾಡದೆ ಮಾನಸಿಕ ನೆಮ್ಮದಿ ಉತ್ತಮ ರೀತಿ ಇಟ್ಟುಕೊಳ್ಳಬೇಕು ಇಲ್ಲದಿದ್ದರೆ ಆತ್ಮಹತ್ಯೆಯ ಧಾರಿ ಹಿಡಿಯ ಬೇಕಾಗುತ್ತದೆ ಎಂದ ಅವರು ದೇವರ ಮೇಲೆ ನಂಬಿಕೆ ಇಟ್ಟರೆ ಸುಖ ಶಾಂತಿ ನೆಮ್ಮದಿ ಸಿಗುತ್ತದೆ ಎಂದು ತಿಳಿಸಿದರು. ಅನುಭವ ಮಂಟಪ ಟ್ರಸ್ಟಿನ ಅಧ್ಯಕ್ಷರಾದ ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದೇವರು ಮಾತನಾಡಿ ಇಂತಹ ಶರಣರ ನಾಡಿನಲ್ಲಿ ಉತ್ತಮ ಕಾರ್ಯಗೈದ ಬಸವಾದಿ ಶರಣರು ಸಹ ವಚನಗಳ ಮೂಲಕ ಈ ತತ್ವವನ್ನೆ ಸಾರಿದ್ದಾರೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಸೈಯದ್ ಹೈದರ್ ವಲೀಯುಲ್ಲಾ ಖಾದ್ರಿ ನಿಲಂಗಾ. ಈಶ್ವರಿ ವಿಶ್ವವಿದ್ಯಾಲಯದ ಸರಸ್ವತಿ ಬಹೆನಜಿ. ಸಾವಿತ್ರಿ ಸಲಗರ. ರವೀಂದ್ರ ಗಾಯಕವಾಡ. ಯುಸುಫ್ ನಿಲಂಗೇಕರ. ಖೈರೂಲ್ ಮುಬಿನ್. ಅಲ್ಲಾವುದ್ದಿನ್ ಪಟೇಲ್. ಅಸೀಫೊನದ್ದಿನ ಬೀದರ. ಶಿವಕುಮಾರ ಶೆಟ್ಟಗಾರ. ರಾಜೇ ಶ್ರೀ ವರ್ಧನ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಆಧ್ಯಾತ್ಮದ ರತ್ನಗಣಿ: ಹಾರಕೂಡ ಶ್ರೀಮಠ.



**ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ:** ಸಮಾಜದಲ್ಲಿ ಆಧ್ಯಾತ್ಮದ ಮೌಲ್ಯಗಳು ಆಳವಾಗಿ ನೆಲೆಗೊಳ್ಳುವಂತೆ ಸತತವಾಗಿ ಶ್ರಮಿಸುತ್ತಿರುವ ಹಾರಕೂಡ ಶ್ರೀಮಠ ಆಧ್ಯಾತ್ಮದ ರತ್ನಗಣಿಯೇ ಆಗಿದೆ ಎಂದು ಕಲಬುರ್ಗಿಯ ಶ್ರೀ ಶರಣಬಸವೇಶ್ವರ ಸಂಸ್ಥಾನದ ಡಾ. ದಾಕ್ಷಾಯಿಣಿ ಅವ್ವಾಜಿ ಅವರು ನುಡಿದರು. ತಾಲೂಕಿನ ಹಾರಕೂಡ ಸಂಸ್ಥಾನ ಹಿರೇಮಠದಲ್ಲಿ ಜರುಗಿದ ಧರ್ಮ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರ ಅದ್ಭುತ ಯೋಗ ಶಕ್ತಿಯಿಂದ ಅಸಂಖ್ಯಾತ ಭಕ್ತರ ಬದುಕು ಚಿನ್ಮಯವಾಗಿದೆ. ಎಲ್ಲಾ ಕ್ಷೇತ್ರಗಳಲ್ಲಿ ಪೂಜ್ಯರು ಸಲ್ಲಿಸುತ್ತಿರುವ ಸೇವೆ ಅಮೋಘವಾಗಿದೆ. ನನಗೆ ಲಭಿಸಿದ ಪ್ರಶಸ್ತಿಗಿಂತಲೂ ಹಾರಕೂಡ ಶ್ರೀಗಳ ಆಶೀರ್ವಾದವೇ ಹಿರಿದು ಎಂದು ಹೆಮ್ಮೆಯಿಂದ ಹೇಳಬಯಸುತ್ತೇನೆ. ಪೂಜ್ಯರ ಆಶೀರ್ವಾದ ಹಾಗೂ ಮಾರ್ಗದರ್ಶನದಿಂದ ಶರಣರ ಸೇವೆ ಮಾಡಲು ನನಗೆ ದಿವ್ಯ ಚೈತನ್ಯ ದೊರಕಿದೆ. ಹಾರಕೂಡ ಮಠ ಹಾಗೂ ಕಲಬುರ್ಗಿಯ ಶರಣ ಸಂಸ್ಥಾನಕ್ಕೆ ಅವಿನಾಭಾವ ಸಂಬಂಧ ಇದ್ದು, ನನಗೆ ತವರು ಮನೆಗೆ ಬಂದಷ್ಟು ಖುಷಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಶ್ರೀ ಶರಣಬಸವೇಶ್ವರ ವಿಧ್ಯಾವರ್ಧಕ ಶಿಕ್ಷಣ ಸಂಸ್ಥೆ ಕಾರ್ಯದರ್ಶಿಗಳಾದ ಬಸವರಾಜ ದೇಶಮುಖ ಮಾತನಾಡಿದರು. ಕಲಬುರಗಿಯ ಶ್ರೀ ಶರಣಬಸವೇಶ್ವರ ಸಂಸ್ಥಾನದ 9ನೇ ಪಿಠಾಧೀಪತಿಗಳಾದ ಪೂಜ್ಯ ಚಿರಂಜೀವಿ ದೊಡ್ಡಪ್ಪ ಅಪ್ಪ ರವರು, ಮಲ್ಲಿನಾಥ ಹಿರೇಮಠ ಹಾರಕೂಡ ಕು. ಶಿವಾನಿ, ಕು. ಭವಾನಿ, ಕು, ಮಹೇಶ್ವರಿ, ಡಾ. ಅಲ್ಲಮಪ್ರಭು ದೇಶಮುಖ, ಕುಮಾರ ದೇಶಮುಖ, ಹೇಮಲತಾ ಹಿರೇಮಠ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಡಾ. ಎಸ್.ಎಮ್.ಭಕ್ತ ಕುಂಬಾರ ಸ್ವಾಗತಿಸಿ, ನಿರೂಪಿಸಿದರು. ಕಾರ್ತಿಕ ಸ್ವಾಮಿ ಯಲದಗುಂಡಿ ಪ್ರಾರ್ಥನಾ ಗೀತೆ ಹಾಡಿದರು.

# ಶಾಮನೂರು ನಿಧಕ್ಕೆ ಭಾತಂಬ್ರಾ ಶ್ರೀಗಳು ಸಂತಾಪ

ಭಾಲ್ಕಿ : ದಾವಣಗೆರೆ ಕ್ಷೇತ್ರದ ಕಾಂಗ್ರೆಸ್‌ನ ಹಿರಿಯ ಶಾಸಕ ಶಾಮನೂರು ಶಿವಂಕರೆಪ್ಪನವರ ನಿಧನಕ್ಕೆ ಭಾತಂಬ್ರಾ ಜಗದ್ಗುರು ನಿರಂಜನ ಸಂಸ್ಥಾನ ಮಠದ ಜಗದ್ಗುರು ಶಿವಯೋಗಿಶ್ವರ ಸ್ವಾಮೀಜಿ ಸಂತಾಪ ಸೂಚಿಸಿದ್ದಾರೆ. ಶಾಮನೂರು ಅಗಲಿಕೆ ತೀವ್ರ ಅಘಾತ ತರಿಸಿದೆ. ಅವರು ರಾಜ್ಯದ ಮುತ್ಸದ್ದಿ ನಾಯಕರಾಗಿದ್ದರು. ಸಾಮಾಜಿಕ ಮತ್ತು ಶೈಕ್ಷಣಿಕ ಸೇವೆ ಮಾದರಿಯಾಗಿದೆ. ಅವರು ಶಿಕ್ಷಣ ಸಂಸ್ಥೆ ಕಟ್ಟಿ ಶೈಕ್ಷಣಿಕ ಪ್ರಗತಿಗೆ ನಾಂದಿ ಹಾಡಿದ್ದಾರೆ. ಅವರ ಅವಧಿಯಲ್ಲಿ ವೀರಶೈವ ಲಿಂಗಾಯತ ಮಹಾಸಭೆಯ ಸಂಘಟನೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ಪ್ರಯತ್ನ ಮಾಡಿದಾರೆ. ಬಡವರ ಬಂಧು, ಕೊಡಗೈ ದಾನಿ



ಆಗಿರುವ ಅವರು ಕಳೆದ ಐದಾರೂ ವರ್ಷಗಳ ಹಿಂದೆ ನಿರಂಜನ ಸಂಸ್ಥಾನ ಮಠದ ನೂತನ ಕಟ್ಟಡ ಉದ್ಘಾಟಿಸಿದ್ದರು. ಅವರ ಅಗಲಿಕೆಯಿಂದ ವೀರಶೈವ ಲಿಂಗಾಯತ ಧರ್ಮ ಬಡವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಸವಕಲ್ಯಾಣ :– ಇಲ್ಲಿನ ರಥ ಮೈದಾನದ ಸಭಾಭವನದಲ್ಲಿ ಜಮಾತೆ ಇಸ್ಲಾಮಿ ಹಿಂದ್ ತಾಲೂಕು ಸಂಘಟನೆಯಿಂದ ಅಯೋಜಿಸಿದ 10 ನೇಯ ವಾರ್ಷಿಕ ಸಾರ್ವಜನಿಕ ಕುರ್ ಆನ್ ಪ್ರವಚನದಲಿ ಬಾಗವಹಿಸಿದ ಅಪಾರ ಸಂಖ್ಯೆಯ ಜನ ಕಾಣಬಹುದು. (ಮಲ್ಲಮ್ಮ ನುಡಿ ಚಿತ್ರ).



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ಜಾಗತಿಕ ಲಿಂಗಾಯತ ಮಹಾಸಭಾ ಹುಮ್ನಾಬಾದ್ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ ರವಿ ಮಾಗಡಿ. ಮಹೇಶ್ ಅಗಡಿ. ಜಗದೀಶ್ ಭಾವಿ. ರವಿ ಪರಂ ಶೆಟ್ಟಿ ಶ್ರೀನಾಥ್ ದೇವಣಿ ಜಗದೀಶ್ ಭಾವಿ ನರೇಶ್ ಶೆಟ್ಟಿ ಶಿವ್ಕುಮಾರ್ ಚಟ್ನಳ್ಳಿ ಬಸಯ್ಯಸ್ವಾಮಿ ವೀರೇಶ್ ಬಾವಿ ರಾಜಕುಮಾರ್ ಪಾಟೀಲ್ ವೀರೇಶ್ ಪರಂ ಶೆಟ್ಟಿ ಅಪ್ಪು ವಡಿಗೆರೆ ಉಮೇಶ್ ಜಮಗಿ ಬಸವರಾಜ ಶ್ರೀಕಾಂತ್ ತಾಂಡು ಸಿದ್ದು ಹಿರೇಮಠ್ ಸಂಜು ಹುಡುಗಿ


ಕರ್ನಾಟಕ ಸರಕಾರ

**(ಕೃಷಿ ಇಲಾಖೆ)**

**ಜಂಟಿ ಕೃಷಿ ನಿರ್ದೇಶಕರ ಕಛೇರಿ ಬೀದರ,**

ಸಂಖ್ಯೆ:ಜಕೃನಿಬಿ/ಸಿಬ್ಬಂದಿ–2/ದ.ನ.ಸ/ಅಗೈಹಾ/2025–26 ದಿನಾಂಕ:11.12.2025

**ಸೇವೆಗೆ ಹಾಜರಾಗಲು ಅಂತಿಮ ನೋಟಿಸು**

ಶ್ರೀ ಸೂರ್ಯಕಾಂತ, ಬೆರಳಚ್ಚುಗಾರರು, ಜಂಟಿ ಕೃಷಿ ನಿರ್ದೇಶಕರ ಕಛೇರಿ, ಬೀದರ ಆದ ನೀವು **ದಿನಾಂಕ: 04.03.2023** ರಿಂದ ಇಲ್ಲಿಯವರೆಗೆ ಕಛೇರಿ ಕರ್ತವ್ಯಕ್ಕೆ ಅನಧೀಕೃತವಾಗಿ ಗೈರು ಹಾಜರಾಗಿರುತ್ತೀರಿ. ಈ ನಿಮ್ಮ ಗೈರು ಹಾಜರಿ ಬಗ್ಗೆ ಕಾರಣ ನೀಡಿ ಸೇವೆಗೆ ಹಾಜರಾಗುವಂತೆ ಅನೇಕ ಬಾರಿ ನೋಟಿಸುಗಳು ಹಾಗೂ ಶಿಸ್ತು ಪ್ರಾಧಿಕಾರದಿಂದ ಅನುಬಂಧ–1 ರಿಂದ 4 ರ ವರೆಗಿನ ಆರೋಪ ಪಟ್ಟಿಯನ್ನು ಜಾರಿ ಮಾಡಿ ನಿಮ್ಮ ವಿಳಾಸಕ್ಕೆ ನೊಂದಾಯಿತ ಅಂಚೆ ಮೂಲಕ ಜಾರಿಗಳೊಳಿಸಿದ್ದು, ಹಾಗೂ ಮನೆಯ ವಿಳಾಸಕ್ಕೆ ನೋಟಿಸು ಅಂಟಿಸದರೂ ಸಹ ನಿಮ್ಮಿಂದ ಯಾವುದೇ ರೀತಿಯ ಪ್ರತಿಕ್ರಿಯೆ ಬಂದಿರುವುದಿಲ್ಲ. ಈ ಪ್ರಕಟಣೆ ಹೊರಡಿಸಿದ 15 ದಿನಗಳಲ್ಲಿ ಕರ್ತವ್ಯಕ್ಕೆ ಹಾಜರಾಗಲು ಅಂತಿಮ ಅವಕಾಶ ನೀಡಲಾಗಿದೆ. ತಪ್ಪಿದ್ದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ & ಅಪೀಲು) ನಿಯಮಗಳು 1957 ರ ನಿಯಮ ರನ್ವಯ ಕ್ರಮ ಕೈಗೊಳ್ಳಲಾಗುವುದು.

**ಸಹಿ/– ಜಂಟಿ ಕ್ರಷಿ ನಿರ್ದೇಶಕರು**
**ಬೀದರ.**

ವಾ.ಸಾ.ಸಂ.ಇ/ಬೀದರ/258/ಕೆ.ಎಸ್.ಎಂ.ಸಿ.&ಎ/2025–26


# ಪಂಚಾಯತ ಅಭಿವೃದ್ಧಿ ಅಧಿಕಾರಿ ದೇಶಪಾಂಡೆ ವಿರುದ್ಧ ದೂರು: ಕ್ರಮಕ್ಕೆ ಗಣಪತಿ ಅಷ್ಟೂರೆ ಒತ್ತಾಯ

**ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ:** ಭಾರತೀಯ ದಲಿತ ಪ್ಯಾಂಥರ ಸಂಘಟನೆ ವತಿಯಿಂದ ಹುಮನಾಬಾದ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ದೇಶಪಾಂಡೆ ವಿರುದ್ಧ ಹಲವು ದೂರುಗಳು ಈಗಾಗಲೇ ನಮ್ಮ ಬಳಿ ಬಂದಿರುತ್ತವೆ. ಮುಖ್ಯವಾಗಿ ಸುಲ್ತಾನಾಬಾದ ಪಂಚಾಯತ್ ನಲ್ಲಿ ಕೆಲಸ ಮಾಡುತ್ತಿರುವಾಗ ಅವರ ಮೇಲೆ ಹಲವು ದೂರುಗಳು ಬಂದರೂ ಅದರ ಮೇಲೆ ಯಾವುದೇ ಕ್ರಮ ಆಗುತ್ತಿಲ್ಲ ಎಂದು ಭಾರತೀಯ ದಲಿತ ಫ್ಯಾಂಥರ್ ತಾಲ್ಲೂಕು ಅಧ್ಯಕ್ಷ ಗಣಪತಿ ಆಷ್ಟೂರೆ ತಿಳಿಸಿದ್ದಾರೆ. ಸುಲ್ತಾನಾಬಾದನಲ್ಲಿ ತನ್ನ ಅಧಿಕಾರ ಬೇರೆಯವರಿಗೆ ಹಸ್ತಾಂತರಿಸುವ ಮೊದಲು ರೂ. 80000/– ರೂಪಾಯಿ ಹಣವನ್ನು ಪಂಚಾಯತ್ ನಿಂದ ತೆಗೆದಿರುತ್ತಾರೆ. ಹಣ ತೆಗೆಯುವ ಮುಂಚೆ ಯಾವುದೇ ಸಭೆಯಾಗಲಿ ಅಥವಾ ಯಾವುದೇ ರೀತಿಯ ಕಾರ್ಯಕ್ರಮ ಇಲ್ಲದೆ ಗ್ರಾಮ ಪಂಚಾಯತಿನ ಕೆಲವು ಸದಸ್ಯರಿಗೆ ತಿಳಿಸದೆ ಹಣವನ್ನು ತೆಗೆದಿರುತ್ತಾರೆ. ಸುಮಾರು 3 ತಿಂಗಳು ಯಾವುದೇ ಸಭೆ ಅಥವಾ ಕಾರ್ಯ ತಮ್ಮ ಪಂಚಾಯತನಲ್ಲಿ ಇಟ್ಟುಕೊಂಡಿರುವುದಿಲ್ಲ ,ಆದರೆ ಹಣವನ್ನು ತೆಗೆಯುವ ಮುಂಚೆ ಎಲ್ಲಾ ಸದಸ್ಯರಿಗೆ ತಿಳಿಸುವ ಕೆಲಸವಾದರೂ ಮಾಡಿರುವದಿಲ್ಲ. ಹಾಗೂ ಈ ರೀತಿಯ ಸರ್ಕಾರದ ಹಣವನ್ನು ದುರ್ಬಳಕೆ ಮಾಡಿಕೊಂಡಿರುವ ತನ್ನ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳೂತ್ತಿರುವ ಅಭಿವೃದ್ಧಿ ಅಧಿಕಾರಿ ಮೇಲೆ ಕಠಿಣ ಕ್ರಮ ಜರುಗಬೇಕು. ಹಾಗೂ ಅವರು ತನ್ನ ಅಧಿಕಾರ ಅವಧಿಯಲ್ಲಿ ಅಧಿಕವಾದ ನರೇಗಾ ಕೆಲಸ ಅಧಿಕವಾದ ಇನ್ನುಳಿದ ಕೆಲಸಗಳು ಹೆಚ್ಚು ಮಾಡುತ್ತಾ ಬರುತ್ತಿದ್ದಾರೆ, ಬೇರೆ ಪಂಚಾಯತಿಗೆ ಹೋಲಿಕೆ ಮಾಡಿದರೆ ಇವರು ಮಾಡುವ ಪ್ರತಿಯೊಂದು ಪಂಚಾಯತ್ ನಲ್ಲಿ ಅತಿ ಹೆಚ್ಚು ಕೆಲಸ ಕಾರ್ಯಗಳು ನಡೆಯುತ್ತವೆ. ಇವರಿಗೆ ಪ್ರತ್ಯೇಕವಾದ ಅಧಿಕಾರ ಇರುವಂತೆ ಕಾಣುತ್ತದೆ. ಈ ಪ್ರತಿಯೊಂದು ಕೆಲಸದ ಹಣವನ್ನು ಶ್ರೀ ವೀರಭದ್ರೇಶ್ವರ ಎಲೆಕ್ಟ್ರಿಕಲ್ & ಹಾರ್ಡವೇರ ಎಂಬ ಒಂದು ವೆಂಡರ್ ಮೇಲೆ ಹಣ ಹಾಕುತ್ತಾ ಬರುತ್ತಿದ್ದಾರೆ, ಇವರು ಮಾಡುವ ಪ್ರತಿಯೊಂದು ಪಂಚಾಯತನಲ್ಲಿ ಈ ವೆಂಡರನಲ್ಲಿಯೇ ಹಣ ಜಮಾ ಮಾಡುತ್ತಾ ಬರುತ್ತಿದ್ದಾರೆ ಎಂದು ಆಗ್ರಹಿಸಿದ್ದಾರೆ. ಈ ವೆಂಡರ ಅವರ ಒಬ್ಬ ಸಂಬಂಧಿಕರದಾಗಿದೆ ಎಂದು ತಿಳಿದು ಬಂದಿದೆ. ನಾವು ಇದನ್ನು ಪರಿಶೀಲಿಸಿದಾಗ ಇವರ ಸಮೀಪವಾಗಿರುವ ಸಂಬಂಧಿಕರವಾಗಿದೆ ಎಂದು ತಿಳಿದು ಬಂದಿರುತ್ತದೆ. ಅದಲ್ಲದೇ ಸುಲ್ತಾನಾಬಾದಿನ ಸದಸ್ಯರಾಗಿರುವಂತಹ ಶ್ರೀಮತಿ ಈ ವೆಂಡರ ದೇಶಪಾಂಡೆ ರವರ ಸಮೀಪವಾದ ಸುಲ್ಲೆಮ್ಮಾ ಇದನ್ನು ಖುದ್ದಾಗಿ ಕೇಳಿರುತ್ತಾರೆ. ಸಂಬಂಧಿಕರದಾಗಿದೆ ಎಂದು ತಿಳಿದು ಬಂದಿರುತದೆ ಎಂದು ತಿಳಿಸಿದ್ದಾರೆ. ಕಾನೂನಿನ ಪ್ರಕಾರ ಪಂಚಾಯತ ಅಭಿವೃದ್ಧಿ ಅಧಿಕಾರಿ ನಿಯಮ ಅನುಸಾರ ಯಾವುದೇ ರೀತಿಯ ಸಂಬಂಧಿಕರ ವೆಂಡರ ಆಗಲಿ ಅಥವಾ ಇನ್ನುಳಿದ ಕೆಲಸವಾಗಲಿ




ಮಾಡುವಂತಿಲ್ಲ ಎಂದು ಸರ್ಕಾರದ ನಿಯಮವಿದೆ. ಈ ನಿಯಮದ ಅನುಸಾರ ಅವರಿಗೆ ಹುದ್ದೆಯಿಂದ ಅಮಾನತ್ತುಗೊಳಿಸಬೇಕು ಎಂಬ ಕಾನೂನಿದೆ. ಆದ್ದರಿಂದ ತಾವುಗಳು ಮೇಲಾಧಿಕಾರಿಗಳು ಇದನ್ನ ತನಿಖೆ ಮಾಡಿ ಅವರಿಗೆ ಸೂಕ್ತವಾದ ಕ್ರಮ ಕೈಗೊಳ್ಳಬೇಕು ಹಾಗೂ ಅವರನ್ನು ಹುದ್ದೆಯಿಂದ ವಜಾಗೊಳಿಸಬೇಕು. ಇದಲ್ಲದೇ ಸೇಡೋಳ ಗ್ರಾಮ ಪಂಚಾಯತನಲ್ಲಿ ವಾರ್ಡ ನಂ 2 ರಲ್ಲಿ ವಿಲಾಸರಾವ ದಂಡೇಕರ ಮನೆಯಿಂದ ಚಂದ್ರಕಾಂತ ಚವ್ಹಾಣ ರವರ ಮನೆವರೆಗೆ ಸಕಾಲಕ್ಕೆ ನೀರು ಪೂರೈಕೆಯಾಗದ ಕಾರಣ ಮಹಿಳೆಯರು ಮತ್ತು ಮಕ್ಕಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ತಮ್ಮ ದಿನನಿತ್ಯದ ಕೆಲಸವನ್ನು ಬಿಟ್ಟು ತಮ್ಮ ಹೊಟ್ಟೆ ಪಾಡಿಗೋಸ್ಕರ ದಿನ ನಿತ್ಯ ದುಡಿಯದೇ ಹೊಟ್ಟೆ ಎಂಬದಿರುವಂತಹ ವ್ಯಕ್ತಿಗಳನ್ನು ಕೆಲಸ ಬಿಟ್ಟು ನೀರಿಗೊಸ್ಕರ ಅಲೆದಾಡಬೇಕಾಗುತ್ತಿದೆ. ಇದರ ವಿರುದ್ಧ ಪಂಚಾಯತನಲ್ಲಿ ಹಲವು ಬಾರಿ ದೂರಗಳನ್ನು ಕೂಡ ನೀಡಿದ್ದಾರೆ. ಈ ವಿಷಯ ಮಾಧ್ಯಮದಲ್ಲಿ ಕೂಡ ಪ್ರಕಟವಾದರೂ ಕೂಡ ಇದನ್ನು ಲೆಕ್ಕಿಸದೇ ತಮ್ಮ ಮಂಡತನದ ಹಾಗೂ ನನ್ನನ್ನು ಯಾರು ಏನು ಮಾಡುವುದಿಲ್ಲ ಎಂಬ ದರ್ಪದಿಂದ ಮೆರೆಯುತ್ತಿದ್ದಾರೆ. ಕಸ್ತೂರಬಾಯಿ ಗಂಡ ಪಾಂಡರಂಗ ಇವರ ಆಸ್ತಿಯನ್ನು ಗ್ರಾಮ ಠಾಣಾದಲ್ಲಿ ಬಂದಿದ್ದರೂ ಕೂಡ ಅಲ್ಲಿರುವಂತಹ ಪಿಡಿಓ ಅದನ್ನು ಸರ್ವೆ ನಂಬರನಲ್ಲಿ ಅಥವಾ ಪಟ್ಟಾ ಜಮೀನಿನಲ್ಲಿ ಬರುತ್ತಿದೆ ಎಂದು ಹೇಳುತ್ತಿದ್ದಾರೆ. ಹಲವು ಬಾರಿ ಸಂಬಂಧಪಟ್ಟಂತಹ ವ್ಯಕ್ತಿಗಳು ಅವರ ಬಳಿ ಹೊದರು ಕೋಡ ಅವರು ಅವರ ಕೆಲಸ ಮಾಡದೇ ಮತ್ತೆ ತನ್ನದೇ ಆದ ದರ್ಪ ತೋರಿಸುತ್ತಿದ್ದಾರೆ. ಈ ಎರಡು ಮೇಲಿನ ಸಮಸ್ಯೆಗಳು ದಲಿತ ಓಣಿಯಗಳದಾಗಿರುತ್ತವೆ. ಆದಕಾರಣ ತಾವು ದಯಾಮಾಡಿ ತಾವು ನೀಡಿರುವಂತಹ ದೂರನ್ನು ಪರಿಶೀಲಿಸಿ ಸತ್ಯ ಸತ್ಯತೆಯನ್ನು ಕಂಡು ಬಂದಲ್ಲಿ ಅವರನ್ನು ಕೂಡಲೇ ಹುದ್ದೆಯಿಂದ ವಜಾ ಮಾಡಬೇಕು. ಒಂದು ವೇಳೆ ಅವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳದೇ ಇರುವ ಪಕ್ಷದಲ್ಲಿ ತಾಲೂಕಾ ಪಂಚಾಯತ ಎದುರುಗಡೆ ಅವರನ್ನು ಅಮಾನತು ಗೊಳಿಸುವವರೆಗೆ ಸಾಂಕೇತಿಕ ಧರಣಿ ಸತ್ಯಗ್ರಹ ಮಾಡಲಾಗವುದು ಎಂದು ಹುಮನಾಬಾದ ದಲಿತ ಪ್ಯಾಂಥರ ಸಂಘಟನೆ ತಾಲ್ಲೂಕು ಅಧ್ಯಕ್ಷ ಇಓ ದೀಪಿಕಾ ನಾಯ್ಕರವರಿಗೆ ಮನವಿ ಪತ್ರ ಸಲ್ಲಿಸಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ವೈಜನಾಥ ಸಿಂಧೆ,ಸಹ ಖಜಾಂಚಿ ಬಾಲ ಶಿವನಾಯಕ, ವಿದ್ಯಾರ್ಥಿ ಘಟಕದ ಅಧ್ಯಕ್ಷ ಆಕಾಶ, ಜಿಲ್ಲಾ ಪ್ರ.ಸುಶೀಲಕುಮಾರ ಎಚ್., ಕಾರ್ಯದರ್ಶಿ ಭೋಲಾ, ತಾ. ಪ್ರಧಾನ ಆನಂತ ಮಾಳಗೆ, ತಾ ಉಪಾಧ್ಯಕ್ಷ ಸಿದ್ದಾರ್ಥ ಜಾನವೀರ, ಸಹ ಕಾರ್ಯದರ್ಶಿ

ವಿಶಾಲ ಸರಧನಕೇರಾ, ದಶರಥ ದಾಂಡೇಕರ, ತಾ. ಖಜಾಂಚಿ ನತಮ ಜಾನವೀರ, ಸಹ ಕಾರ್ಯದರ್ಶಿ ವಿಶಾಲ ಸರಧನಕೇರಾ, ಖಾಜಾಂಚಿ ಗೌತ್ತಮ ಜಾನವೀರ ಉಪಸ್ಥಿತರಿದ್ದರು.

# ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಕೃಷಿ ವಿಜ್ಞಾನಿಗಳ ತಂಡ ಭೇಟಿ



**ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ರಾಯಚೂರು ತಾಲ್ಲೂಕಿನ ದುಗನೂರಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚಿಗೆ ಕೃಷಿ ವಿಜ್ಞಾನಿಗಳ ತಂಡ ಭೇಟಿ ನೀಡಿ, ಮಕ್ಕಳಿಗೆ ಪೌಷ್ಟಿಕ ತೋಟದ ಮಹತ್ವದ ಕುರಿತು ಬೇಸಾಯಿ ಶಾಸ್ತ್ರ ವಿಭಾಗದ ವಿಜ್ಞಾನಿ ಡಾ.ಮಲ್ಲರೆಡ್ಡಿ ಅವರು ತಿಳಿಸಿದರು.

ಮನುಷ್ಯನ ಜೀವನಕ್ಕೆ ಬಹಳ ಮುಖ್ಯವಾದುದ್ದು, ಆರೋಗ್ಯ ಇದರ ರಕ್ಷಣೆ ಪೌಷ್ಟಿಕ ಆಹಾರದಿಂದ ಸಾದ್ಯ ಹಾಗಾಗಿ ಪೌಷ್ಟಿಕ ತೋಟ ಬೆಳಸುವುದು ಬಹಳ ಪ್ರಮುಖವಾಗಿದೆ.

ಈ ವೇಳೆ ಹಿರಿಯ ಕೃಷಿ ವಿಜ್ಞಾನಿಗಳಾದ ಡಾ.ಹೇಮಲತಾ ಅವರು ಮಕ್ಕಳಿಗೆ ತೋಟದ ತಯಾರಿ ಹೇಗೆ

ಮಾಡಿಕೊಳ್ಳಬೇಕು ಎಂದು ಪ್ರಾತ್ಯಕ್ಷೆಯನ್ನು ಮಾಡಿ ಮಾರ್ಗದರ್ಶನ ಮಾಡಿದರು.

ಈ ವೇಳೆ ಕೀಟಶಾಸ್ತ್ರದ ವಿಜ್ಞಾನಿಗಳಾದ ಡಾ.ಶ್ರೀವಾಣಿ ಅವರು ಕೀಟಗಳ ಕುರಿತು ಅದರಲ್ಲಿ ವಿಶೇಷವಾಗಿ ಜೇನಿನ ಹುಳುಗಳ ಮಾಹಿತಿಯನ್ನು ನೀಡಿ ಮಕ್ಕಳಿಗೆ, ಮಕರಂದ ಎಲ್ಲಿ ಇರುತ್ತೆ, ಜೇನು ನೊಣ ಮಕರಂದವನ್ನು ಯಾವ ವಿಧದಲ್ಲಿ ಹುಡುಕುತ್ತವೆ ಎಂದು ಚಟುವಟಿಕೆ ಮೂಲಕ ವಿವರಿಸಿದರು.

ಈ ವೇಳೆ ಆಹಾರ ಸಂಸ್ಕರಣೆ ವಿಭಾಗದ ವಿಜ್ಞಾನಿಗಳಾದ ಡಾ.ವೀಣಾ ಅವರು ಶುದ್ಧ ಮತ್ತು ಸಂಸ್ಕರಣೆಯ ಆಹಾರ ನಿತ್ಯ ಜೀವನಕ್ಕೆ ಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಶಾಲೆಯ ಮುಖ್ಯಗುರುಗಳಾದ ಗಫೂರ್, ಸಹಶಿಕ್ಷಕರಾದ ಚಂದ್ರಶೇಖರ್ ನಾಯ್ಕ್. ಸಂಪತರಾಜ್,ಪುಲಿ ಅಂಜಿನೇಯ್ಯ, ಮಲ್ಲೇಶ, ನರೇಶ ಕುಮಾರ್, ನವೀನ್ ಕುಮಾತ್, ಮಹೇಶ ಕುಮಾರ್ ಸೇರಿದಂತೆ ಇತರರು ಇದ್ದರು.

# ಸಾಧಕ ಬಾದಕ ಸಂವಾದ

ಕಲಬುರಗಿ: ಕಲಬುರಗಿಯ ಆಕಾಶವಾಣಿ ಮತ್ತು ದೂರ ದರ್ಶನ ಡಿಡಿ1 ಕೇಂದ್ರಕ್ಕೆ ದ ಕ್ಷಿಣ ಭಾರತ ವಲಯದ ಹೆ ಚ್ಚುವರಿ ಮಹಾ ನಿರ್ದೇಶಕ ಭಾಗ್ಯವಾ ನ್ ಅವರು ಶನಿವಾರ ರಂದು ದಿಢೀರನೆ ಎರ ಡು ಕೇಂದ್ರಗಳಿಗೆ ಭೇಟಿಕೊ ಟ್ಟು ಕಾರ್ಯ ಚಟುವಟಿಕೆಗಳ,ಸ್ಟುಡಿಯೋ ವ್ಯವಸ್ಥೆಯ ಬಗ್ಗೆ ಪರಿಶೀಲಿಸಿ ನೋಡಿದರು.

ಕರ್ನಾಟಕ ಜಾನವಪದ ಪರಿಷತ್ತು ಆಕಾಶವಾಣಿಯ ಸಂವಾದದಲ್ಲಿ ಜಿಲ್ಲಾಧ್ಯಕ್ಷ ಸಿ.ಎಸ್.ಮಾಲಿ ಪಾಟೀಲ ಮಾತನಾಡುತ್ತಾ ಕಲಬುರಗಿಯ ಆಕಾಶ ವಾಣಿ ಹಾಗೂ ದೂರದರ್ಶ ನ ಡಿಡಿ1ಈ ಎರಡು ಕೇಂದ್ರ ಗಳು ನಮ್ಮಕಲ್ಯಾಣ ಕರ್ನಾ ಟಕ ಭಾಗದ ಜನರ ಜೀವ ನಾಡಿಯಾಗಿ,ಜನರ ಎರಡು ಕಣ್ಣುಗಳಂತಿದ್ದು,ಇಲ್ಲಿಯವರೆಗೆ ಉತ್ತಮವಾದ ಕೆಲಸಗಳು ಮಾಡಿ,ಈ ಭಾಗಕ್ಕೆ ದೊಡ್ಡ ಕೊಡುಗೆಯಾಗಿರುವ, ಕೇಂದ್ರಗಳು ಸುಮಾರು 2021ರಲ್ಲಿ ಕೇಂದ್ರದ ಆದೇಶ ದಂತೆ ದೂರದರ್ಶನ ಮುಚ್ಚ ಲಾಗುವುದು ಎಂಬ ಹೇಳಿಕೆಯಿಂದ ನಾವು ಹೋರಾಟಕ್ಕಿಳಿದು ಪುನರ ಪ್ರಾರಂಭವಾಗಲು ಸಾಧ್ಯವಾಯಿತು ಎನ್ನುತ್ತಾರೆ, ಈ ಕೇಂದ್ರಗಳು ಇನ್ನೂ ಗುಣಮಟ್ಟದ ಸಲಕರ ಣೆಗಳ ಬಳಕೆ ಕಾರ್ಯಕ್ರಮ ಗಳ ಜೊತೆಗೆ ನೇಮಕಾತಿಗಳು ನಡೆಯಬೇಕಾಗಿದೆ ಎಂದರು.

ಹಿರಿಯ ಸಾಹಿತಿ ಡಾ. ಸ್ವಾಮಿರಾವ ಕುಲರ್ಣಿಯವರು ಮಾತನಾಡುತ್ತಾ ,ಈಕೇಂ ದ್ರಗಳು ಜ್ಞಾನಾರ್ಜನೆಯ ಜೊತೆಗೆ ಕೃಷಿ ಸಾಂಸ್ಕೃತಿಕ ವಾದ ಕೆಲಸಗಳಿಂದ ಈ ಭಾ ಗದ ಜನರಿಗೆ ತೃಪ್ತಿ ನೀಡಿದ ಕೇಂದ್ರಗಳಾಗಿವೆ ಎಂದರು.ಸಿದ್ಧಲಿಂಗೇಸ್ವರ ಪುಸ್ತಕ ಪ್ರ ಕಾಶನದ ಅಧ್ಯಕ್ಷ ಡಾ. ಬಸವರಾಜ ಕೊನೇಕವರು ಮಾತನಾಡಿ,ನಾವು ಚಿಕ್ಷವರಿ ದ್ದಾಗಲಿಂದ ರೇಡಿಯೋ, ದೂರದರ್ಶನದ ಕಾರ್ಯಕ್ರ ಮಗಳು ನೋಡುತ್ತಾ ಬೆಳೆದ ವರು ಈಗ ಪ್ರಸಾರವಾಗುವ ಹೊಸ ಓದು ಕಾರ್ಯಕ್ರಮ ಕ್ಕೆಅನುದಾನ ರೂಪದಲ್ಲಿ ಹ ಣ ಕೊಡುತ್ತಿದ್ದೇವೆ ಎಂದರು.

ನಿಕಟಪೂರ್ವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರು,ಪತ್ರಕರ್ತರಾದ ಮಹಿಪಾಲರಡ್ಡಿಮುನ್ನೂರು ಮಾತನಾಡುತ್ತಾ,ಕರ್ನಾಟಕದಲ್ಲಿಯೇ ಮೊಟ್ಟಮೊದಲು ಕಲ ಬುರಗಿ ಜಲ್ಲೆಗೆ ಈ ಕೇಂದ್ರಗ ಳು ಅನುಮತಿ ನೀಡಿರುವು ದೇಕೆ?ಈಗ ಕಸಿದುಕೊಳ್ಳು ವುದೇಕೆ?ಇವು ನಮ್ಮ ಬದು ಕಿನ ಅವಿಭಾಜ್ಯ ಅಂಗವಾಗಿ ಉಳಿದಿವೆ,ಈ ಹೋರಾಟದ ರೂವಾರಿ ಸಿ.ಎಸ್.ಮಾಲಿ ಪಾಟೀರ ಜೊತೆ-ಗೂಡಿ ಉಗ್ರ ವಾದ ಪ್ರತಿಭಟನೆ ಮಾಡಬೇಕಾಗಿದೆ ಎಂದರು.ಕಲಬುರಗಿಯ ಚೇಂಬರ್ ಆಫ್ ಕಾಮ ರ್ಸ್ ನ ಅಧ್ಯಕ್ಷ ಶರ ರಣು ಪಪ್ಪಾ ಅವರು ಮಾತ ನಾಡಿ ನಾವು ಚಿಕ್ಕಂದಿನಿಂದ ಲೂ ಈ ಎರಡು ಕೇಂದ್ರಗಳು ನಮ್ಮ ಬದುಕಿಗೆ ಆಧಾರಸ್ತಂ ಭಗಳಾಗಿವೆ.ಇವುಗಳನ್ನು ನಾವು ಯಾವುದೇ ಕಾರಣಕ್ಕೆ ಬಿಟ್ಟುಕೊಡುವುದಿಲ್ಲ.ಮಾಲಿಪಾಟೀಲರೊಂದಿಗೆ ನಾವೆಲ್ಲರೂ ಹೋರಾಟಕ್ಕಿಳಿದು ಇ ವು ಉಳಿಸಿಕೊಳ್ಳುವವರೆಗೆ ಹೋರಾಡುತ್ತೇವೆ ಎಂದರು.

# ವಿವಿಧ ಯೋಜನೆಯಡಿ ಅರ್ಜಿ ಅವಧಿ ವಿಸ್ತರಣೆ

ಯಾದಗಿರಿ:ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆ ಸೌಲಭ್ಯ ಪಡೆಯಲು ಆನ್‌ಲೈನ್ ಅರ್ಜಿ ಅವಧಿ ವಿಸ್ತರಿಸಿದೆ ಎಂದು ಯಾದಗಿರಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಜಿಲ್ಲಾ ವ್ಯವಸ್ಥಾಪಕರು ಸಂತೋಷಭರತನೂರ ಅವರು ತಿಳಿಸಿದ್ದಾರೆ. ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮ 2025-26ನೇ ಸಾಲಿನ ಅನುಷ್ಠಾನಗೊಳಿಸುತ್ತಿರುವ ಈ ಯೋಜನೆಗಳಡಿಯಲ್ಲಿ ಸಾಲಸೌಲಭ್ಯ ಪಡೆಯಲು ಕ್ರಿಶ್ಚಿಯನ್ ಸಮುದಾಯ ಜನಾಂಗದವರಿಂದ ಅರಿವು ವಿದ್ಯಾಭ್ಯಾಸ ಸಾಲ ಯೋಜನೆ, ವಿದೇಶಿ ವ್ಯಾಸಾಂಗಕ್ಕೆ ಸಾಲ ಯೋಜನೆ, ಸ್ವಾವಲಂಭಿ ಸಾರಥಿ ಯೋಜನೆ, ಶ್ರಮಶಕ್ತಿ ಯೋಜನೆ, ಶ್ರಮಶಕ್ತಿ ವಿಶೇಷ ಮಹಿಳಾ ಯೋಜನೆ, ವೃತ್ತಿಪ್ರೋತ್ಸಾಹ ಯೋಜನೆ,ಗಂಗಾ ಕಲ್ಯಾಣ ಯೋಜನೆ, ವ್ಯಾಪಾರ ಉದ್ದಿಮೆ,

ನೇರಸಾಲ ಯೋಜನೆ,ಕ್ರಿಶ್ಚಿಯನ್ ಸಮುದಾಯದ ಮಹಿಳಾ ಸ್ವ-ಸಹಾಯ, ಗುಂಪುಗಳಿಗೆ ಸಹಾಯಧನ ಯೋಜನೆ,ಸಮುದಾಯ ಆಧಾರಿತ ಕೌಶಲ್ಯ ಅಭಿವೃದ್ಧಿ ತರಬೇತಿ ಯೋಜನೆ ಅರ್ಜಿಗಳನ್ನು ಆನ್‌ಲೈನ್ kccdconline.karnataka.gov.in ನಲ್ಲಿ 2025ರ ಡಿಸೆಂಬರ್ 20ರ ವರೆಗೆ ವಿಸ್ತರಿಸಿದೆ. ಹೆಚ್ಚಿನ ಮಾಹಿತಿಗಾಗಿ ಯಾದಗಿರ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಜಿಲ್ಲಾ ಕಛೇರಿಗೆ (ರಜಾದಿನವನ್ನು ಹೊರತು ಪಡಿಸಿ) ಭೇಟಿ ನೀಡಬೇಕು,

ದೂರವಾಣಿ ಸಂ.08473253785, ಇಲಾಖೆಯ ಸಹಾಯವಾಣಿ ಸಂ.8277799990ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗುರಿ ತಲುಪಲು ಸತತ ಪ್ರಯತ್ನ ಅವಶ್ಯಕ

ಕಲಬುರಗಿ : ವಿದ್ಯಾರ್ಥಿಗಳು ಗುರಿ ತಲುಪಲು ಸತತ ಓದಿನ ಪ್ರಯತ್ನ ಹಾಗೂ ಕಠಿಣ ಪರಿಶ್ರಮ ಅಗತ್ಯವಿದೆ ಎಂದು ಕೆಪಿಸಿಸಿ ಉಪಾಧ್ಯಕ್ಷ ಸುಭಾಸ್ ರಾಥೋಡ್ ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ದಿಶಾ ವಿಜ್ಞಾನ ಪದವಿ ಪೂರ್ವ ಕಾಲೇಜು ಇವುಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಕನ್ನಡ ರಸಪ್ರಶ್ನೆ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು ನಮ್ಮ ಆಲೋಚನೆಗಳು ವ್ಯಕ್ತಿತ್ವರೂಪಿಸುತ್ತವೆ ಹೀಗಾಗಿ ಸಕಾರಾತ್ಮಕ ಮತ್ತು ಸಾಧನೆಮುಖಿ ಚಿಂತನೆಗಳನ್ನು ಮೈಗೂಡಿಸುವ ಮೂಲಕ ಸಾಧನೆ ಮಾಡಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮಕ್ಕಳಿಗೆ ಮೊದಲು ಮನೆ ನಂತರ ಶಾಲೆ ಶಿಕ್ಷಣವನ್ನು ನೀಡತಕ್ಕಂಥ ಎರಡು ಫ್ಯಾಕ್ಟರಿಗಳು. ಮೊದಲು ತಂದೆ ತಾಯಿಗಳು ಅಕ್ಷರದ ಜ್ಞಾನವನ್ನು ನೀಡಿದರೆ ನಂತರ ಶಿಕ್ಷಕರು ಶಿಕ್ಷಿತರನ್ನಾಗಿ ಮಾಡುತ್ತಾರೆ ಹೀಗಾಗಿ ವಿದ್ಯಾರ್ಥಿಗಳು ಇಲ್ಲಿ ಸಿದ್ಧತೆಯಾಗುತ್ತಾರೆ. ಉತ್ತಮ ಜ್ಞಾನ ಪಡೆಯುವ ಮೂಲಕ ಮಾದರಿಯಾಗಿ ಬೆಳೆಯಬೇಕು ಎಂದು ಸ್ವಾಮಿ ವಿವೇಕಾನಂದರು, ಮಹಾತ್ಮಾ ಗಾಂಧೀಜಿ, ಡಾ. ಬಿ ಆರ್ ಅಂಬೇಡ್ಕರ್ , ಸರ್ ಎಂ ವಿಶ್ವೇಶ್ವರಯ್ಯ,ಡಾ. ಅಬ್ದುಲ್ ಕಲಾಂ ಅವರು ಜ್ಞಾನದಿಂದಲೇ ನಾಯಕರಾಗಿದ್ದಾರೆ. ಜ್ಞಾನಕ್ಕಿರುವ ಶಕ್ತಿ ಬೇರೆ ಯಾವುದಕ್ಕೂ ಇಲ್ಲ. ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ಅಧ್ಯಯನ ಮಾಡಿ ಐಎಎಸ್, ಐಪಿಎಸ್ ಅಧಿಕಾರಗಳಾಗಬೇಕು ಇಲ್ಲವೇ ವೈದ್ಯರು , ಇಂಜಿನಿಯರ್ ಆಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಸಂಚಾಲಕರಾದ ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯ ಬಿ. ಎಚ್. ನಿರಗುಡಿ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿ ಅನೇಕ ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ಪುಸ್ತಕ ಓದುವ ಹವ್ಯಾಸವನ್ನು ಬೆಳೆಸುವ ಕಾರ್ಯಕ್ರಮಗಳನ್ನು ಮಾಡುತ್ತಿದ್ದು.ಮುಂದಿನ ದಿನಗಳಲ್ಲಿ ಪ್ರಾಧಿಕಾರದಿಂದ ಜಿಲ್ಲೆಯ 25 ಶಾಲಾ ಕಾಲೇಜುಗಳಿಗೆ ಉಚಿತವಾಗಿ ಕನ್ನಡ ಪುಸ್ತಕ ಪ್ರಾಧಿಕಾರ ಪುಸ್ತಕ ಕೊಡುವ ಯೋಜನೆಯನ್ನು ಹಾಕಿಕೊಂಡಿದೆ ಎಂದು ತಿಳಿಸಿದರು. ಶಿವಾನಂದ್ ಖಜೂರ್ಗಿ ಅವರು ವಿದ್ಯಾರ್ಥಿಗಳಿಗೆ ಓದಲು ಪ್ರೇರಣೆ ನೀಡಿ. ರಸ ಪ್ರಶ್ನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಬಹುಮಾನ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದಿಸಿ ಮಾತನಾಡಿದರು. ಮಹಿಳಾ ಸರ್ಕಾರಿ ಪಿಯು ಕಾಲೇಜಿನ ಉಪನ್ಯಾಸಕ ವಿಜಯಕುಮಾರ್ ರೋಣದ ಕನ್ನಡ ನಾಡು ನುಡಿ ಕುರಿತು ವಿಶೇಷ ಉಪನ್ಯಾಸ ನೀಡಿದರು. ಪದವಿ ಪೂರ್ವ ಕಾಲೇಜು ಪ್ರಾಚಾರ್ಯರ ಸಂಘದ ಅಧ್ಯಕ್ಷರಾದ ಬಸವರಾಜ್ ಬಿರಾಜದಾರ ಹಾಗೂ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಬಾಬುರಾವ ಯಡ್ರಾಮಿ,ಕಾಲೇಜಿನ ಪ್ರಾಚಾರ್ಯ ಡಾ. ಸಂತೋಷ್ ಜಕಾಪೂರೆ ವೇದಿಕೆ ಮೇಲೆ ಉಪಸ್ಥಿತರಿದ್ದರು.

# ಜಿಲ್ಲಾ ತಾಲೂಕು ಮಟ್ಟದ ಅಧಿಕಾರಿಗಳಿಗೆ ತರಬೇತಿಗೆ ಸೂಚನೆ

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :**

ಕೋಟ್ಪಾ ಕಾಯ್ದೆ 2003ರ ಪರಿಣಾಮಗಾರಿ ಅನುಷ್ಠಾನ, ಸಾಮರ್ಥ್ಯಭಿವೃದ್ಧಿ ಮತ್ತು ಮೇಲ್ವಿಚಾರಣೆ ಕುರಿತು ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳ ಒಂದು ದಿನದ ತರಬೇತಿಯನ್ನು ಯಾದಗಿರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಭಾಂಗಣದಲ್ಲಿ 2025ರ ಡಿಸೆಂಬರ್ 17 ರಂದು ಬೆಳಿಗ್ಗೆ 10.30 ಗಂಟೆಗೆ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಕಾರ್ಯಕ್ರಮ ಅಧಿಕಾರಿ ಅವರು ತಿಳಿಸಿದ್ದಾರೆ.

ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಯಾದಗಿರಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶ ವತಿಯಿಂದ ಕೋಟ್ಪಾ ಕಾಯ್ದೆ 2003ರ ಪರಿಣಾಮಗಾರಿ ಅನುಷ್ಠಾನ, ಸಮರ್ಥ್ಯಭಿವೃದ್ಧಿ ಮತ್ತು ಮೇಲ್ವಿಚಾರಣೆ ಕುರಿತು ಅಂದು ಕಾರ್ಯಕ್ರಮವನ್ನು ಏರ್ಪಡಿಸಿದ್ದು, ಪ್ರಯುಕ್ತ ಈ ತರಬೇತಿ ಕಾರ್ಯಕ್ರಮಕ್ಕೆ ಈ ಕೆಳಕಂಡ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ತಪ್ಪದೇ ಹಾಜರಾಗಬೇಕು.

ಆರೋಗ್ಯ ಇಲಾಖೆ ಯಾದಗಿರಿ, ಶಹಾಪೂರ, ಸುರಪುರ ತಾಲೂಕು ಆರೋಗ್ಯ ಅಧಿಕಾರಿಗಳು. ಶಿಕ್ಷಣ ಇಲಾಖೆ ಯಾದಗಿರಿ, ಶಹಾಪೂರ, ಸುರಪುರ ಕ್ಷೇತ್ರ ಶಿಕ್ಷಣಾಧಿಕಾರಿಗಳು. ಆರೋಗ್ಯ ಇಲಾಖೆ ತಾಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು. ಕಾರ್ಮಿಕ ಇಲಾಖೆ ಯಾದಗಿರಿ, ಶಹಾಪೂರ, ಸುರಪುರ ಕಾರ್ಮಿಕ ನಿರೀಕ್ಷಕರು. ಕಾರ್ಮಿಕ ಇಲಾಖೆ ಯಾದಗಿರಿ ಕಾರ್ಮಿಕ ಇಲಾಖೆ ಯೋಜನಾ ನಿರ್ದೇಶಕರು. ಆಹಾರ ಇಲಾಖೆ ಯಾದಗಿರಿ, ಶಹಾಪೂರ, ಸುರಪುರ ಆಹಾರ ಮತ್ತು ಸುರಕ್ಷತಾ ಅಧಿಕಾರಿಗಳು. ಕೆ.ಕೆ.ಆರ್.ಟಿ.ಸಿ ಯಾದಗಿರಿ ಕಾರ್ಮಿಕ ಕಲ್ಯಾಣಾಧಿಕಾರಿಗಳು. ಆರೋಗ್ಯ ಇಲಾಖೆ ಯಾದಗಿರಿ, ಶಹಾಪೂರ, ಸುರಪುರ ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿಗಳು. ಜಿಲ್ಲಾ ನಗರಾಭಿವೃದ್ಧಿ ಕೋಶ ಯಾದಗಿರಿ, ಶಹಾಪೂರ, ಸುರಪುರ ಹಿರಿಯ ಮತ್ತು ಕಿರಿಯ ಆರೋಗ್ಯ ನಿರೀಕ್ಷಕರು. ಪೊಲೀಸ್ ಇಲಾಖೆ ಯಾದಗಿರಿ ನಗರ ಪೊಲೀಸ್ ಠಾಣೆ ಆರಕ್ಷಕ ನಿರೀಕ್ಷಕರು. ಆರೋಗ್ಯ ಇಲಾಖೆ ಯಾದಗಿರಿ, ಶಹಾಪೂರ, ಸುರಪುರ ತಾಲೂಕ ಆರೋಗ್ಯ ಶಿಕ್ಷಣಾಧಿಕಾರಿಗಳು. ಶಿಕ್ಷಣ ಇಲಾಖೆ ಯಾದಗಿರಿ, ಶಹಾಪೂರ, ಸುರಪುರ ಕ್ಷೇತ್ರ ಸಂಪನ್ಮೂಲ ಅಧಿಕಾರಿಗಳು. ಯಾದಗಿರಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕರು ಕಛೇರಿ, ಸಹಾಯಕ ನಿರ್ದೇಶಕರು. ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಯಾದಗಿರಿ ಮಕ್ಕಳ ಸಂರಕ್ಷಣಾ ಅಧಿಕಾರಿಗಳಿಗೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳ ಒಂದು ದಿನದ ತರಬೇತಿ ನೀಡಲಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ: ನಗರದ ತಾರಫೈಲ್ ಬಡಾವಣೆಯಲ್ಲಿ ಕಲಬುರಗಿ ಪೋಲಿಸ್ ಸ್ಟೇಷನ್ ಬಜಾರ ಠಾಣೆ ವತಿಯಿಂದ ಅಪರಾದ ತಡೆ ಮಾಸಾಚರಣೆ ಕಾರ್ಯಕ್ರಮ ಜರುಗಿತು. ಈ ಸಂದರ್ಭದಲ್ಲಿ ಎಸಿಪಿ ಶರಣಬಸಪ್ಪ ಸುಬೇದಾರ, ಸಿಪಿಐ ಗುಲಿಂಗಪ್ಪಗೌಡ ಪಾಟೀಲ, ಬಡಾವಣೆಯ ಮುಖಂಡರಾದ ಲಿಂಗರಾಜ ತಾರಫೈಲ್, ಮಲ್ಲಿಕಾರ್ಜುನ ಜಿನಕೇರಿ, ಬಂಡೇಶ ರತ್ನಡಗಿ, ಹಣಮಂತ ತುಮಕೂರ ಸೇರಿದಂತೆ ಇತರರು ಇದ್ದರು.

# ಮೀನುಗಾರಿಕೆ: ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

2025-26ನೇ ಸಾಲಿನ ಕೇಂದ್ರ ವಲಯದ ಪಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ ಅಡಿ ಈ ಕೆಳಕಂಡ ಉಪಯೋಜನಗಳಿಗೆ ಸ್ವಂತ ಜಮೀನಿನಲ್ಲಿ ಮೀನುಕೊಳ ನಿರ್ಮಿಸುವುದು, ಮೋಟಾರು ದೋಣಿ ಸರಬರಾಜು, ಜೀವಂತ ಮೀನು ಮಾರಾಟ ಕೇಂದ್ರ. ಅರ್ಹ ಮೀನುಗಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕರು ಜಿಲ್ಲಾ ಪಂಚಾಯತ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಆಸಕ್ತ ಸಂಬಂಧಪಟ್ಟ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕ ಕಚೇರಿಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಡಿಸೆಂಬರ್ 30 ಇರುತ್ತದೆ. ಅರ್ಹ ಮೀನುಗಾರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಘಟಕಗಳ ಸಂಖ್ಯೆ ಹಾಗೂ ವರ್ಗವಾರು ಮಾಹಿತಿಯನ್ನು ಈ ಕಚೇರಿಯಿಂದ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶರು, ಕಲಬುರಗಿ/ಚಿಂಚೋಳಿ ಇವರನ್ನು ಸಂಪರ್ಕಿಸುವುದು ಅರ್ಜಿದಾರರು ತಾಲೂಕಿನ ಮೀನುಗಾರಿಕೆಯ ಕಛೇರಿಗೆ ಇದೇ 2025ರ ಡಿಸೆಂಬರ್ 30 ರೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕು, ಹೆಚ್ಚಿನ ಮಾಹಿತಿಗಾಗಿ, ದೂರವಾಣಿ ಸಂಖ್ಯೆ: 8861097281/8660789342 ಇವರಿಗೆ ಸಂಪರ್ಕಿಸಬಹುದು.

# ಕರ್ನಾಟಕ ಯುವ ಶಕ್ತಿ ರೈತರ ಮಕ್ಕಳ ಮಹಾಶಕ್ತಿ ಸಂಘಟನೆಯ ಪದಗ್ರಹಣ ಸಮಾರಂಭ




**ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ನಗರದ ಕನ್ನಡ ಭವನದಲ್ಲಿ ಕರ್ನಾಟಕ ಯುವ ಶಕ್ತಿ ರೈತರ ಮಕ್ಕಳ ಮಹಾಶಕ್ತಿ ಸಂಘಟನೆಯ "ಪದಗ್ರಹಣ"ಸಮಾರಂಭವನ್ನು ಮಣ್ಣೂರ ಆಸ್ಪತ್ರೆಯ ಮುಖ್ಯಸ್ಥ ಡಾ. ಫಾರೂಕ್ ಮಣ್ಣೂರ ಅವರು ಉದ್ಘಾಟಿಸಿದರು.

ಪೂಜ್ಯ ಶ್ರೀ ಧ್ಯಾನರತ್ನ ಚಿದಾನಂದ ಸ್ವಾಮೀಜಿ, ಪೂಜ್ಯಶ್ರೀ ಸಂಗಮೇಶ ಸ್ವಾಮಿಜಿ, ಸಾಹಿತಿ ಹಾಗೂ ಯುವ ಬರಹಗಾರ ಎಂ.ಕೆ.ಮರತೂರಕರ್, ವಕೀಲ ಶಿವಕುಮಾರ ಹುಜರಾತಿ, ಕಲ್ಯಾಣ ಕರ್ನಾಟಕ ಮುಖ್ಯ ಸಂಚಾಲಕ ಅಂಬರೀಷ್ ಜೋಗಿ, ಸಮಾರಂಭದ ಅಧ್ಯಕ್ಷತೆ ಕರ್ನಾಟಕ ಯುವ ಶಕ್ತಿ ಸಂಘಟನೆ, ರಾಜ್ಯಾಧ್ಯಕ್ಷ ಅವ್ವಣಗೌಡ ಎನ್ ಪಾಟೀಲ್, ಜಿಲ್ಲಾ ಅಧ್ಯಕ್ಷ ಶಿವಕುಮಾರ ಸಾಗರ್, ಮಹಿಳಾ ಜಿಲ್ಲಾ ಅಧ್ಯಕ್ಷೆ ಅನುರಾಧಾ ಟಿ.ಕಟ್ಟಿಮನಿ, ಜಿಲ್ಲಾ ಮಹಿಳಾ ಕಾರ್ಯದರ್ಶಿ ನಾಗರತ್ನ ಕಡಿಮನಿ, ಜಿಲ್ಲಾ ಗೌರವಾಧ್ಯಕ್ಷ ನೀಲಕಂಠರಾವ ಬಿರಾದಾರ, ಜೇವರ್ಗಿ ತಾಲೂಕ ಅಧ್ಯಕ್ಷ ಬಿ.ಸಿ.ಪಾಟೀಲ್, ಯಡ್ರಾಮಿ ತಾಲೂಕ ಅಧ್ಯಕ್ಷ ಭಗವಂತರಾಯ ಮುದಗಲ್, ಕಲ್ಯಾಣ ಕರ್ನಾಟಕ ಸಂಘಟನಾ ಕಾರ್ಯದರ್ಶಿ ನಯುಮ್ ಪಟೇಲ್ ಶಾಹಾಪೂರ, ಚಿಂಚೋಳಿ ತಾಲೂಕ ಮಹಿಳಾ ಅಧ್ಯಕ್ಷೆ ರತ್ನಮ್ಮ ಪಾಟೀಲ್, ಕಾಳಗಿ, ಮಹಿಳಾ ಅಧ್ಯಕ್ಷೆ ಪ್ರೀಯಾಂಕಾ ಪಾಟೀಲ್, ದಕ್ಷಿಣ ಮತಕ್ಷೇತ್ರದ ಅಧ್ಯಕ್ಷ ಹುಲಿಕಂಠ ಹೇರೂರ, ಅಫಜಲಪೂರ ಸಾಮಾಜಿಕ ಜಾಲತಾಣದ ಅಧ್ಯಕ್ಷ ಆನಂದ್ ಪಾಟೀಲ್, ಜಿಲ್ಲಾ ಸಹ ಸಂಚಾಲಕ ಶರಣು ನೀಲೂರ್, ತಾಲೂಕ ಉಪಾಧ್ಯಕ್ಷ ನಿಂಗು ಕೇರಳ್ಳಿ, ಜೇವರ್ಗಿ ಉಪಾಧ್ಯಕ್ಷ ಹಣಮಂತರಾಯ ಅಪ್ಪೋಜಿ ಇದ್ದರು. ವಿವಿಧ ಘಟಕಗಳ ಅಧ್ಯಕ್ಷರು ಪದಗ್ರಹಣ ಮಾಡಿದರು, ಅನೇಕ ಸಂಘಟನೆಯ ಹೊಬಳಿ ಮತ್ತು ಗ್ರಾಮ ಘಟಕದ ಅಧ್ಯಕ್ಷರು, ಮುಖಂಡರು ಕಾರ್ಯಕರ್ತರು ಉಪಸ್ಥಿತರಿದ್ದರು.

# ಬಾಡಗಿ ಸಮ್ಮೇಳನದ ಪ್ರಚಾರ ಸಾಮಗ್ರಿ ಬಿಡುಗಡೆ

## ಜಾನಪದ ಕಲೆಗಳು ಘಮಘಮಿಸುವ ಸುಮಗಳು: ಬಕ್ಕಯ್ಯ ಸ್ವಾಮೀಜಿ



**ಮಲ್ಲಮ್ಮ ನುಡಿ ಬಾಗಲಕೋಟೆ:**

ಹಲವಾರು ವಿಶೇಷತೆಗಳಿಗೆ ಹೆಸರಾದ ಕೃಷ್ಣಾ ನದಿ ತೀರದ 12ನೇ ಶತಮಾನದ ಶಿವಶರಣರಾದ ಬಕ್ಕೇಶ್ವರರು ನಡೆದಾಡಿದ ಪುಣ್ಯಭೂಮಿಯಲ್ಲಿ ಕನ್ನಡ ಜಾನಪದ ಸಮ್ಮೇಳನ ಜರುಗುತ್ತಿರುವುದು ಸಂತೋಷವನ್ನುಂಟು ಮಾಡಿದೆ. ಸಮ್ಮೇಳನ ಅತ್ಯಂತ ಅಚ್ಚುಕಟ್ಟಾಗಿ ಯಶಸ್ವಿಯಾಗಿ ನಡೆಯಲಿದೆ ಎಂದು ಬಕ್ಕೇಶ್ವರ ಮಠದ ಬಕ್ಕಯ್ಯ ಮಹಾಸ್ವಾಮಿಗಳು ಹೇಳಿದರು.

ಜಿಲ್ಲೆಯ ಬೀಳಗಿ ತಾಲೂಕಿನ ಬಾಡಗಿ ಗ್ರಾಮದಲ್ಲಿ ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕ, ತಾಲೂಕು ಘಟಕ, ಮಹಿಳಾ ತಾಲೂಕು ಘಟಕ, ವಲಯ ಘಟಕ ಬಾಡಗಿ ಹಾಗೂ ಬಾಡಗಿ ಗ್ರಾಮಸ್ಥರ ಸಹಯೋಗದಲ್ಲಿ ಡಿಸೆಂಬರ್ 19 ರಂದು ಜರುಗಲಿರುವ ಬೀಳಗಿ ತಾಲೂಕು ಪ್ರಥಮ ಕನ್ನಡ ಜಾನಪದ ಸಮ್ಮೇಳನದ ಲಾಂಛನ ಮತ್ತು ಪ್ರಚಾರ ಸಾಮಗ್ರಿಗಳ ಬಿಡುಗಡೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ.ಸಾವಕಾರ ಮಾತನಾಡಿ, ಕಲೆ, ಸಾಹಿತ್ಯ, ಸಂಸ್ಕೃತಿಯ ಬೇರು ಈ ಗ್ರಾಮದಲ್ಲಿರುವುದರಿಂದ ಕನ್ನಡ ಜಾನಪದ ಸಮ್ಮೇಳನವು ಅರ್ಥಪೂರ್ಣವಾಗಿ ಹಿರಿಯ ಜಾನಪದ ಕಲಾವಿದ ಮಂಡಲೀಕಪ್ಪ ಗಾಣಿಗೇರ ಸರ್ವಾಧ್ಯಕ್ಷತೆಯಲ್ಲಿ ಪಕ್ಷಾತೀತ, ಜಾತ್ಯಾತೀತ, ಧರ್ಮಾತೀತವಾಗಿ ನಡೆಯಲಿದೆ. ಸಮ್ಮೇಳನದ ಯಶಸ್ವಿಗೆ ಕಲೆ ಮತ್ತು ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಿರುವ ಶ್ರೀಮಠದ ಪೂಜ್ಯರು, ಗ್ರಾಮಸ್ಥರು ಶ್ರಮಿಸುತ್ತಿದ್ದಾರೆಂದು ಹೇಳಿದರು.

ಗ್ರಾಮೀಣ ಪರಿಸರದ ಜಾನಪದ ಕಲೆಗಳು ಇಂದಿನ ಟಿವಿ, ಸಿನಿಮಾ, ಡಿಜಿಟಲ್ ಮಾಧ್ಯಮಗಳ ನಡುವೆ ಸಿಲುಕಿ ಒಂದಿಷ್ಟು ಮರೆಯಾದಂತೆ ಕಂಡರೂ ಜಾನಪದ ಕಲೆಗಳು ಘಮಗುಟ್ಟುವ ಹೂವುಗಳಾಗಿ ನಮ್ಮನ್ನು ತಮ್ಮೆಡೆಗೆ ಸೆಳೆದುಕೊಳ್ಳುತ್ತಿವೆ. ಜಾನಪದ ಕಲೆಗಳನ್ನು ಉಳಿಸಿ ಬೆಳೆಸಿ ಅವು ಬಾಡದಂತೆ ಪೋಷಿಸುವ, ಕಲಾವಿದರಿಗೆ ವೇದಿಕೆ ಕಲ್ಪಿಸುವ ಹೊಣೆ ನಮ್ಮೆಲ್ಲರ ಮೇಲಿದೆ ಎಂದರು.ಬಕ್ಕೇಶ್ವರ ಮಠದ ಶಿವಾನಂದ ಸ್ವಾಮೀಜಿ, ಸಂಗಯ್ಯ ಸ್ವಾಮೀಜಿ, ಶಶಿಧರಶಾಸ್ತ್ರಿ ಹಿರೇಮಠ, ಬಸಯ್ಯಶಾಸ್ತ್ರಿ ಹಿರೇಮಠ, ಪ್ರಾಚಾರ್ಯ ಡಾ.ಎಸ್.ಕೆ.ಬಂಗಾರಿ, ಕಜಾಪ ತಾಲೂಕಾಧ್ಯಕ್ಷ ಬಸವರಾಜ ನಾಯ್ಕ, ಎಂ. ಎಂ. ಗೌಡನ್ನವರ, ಲಕ್ಷ್ಮಣ ಮೊಖಾಶಿ, ವಿಠ್ಠಲ ಕರಿಗಾರ, ಶಿವಪ್ಪ ಗುರಾಣಿ, ಲಕ್ಷ್ಮಣ ಕುಸ್ತಿ, ಸುರೇಶ ಜೀರ, ಹುಸೇನಸಾಬ ರಾಜಪಾಲೆ, ರವೀಂದ್ರ ಜೀರ, ಭೀಮಪ್ಪ ಅಗಸರ, ಶಕುಂತಲಾ ದೇಸಾಯಿ ಮತ್ತಿತರರು ಇದ್ದರು.

# ಜೂಜಾಟ: 8 ಜನರ ಬಂಧನ

**ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ತಾಲ್ಲೂಕಿನ ಸಿಂದಗಿ(ಬಿ) ಗ್ರಾಮದ ಹತ್ತಿರವಿರುವ ನಿರ್ಮಲಾಬಾಯಿ ಮಾಲಿಪಾಟೀಲ ಅವರ ಹೊಲದಲ್ಲಿ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಸಿಸಿಬಿ ಘಟಕದ ಎಸಿಪಿ ಜೇಮ್ಸ್ ಮಿನೇಜಸ್, ಸಿಬ್ಬಂದಿಗಳಾದ ಮೃತ್ಯುಂಜಯ, ಯಲ್ಲಪ್ಪ,

ಶಿವುಕುಮಾರ, ಅಶೋಕ ಕಟಕೆ ಮತ್ತು ನಾಗರಾಜ ಅವರು ದಾಳಿ ನಡೆಸಿ 8 ಜನರನ್ನು ಬಂಧಿಸಿದ್ದಾರೆ. ರೇವಣಸಿದ್ದಪ್ಪ ಆವಂಟಗಿ,

ಶರಣಬಸಪ್ಪ ಮಾಲಿಪಾಟೀಲ, ವಿಶಾಲ ಗೌಳಿ, ಶಿವಾನಂದ ಬಿರಾದಾರ,

ಈಶ್ವರಾಜ ಆವಂಟಗಿ, ಅಣವೀರಪ್ಪ ಮಾಲಿಪಾಟೀಲ, ವಿರೇಶ ಆವಂಟಗಿ ಮತ್ತು ಆನಂದ ಜಮದಾರಖಾನಿ ಎಂಬುವವರನ್ನು ಬಂಧಿಸಿ 20,500 ರೂ.ನಗದು, 52 ಇಸ್ಪಿಟ್ ಎಲೆಗಳನ್ನು ಜಪ್ತಿ ಮಾಡಿದ್ದಾರೆ. ಸಬ್-ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಶಾಮನೂರು ಶಿವಶಂಕರಪ್ಪ ನಿಧನ: ನುಡಿ ನಮನ




**ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**

ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸ ಆರು ಬಾರಿ ಶಾಸಕರಾಗಿದ್ದ ಶಾಮನೂರು ಶಿವಶಂಕರಪ್ಪ ದಾವಣಗೆರೆಗೆ ಅನ್ವರ್ಥನಾಮದಂತೆ ಇದ್ದರು. ಕೊಡುಗೈ ದಾನಿಯಾಗಿದ್ದ ಅವರು ಅಗಿದದು ಅತೀವ ನೋವುಂಟು ಮಾಡಿದೆ ಎಂದು ಮುಖ್ಯಶೀಕ್ಷಕ ಎಮ್.ಎಸ್.ಹಿರೇಮಠ ಹೇಳಿದರು.

ಪಟ್ಟಣದ ಶಾಸ್ತ್ರೀ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ನಡೆಯುತ್ತಿರುವ ಭಾಗಿರಥಿ ಪಬ್ಲಿಕ್ ಶಾಲೆಯಲ್ಲಿ ಹಿರಿಯ ಶಾಸಕ, ಅಖಿಲ ಭಾರತ ವೀರಶೈವಲಿಂಗಾಯತ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ವಯೋಸಹಜ ನಿಧನ ಹೊಂದಿದ್ದಕ್ಕೆ ಸೋಮವಾರ ಶಾಲೆಯಲ್ಲಿ ನಡೆದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಅವರು ನುಡಿ ನಮನ ಸಲ್ಲಿಸಿದರು.

ಅವರು ನಾಡು ಕಂಡ ಮಹಾನ್ ಶಿಕ್ಷಣ ಪ್ರೇಮಿ. ಅವರ ಸಾಮಾಜಿಕ ಕಾಳಜಿ ಸ್ತುತ್ಯರ್ಹವಾಗಿತ್ತು. ವೀರಶೈವ ಲಿಂಗಾಐತ ಸಮುದಾಯ ಒಗ್ಗೂಡಿಸುವ ಕನಸು ಕಂಡಿ-ದ್ದರು. ಅವರು ಲಿಂಗೈಕ್ಯರಾಗಿದ್ದು ನಾಡಿಗೆ ತುಂಬಲಾರದ ನಷ್ಟವಾಗಿದೆ ಎಂದರು.

ಶಿಕ್ಷಕ ಸಿಬ್ಬಂದಿ ಶ್ರೀದೇವಿ ಸೋನಕಾಂಬಳೆ, ದೀಪಮಾಲಾ ಸೂರ್ಯವಂಶಿ, ಸಂಗೀತಾ ಕಾಂಬಳೆ, ಅಂಬಿಕಾ ಗಾಯಕವಾಡ್, ಮೌನೇಶ್ವರಿ ಭೂರೆ, ಈಶ್ವರಿ, ಅಶ್ವಿನಿ, ಪಂಚಪುಲಾ ಹಾಗೂ ಮಕ್ಕಳು ಇದ್ದರು.

# ಕರ್ನಾಟಕ ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿ ಹೇಮಲೇಖ

## ವಿಶೇಷ ಚೇತನರ ಮನೆ ಬಾಗಿಲಿಗೆ ಬಂದು ನ್ಯಾಯ ಒದಗಿಸುವ ಭಾಗವಾಗಿ ಸಾಧನ ಸಲಕರಣೆ ವಿತರಣೆ



**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**
ವಿಶೇಷಚೇತನರಿಗೆಸಮಾನಅವಕಾಶ,ನ್ಯಾಯಒದಗಿಸಲು ವಿವಿಧ ಸಾಧನ,ಸಲಕರಣೆಗಳನ್ನು ವಿತರಿಸಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಉಚ್ಚನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿಗಳು ಹಾಗೂ ಯಾದಗಿರಿ ಆಡಳಿತಾತ್ಮಕ ನ್ಯಾಯಮೂರ್ತಿಗಳಾದ ಶ್ರೀಮತಿ ಹೇಮಲೇಖ ಅವರು ಹೇಳಿದರು.

ನಗರದ ಜಿಲ್ಲಾ ನ್ಯಾಯಾಲಯದಲ್ಲಿ ಇಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ,ಯಿಮ್ಸ,ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,ಎಪಿಡಿ ಸಂಸ್ಥೆ ಇವರ ಸಹಯೋಗದಿಂದ ರವಿವಾರ ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಸಾರ್ವತ್ರಿಕ ಆರೋಗ್ಯ ರಕ್ಷಣೆ ದಿನ ಹಾಗೂ ಅಂತಾರಾಷ್ಟ್ರೀಯ ವಿಶೇಷ ಚೇತನರ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿದ್ದ ವಿಶೇಷ ಚೇತನರಿಗೆ ಸಾಧನ ಸಲಕರಣೆ ವಿತರಣೆ ಕಾರ್ಯಕ್ರಮ, ರಕ್ತದಾನ ಶಿಬಿರ, ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.ವಿಶೇಷ ಚೇತನರಿಗೆ ಸಮಾಜದಲ್ಲಿ ಸಮಾನ ಅವಕಾಶ ದೊರಕಿಸಬೇಕು. ಅವರಿಗೆ ಇಲ್ಲಿ ನೀಡುತ್ತಿರುವ ಸಾಧನ ,ಸಲಕರಣೆಗಳು ಉಪಯುಕ್ತವಾಗಲಿ ಎಂದು ತಿಳಿಸಿದರು.

ವಿಶೇಷ ಚೇತನರಿಗೆ ವಿವಿಧ ಸಾಧನ ಸಲಕರಣೆ ವಿತರಿಸಿ , ಪ್ರೋತ್ಸಾಹಿಸಲು ತಾವು ಆಗಮಿಸಿರುವದಾಗಿ ತಿಳಿಸಿದ ಅವರು , ಇದು ದಾನ ಅಲ್ಲ. ವಿಶೇಷಚೇತನರಿಗೆ ಅವರ ಮನೆ ಬಾಗಿಲಿಗೆ ಬಂದು ನ್ಯಾಯ ಒದಗಿಸಲು,ತಮ್ಮೊಂದಿಗೆ ಸಂತಸ ಹಂಚಿಕೊಳ್ಳಲುಈ ಸಾಧನ ಸಲಕರಣೆಗಳನ್ನು ವಿತರಿಸಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ. ಸಂದೀಪ್ ಪಾಟೀಲ್ ಅವರು ಕಳೆದ ಅಕ್ಟೋಬರ್ ನಲ್ಲಿ ,ಅಸ್ಸೆಸ್ ಮಾಡಲಾದ ವಿಶೇಷಚೇತನರಿಗೆ ಇಂದು ಕಾನೂನು ಸೇವಾ ಪ್ರಾಧಿಕಾರದ ಕಾಳಜಿ ಹಾಗೂ ಅಂಗವಿಕಲರ ಕಲ್ಯಾಣ ಇಲಾಖೆ ಸಹಕಾರ ದಿಂದ ವಿವಿಧ ಸಾಧನ ಸಲಕರಣೆಗಳನ್ನು ವಿತರಿಸಲಾಗಿದೆ. ವಿಶೇಷ ಚೇತನರಿಗೆ ಯಾದಗಿರಿ ಜಿಲ್ಲೆ ಯುಡಿಐಡಿ ಕಾರ್ಡ ವಿತರಣೆಯಲ್ಲಿ ರಾಜ್ಯದಲ್ಲಿಯೇ ಹನ್ನೆರಡನೇ ಸ್ಥಾನದಲ್ಲಿದೆ ಎಂದು ಹೇಳಿದರು.ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ಸೆಕ್ಯುರಿಟ್ ಅಪೆಲೇಟ್ ಟ್ರಿಬ್ಯುನಲ್ ನ ಪ್ರಿಸೈಡಿಂಗ್ ಆಫೀಸರ್ (ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳು) ಗೌರವಾನ್ವಿತ ಟಿ.ಎನ್. ದಿನೇಶ್ ಕುಮಾರ್ ಅವರು,ಸರ್ಕಾರದ ವಿವಿಧ ಇಲಾಖೆ ಹಾಗೂ ಕಾನೂನು ಸೇವಾ ಪ್ರಾಧಿಕಾರದ ಸಹಕಾರದಿಂದ ವಿಶೇಷ ಚೇತನರಿಗೆ ವಿವಿಧ ಸಾಧನ ಸಲಕರಣೆ ವಿತರಿಸುವ ವಿಶೇಷ ಕಾರ್ಯಕ್ರಮ ಇದಾಗಿದೆ. ಅರ್ಹರು ಇದರ ಸದುಪಯೋಗ ಪಡೆದುಕೊಳ್ಳಬೇಕು. ಇತರೆ ಅರ್ಹ ವಿಶೇಷ ಚೇತನರಿಗೆ ಇಂತಹ ಸಾಧನ ಸಲಕರಣೆ ದೊರೆಯಲಿ ಎಂದ ಅವರು, ಯುಡಿಐಡಿ ಕಾರ್ಡ್ ವಿತರಣೆಯಲ್ಲಿ ರಾಜ್ಯದಲ್ಲಿಯೇ ಮೊದಲನೇ ಸ್ಥಾನ ಗಳಿಸಲು ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ನ್ಯಾಯವಾದಿಬಸವರಾಜ ಪಾಟೀಲ ಕ್ಯಾತನಾಳ ರಚಿತ ಭಾರತೀಯತೆ ಹಾಗೂ ವೈಜ್ಞಾನಿಕತೆ ಕೃತಿಯನ್ನು ಬಿಡುಗಡೆಗೊಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಹಾಗೂ ಸತ್ರ ನ್ಯಾಯಾಧೀಶರು ಸೇರಿದಂತೆ ಹಲವು ನ್ಯಾಯವಾದಿಗಳು, ಸಾರ್ವಜನಿಕರು ರಕ್ತದಾನ ಮಾಡಿದರು. ಸುಮಾರು 23 ಜನ ವಿಶೇಷ ಚೇತನರಿಗೆ ವ್ಹೀಲ್ ಚೇರ್, ಸ್ಟಿಕ್, ಯುಡಿಐಡಿ ಕಾರ್ಡ, ಇತರೆ ಸಾಧನ ಸಲಕರಣೆಗಳನ್ನು ವಿತರಿಸಲಾಯಿತು.ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶ ಶ್ರೀ ಮರಿಯಪ್ಪ, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಯೋಜನಾ ಸಹಾಯಕಿ ನಾಗಮ್ಮ,ಎಪಿಡಿ ಸಂಸ್ಥೆ ಸಂಯೋಜಕ ನಾಗಪ್ಪ,ರಮೇಶ ಕಟ್ಟಿಮನಿ ಉಪಸ್ಥಿತರಿದ್ದರು.ಜಿಲ್ಲಾ ಪ್ರಧಾನ ಹಾಗೂ ಸತ್ರ ನ್ಯಾಯಾಧೀಶರಾದ ಶ್ರೀ ಮರುಳಸಿದ್ಧಾರಾಧ್ಯ ಅವರು ಸ್ವಾಗತಿಸಿದರು.

ನ್ಯಾಯವಾದಿಗಳ ಸಂಘದ ಅಧ್ಯಕ್ಷ ಆರ್ ಎಸ್.ಪಾಟೀಲ ವಂದಿಸಿದರು.

## ಲೋಕ್ ಅದಾಲತ್: ಪ್ರಕರಣಗಳು ಇತ್ಯರ್ಥ



**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**
ಜಿಲ್ಲೆಯಾದ್ಯಂತ ನ್ಯಾಯಾಲಯಗಳಲ್ಲಿ ನಡೆದ ರಾಷ್ಟ್ರೀಯ ಲೋಕ್ ಅದಾಲತನಲ್ಲಿ ಒಟ್ಟು 11 ಪೀಠಗಳ ರಚನೆ ಮಾಡಲಾಗಿತ್ತು. ಯಾದಗಿರಿಯ ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ 34 ವಿಚಾರಣೆಯಲ್ಲಿರುವ ಪ್ರಕರಣಗಳು ಹಾಗೂ 469 ವ್ಯಾಜ್ಯಪೂರ್ವ ಪ್ರಕರಣಗಳು, ಗೌರವಾನ್ವಿತ ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ (Sitting at Shorapur) ನಲ್ಲಿ 17, ಯಾದಗಿರಿ ಹಿರಿಯ ಸಿವಿಲ ನ್ಯಾಯಾದಿಶರ ನ್ಯಾಯಾಲಯದಲ್ಲಿ 543, ಯಾದಗಿರಿಯ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಲ.ಸಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ 747, ಯಾದಗಿರಿಯ ಹೆಚ್ಚುವರಿ ಸಿವಿಲ ಮತ್ತು ಜೆ.ಎಂ.ಎಲ.ಸಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ 923, ಶಹಾಪೂರ್ ಹಿರಿಯ ಸಿವಿಲ ನ್ಯಾಯಾಧೀಶರ ನ್ಯಾಯಾಲಯದಲ್ಲಿ 631, ಶಹಾಪೂರ್ ಪ್ರಧಾನ ಸಿವಿಲ ಜಡ್ಜ್ ಮತ್ತು ಜೆ.ಎಂ.ಎಲ.ಸಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ 1500, ಶಹಾಪೂರ್ ಹೆಚ್ಚುವರಿ ಸಿವಿಲ ಜಡ್ಜ್ ಮತ್ತು ಜೆ.ಎಂ.ಎಲ.ಸಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ 1201, ಶೋರಾಪುರ್ ಹಿರಿಯ ಸಿವಿಲ ನ್ಯಾಯಾಧೀಶರ ನ್ಯಾಯಾಲಯದಲ್ಲಿ 906, ಶೋರಾಪುರ್ ಪ್ರಧಾನ ಸಿವಿಲ ಜಡ್ಜ್ ಮತ್ತು ಜೆ.ಎಂ. ಎಲ.ಸಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ 1328, ಶೋರಾಪುರ್ ಹೆಚ್ಚುವರಿ ಸಿವಿಲ ಜಡ್ಜ್ ಮತ್ತು ಜೆ.ಎಂ.ಎಲ.ಸಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ 1591 ಹಾಗೂ ಜಿಲ್ಲಾ ಗ್ರಾಹಕ ವಾಜ್ಯ ಪರಿಹಾರ ಅಯೋಗ, ಯಾದಗಿರಿಯಲ್ಲಿ 3 ಪ್ರಕರಣಗಳು ಇತ್ಯರ್ಥಗೊಳಿಸಲಾಯಿತು.

ಜಿಲ್ಲಾದ್ಯಂತ ಒಟ್ಟಾರೆ 17 ಹಣ ವಸೂಲಿ ದಾವೆಗಳು, 49 ವಿಭಾಗ ಕೋರಿದ ದಾವೆಗಳು (Partition Suits), 9ನಿರ್ದಿಷ್ಟ ಹಕ್ಕುಗಳ ಪರಿಹಾರ ದಾವೆಗಳು (Specific Performance Suits),6 ಅಂತಿಮ ಡಿಕ್ರಿ ಪ್ರಕರಣ (FDP),23 ಚೆ ಅಮಾನ್ಯ ಪ್ರಕರಣಗಳು, 44ಅಮಲ್ಜಾರಿ ಅರ್ಜಿಗಳು, 63ಮೋಟಾರು ವಾಹನ ಅಪಘಾತ ಪರಿಹಾರ ಕೋರಿದ ಅರ್ಜಿಗಳು, 13 ಜೀವನಾಂಶ ಕೋರಿ ಸಲ್ಲಿಸಿದ ಅರ್ಜಿಗಳು ( Maintenance), 6 ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣೆ ಕಾಯ್ದೆ ಯಡಿ (ಆ.ಗಿ ೦ಭಿಣ), 5319 ಜನನ ನೋಂದಣಿ ಕೋರಿದ ಅರ್ಜಿಗಳು ಮತ್ತು 21 ರಾಜಿಯಾಗಬಹುದಾದ ಅಪರಾಧಿಕ ಪ್ರಕರಣಗಳು, 3768 ಲಘು ಅಪರಾಧ ಪ್ರಕರಣಗಳು, ಹಾಗೂ 91 ಇತರೆ ಅಪರಾಧಿಕ ಪ್ರಕರಣಗಳು ಜಿಲ್ಲಾದ್ಯಂತ ಇತ್ಯರ್ಥಗೊಂಡವು.

ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿದ್ದ 9,429 ಹಾಗೂ ವ್ಯಾಜ್ಯಪೂರ್ವ 58,215 (ಕಂದಾಯ, ಮೋಟರ್ ವಾಹನ ಕಾಯ್ದೆ ಉಲ್ಲಂಘನೆ ಮತ್ತು ಆಸ್ತಿ ತೆರಿಗೆ ಪ್ರಕರಣಗಳನ್ನು (P.L.C) ಸೇರಿ ಒಟ್ಟು 67,644 ಪ್ರಕರಣಗಳು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಂಡಿವೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಗೌರವಾನ್ವಿತ ಶ್ರೀ ಮರುಳಸಿದ್ದಾರಾಧ್ಯ ಹೆಚ್. ಜೆ. ಇವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ಮದ್ಯ ಮಾದಕ ದುಷ್ಪರಿಣಾಮಗಳ ಪಠ್ಯಗಳಲ್ಲಿ ಅಳವಡಿಸುವುದು ಸೂಕ್ತ: ಸಲದಾಪುರ



**ಮಲ್ಲಮ್ಮ ನುಡಿವಾರ್ತೆಯಾದಗಿರಿ:**
ಮದ್ಯ ಹಾಗೂ ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಪಠ್ಯಪುಸ್ತಕಗಳಲ್ಲಿ ಜಾಗೃತಿ ಪಾಠ ಸೇರಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಸೂಚಿಸಲಾಗಿದೆ ಎಂದು ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರಾದ ಶರಣಪ್ಪ ಸಲದಾಪುರ ಅವರು ತಿಳಿಸಿದರು.

ನಗರದ ಗಂಜದಲ್ಲಿರುವ ಪತ್ರಿಕಾ ಭವನದಲ್ಲಿರಾಜ್ಯಮದ್ಯಪಾನಸಂಯಮ ಮಂಡಳಿಯಧ್ಯೇಯೋದ್ದೇಶಕುರಿತು ವಿವರ ನೀಡಲು ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಈ ವಿಷಯ ತಿಳಿಸಿದರು.

ಅಬಕಾರಿ ತೆರಿಗೆಯಿಂದ ಬರುವ ಆದಾಯದಲ್ಲಿ ಮದ್ಯಪಾನ ಸಂಯಮ ಮಂಡಳಿ ವತಿಯಿಂದ ಕಲ್ಯಾಣ ಕಾರ್ಯಕ್ರಮಗಳನ್ನು ಆಯೋಜನೆ ಬಗ್ಗೆ ಕ್ರಮವಹಿಸಲು ಅಬಕಾರಿ ಇಲಾಖೆಗೆ ಸೂಚನೆ ನೀಡಲಾಗಿದೆ.

ಆರೋಗ್ಯ ಇಲಾಖೆಯ ಮಾಹಿತಿ, ಶಿಕ್ಷಣ ಹಾಗೂ ಸಂವಹನ (ಖಇಅ) ಕಾರ್ಯಕ್ರಮಗಳ ಅನುದಾನದಲ್ಲಿ ಮಂಡಳಿ ವತಿಯಿಂದ ಜಾಗೃತಿ ಕಾರ್ಯಕ್ರಮ ಕೈಗೊಳ್ಳಲು ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಜನಜಾಗೃತಿ ಕಾರ್ಯಗಳಿಗೆ ಸ್ತ್ರೀ ಶಕ್ತಿಸಂಘದ ಸದಸ್ಯರು,ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಕ್ರಮಕ್ಕೆ ಸೂಚನೆ ನೀಡಲಾಗಿದೆ.

ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆಗೆ ರಾಜ್ಯದಲ್ಲಿ ಮದ್ಯಸೇವನೆಯಿಂದುಂಟಾಗುತ್ತಿರುವ ಸಾವುಗಳ ಅಂಕಿ-ಸಂಖ್ಯೆಗಳು ಹಾಗೂ ಮದ್ಯ ಹಾಗೂ ಮಾದಕ ವಸ್ತುಗಳ ಸೇವನೆಯಿಂದ ಬರುವ ರೋಗ-ರುಜಿನಗಳ ಬಗ್ಗೆ ವಿವರವಾದ ವರದಿ ಒದಗಿಸುವಂತೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಶಾಲಾ, ಕಾಲೇಜುಗಳಲ್ಲಿ ಕ್ರೀಡಾಂಗಣ ಸ್ಥಾಪನೆ ಮತ್ತು ದೈಹಿಕ ಶಿಕ್ಷಕರುಗಳನ್ನು ನೇಮಕ ಮಾಡಿಕೊಳ್ಳುವ ಮೂಲಕ ಆರೋಗ್ಯಕರ ವಾತಾವರಣ ನಿರ್ಮಿಸುವಂತೆ ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಸೂಚನೆ ನೀಡಲಾಗಿದೆ.ಪೋಲೀಸ್ ಇಲಾಖೆಯ ಅಧಿಕಾರಿಗಳಿಂದ ಪುನರ್ವಸತಿ ಕೇಂದ್ರಗಳಿಗೆ ತಿಂಗಳಿಗೆ ಎರಡು ಬಾರಿ ಕಡ್ಡಾಯವಾಗಿ ಭೇಟಿ ನೀಡಿ, ವರದಿ ಸಲ್ಲಿಸುವಂತೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಆರೋಗ್ಯ ಇಲಾಖೆಯ ವೈದ್ಯರು ಪುನರ್ವಸತಿ ಕೇಂದ್ರಗಳಿಗೆ ತಿಂಗಳಿಗೆ ಎರಡು ಬಾರಿ ಕಡ್ಡಾಯವಾಗಿ ಭೇಟಿ ನೀಡಿ, ಆರೋಗ್ಯ ತಪಾಸಣೆ ಕೈಗೊಂಡ ವರದಿಯನ್ನು ನೀಡುವಂತೆ ಸೂಚನೆ ನೀಡಲಾಗಿದೆ. ಕಾರ್ಮಿಕರ ಕಲ್ಯಾಣಕ್ಕಾಗಿ ಕಲ್ಯಾಣ ನಿಧಿ ಸ್ಥಾಪನೆಯಂತೆ ಅಬಕಾರಿ ಇಲಾಖೆಯಲ್ಲಿಯ ಮದ್ಯತಯಾರಿಕಾ ಉದ್ದಿಮೆಗಳಿಂದ ಸೆಸ್ ರೂಪದಲ್ಲಿ ತೆರಿಗೆ ಸಂಗ್ರಹಿಸಿ ಕಲ್ಯಾಣ ನಿಧಿಯನ್ನು ಸ್ಥಾಪಿಸಲು ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಪುನರ್ವಸತಿ ಕೇಂದ್ರಗಳಲ್ಲಿ ನಾಮಫಲಕ ಮತ್ತು ಕೇಂದ್ರಗಳನ್ನು ಆರಂಭಿಸಲು ನೀಡಲಾಗುವ ಅನುಮತಿ ಪತ್ರದಲ್ಲಿ ಮಂಡಳಿಯ ಲಾಂಛನ (ಐಂ೦ಠ) ಬಳಸುವಂತೆ ಸೂಚನೆ ನೀಡಲಾಗಿದೆ.ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಾನೂನು ಇಲಾಖೆ ಹಾಗೂ ಆರೋಗ್ಯ ಇಲಾಖೆಯಡಿ ಬರುವ ಮಾನಸಿಕ ಆರೋಗ್ಯ ಪ್ರಾಧಿಕಾರದ ವತಿಯಿಂದ ತಲಾ ಒಬ್ಬರನ್ನು ಖಾಯಂ ಸದಸ್ಯರನ್ನಾಗಿ ನೇಮಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಹೇಳಿದರು.

ಗಾಂಧಿಗ್ರಾಮ ಪುರಸ್ಕೃತ ಗ್ರಾಮಪಂಚಾಯಿತಿಗಳಲ್ಲಿ ಮದ್ಯ ಮತ್ತು ಮಾದಕ ವಸ್ತುಗಳ ಬಗ್ಗೆ ಜನಜಾಗೃತಿ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಕ್ಕಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರಿಗೆ ಕೋರಲಾಗಿದೆ.ಹಿಂದುಳಿದ,ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಮದ್ಯ ಮತ್ತು ಮಾದಕ ವಸ್ತುಗಳ ವಿರುದ್ಧ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಕೋರಲಾಗಿದೆ ಎಂದು ಹೇಳಿದರು.ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಹೆದ್ದಾರಿಗಳು ಹಾಗೂ ರಸ್ತೆಗಳಲ್ಲಿ ಜಾಗೃತಿ ಪ್ರಚಾರ ಫಲಕಗಳನ್ನು ಅಳವಡಿಸಲು ಲೋಕೋಪಯೋಗಿ ಸಚಿವರಿಗೆ ಕೋರಲಾಗಿದೆ. ನಕಲಿ ಮತ್ತು ಅಕ್ರಮಮದ್ಯ ಮಾರಾಟ ಹಾಗೂ ಮಾದಕವಸ್ತುಗಳ ನಿಯಂತ್ರಣ ಕುರಿತು ಕೈಗೊಂಡ ಕ್ರಮಗಳ ಬಗ್ಗೆ ರಾಜ್ಯದ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಂದ ಮಾಹಿತಿ ಕೋರಲಾಗಿದೆ ಎಂದು ಅವರು ಹೇಳಿದರು.

ಮದ್ಯಪಾನ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಸರ್ಕಾರ ಮದ್ಯಪಾನ ಸಂಯಮ ಮಂಡಳಿ ರಚಿಸಿದೆ. ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯನ್ನು ಮದ್ಯ ಮತ್ತು ಮಾದಕ ವಸ್ತುಗಳ ಮಂಡಳಿಯು 1976ರಿಂದಲೂ ಅಸ್ತಿತ್ವದಲ್ಲಿದ್ದು, 1981ರಲ್ಲಿ ವಾರ್ತಾ ಇಲಾಖೆಯಲ್ಲಿ ವಿಲೀನಗೊಂಡಿತ್ತು. ಪುನಃ 1984ರಲ್ಲಿ ಪುನರ್‌ರಚನೆಗೊಂಡು ಇಲ್ಲಿಯವರೆವಿಗೂ ಕಾರ್ಯ ಪ್ರವೃತ್ತವಾಗಿದೆ ಎಂದು ಹೇಳಿದರು.

ಮಂಡಳಿಯ ಧ್ಯೇಯೋದ್ದೇಶ ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ಪರಿಣಾಮಕಾರಿ ಪ್ರಚಾರ ಕಾರ್ಯಕ್ರಮ ಕೈಗೊಳ್ಳುವುದು, ಮದ್ಯವ್ಯಸನಿಗಳಿಗೆ ಮತ್ತು ಮಾದಕ ವಸ್ತುಗಳ ವ್ಯಸನಿಗಳಿಗೆ ಸೂಕ್ತ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳುವುದು.

ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಸೂಕ್ತ ಪಾಠಗಳನ್ನು ಪಠ್ಯ ಪುಸ್ತಕಗಳಲ್ಲಿ ಅಳವಡಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸುವುದು, ಮದ್ಯವ್ಯಸನಿಗಳಿಗೆ ಪುನರ್ ವಸತಿ ಕಲ್ಪಿಸಲು ಕ್ರಮ ಕೈಗೊಳ್ಳುವುದು, ಮದ್ಯ ಮಾರಾಟ ಮತ್ತು ಸೇವನೆಗೆ ಹಾಗೂ ಶುಚಿತ್ವದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಶಿಪಾರಸ್ಸು ಮಾಡುವುದು, ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳನ್ನು ತಡೆಗಟ್ಟುವ ಬಗ್ಗೆ ಪ್ರಚಾರದ ಕೆಲಸಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲಹೆ ನೀಡುವುದು, ಮದ್ಯದಂಗಡಿಗಳನ್ನು ಧಾರ್ಮಿಕ ಸ್ಥಳದ ಸಮೀಪ, ವಿದ್ಯಾಸಂಸ್ಥೆಗಳು, ಕೈಗಾರಿಕಾ ಪ್ರದೇಶಗಳು, ಕೊಳಚೆ ಪ್ರದೇಶಗಳು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ವಾಸಿಸುವ ಸ್ಥಳದಲ್ಲಿ ತೆರೆಯುವ ಸಂದರ್ಭದಲ್ಲಿ ಅನುಸರಿಸಬೇಕಾದ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಸರ್ಕಾರಕ್ಕೆ ಸಲಹೆ ಮಾಡುವುದು ಮಂಡಳಿಯ ಮುಖ್ಯ ಧ್ಯೇಯೋದ್ದೇಶಗಳಾಗಿವೆ ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಭೀಮರಾವ್ ಠಾಣಾಗುಂದಿ ಉಪಸ್ಥಿತರಿದ್ದರು.

## ಡಾ.ಪಂ. ಪುಟ್ಟರಾಜರ 2 ದಿನಗಳ ಸಂಗೀತ ಸಮ್ಮೇಳಕ್ಕೆ ತೆರೆ

## ದಾನ, ಧರ್ಮಗಳಿಂದ ಪುಣ್ಯ ನೆಮ್ಮದಿ ಪ್ರಾಪ್ತಿ. : ಗೋಪಾಲಯ್ಯ ಶೆಟ್ಟಿ



**ಮಲ್ಲಮ್ಮ ನುಡಿ ವಾರ್ತೆ**
**ರಾಯಚೂರು:** ನಗರದ ಸೋಮವಾರಪೇಟೆ ಹಿರೇಮಠದಲ್ಲಿ ಶ್ರೀಮಠದ ಪೂಜ್ಯಶ್ರೀ ಅಭಿನವ ರಾಚೋಟಿ ವೀರ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ಡಾ.ಪಂ. ಪುಟ್ಟರಾಜ ಕವಿ ಗವಾಯಿಗಳವರ 15ನೇ ವರ್ಷದ ಪುಣ್ಯಸ್ಮರಣೆಯ ನಿಮಿತ್ಯ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಕಲಾವಿದರಿಂದ ಹಾಗೂ ಸ್ಥಳಿಯ ಕಲಾವಿದರಿಂದ 2 ದಿನಗಳ ಸಂಗೀತ ಸಮ್ಮೇಳನದ ಸಮಾರೋಪ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀಮಠದ ಶ್ರೀಗಳು ತಬಲಾ ವಾದ್ಯವನ್ನು ನುಡಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ನಗರದ ಗಂಜ್ ವರ್ತಕರಾದ ಇಲ್ಲೂರ ಅನಂತ ಗೋಪಾಲಯ್ಯ ಶೆಟ್ಟಿಯವರು, ಪಂ. ಪಂಚಾಕ್ಷರಿ ಗವಾಯಿ ಟ್ರಸ್ಟಿನ ಅಧ್ಯಕ್ಷರಾದ ಪಂ. ಸೂಗೂರೇಶ ಅಸ್ಕಿಹಾಳ, ಪುಂಡ್ಲ ಶೇಖರರೆಡ್ಡಿ, ಕಲಾವಿದ ಗೋವಿಂದರೆಡ್ಡಿ ಸರ್ಜಾಪೂರ, ಡಾ.ಪಂ. ಪುಟ್ಟರಾಜ ಗವಾಯಿಗಳ ಟ್ರಸ್ಟಿನ ಗೌರವಾಧ್ಯಕ್ಷರಾದ ರಘುಪತಿ ಪೂಜಾರ, ಅಧ್ಯಕ್ಷರಾದ ಜಾಲಿಬೆಂಚಿ ಈರಣ್ಣ ಹೂಗಾರ, ಪಿ. ಚಿನ್ನಯ್ಯ ಸ್ವಾಮಿ, ವೆಂಕಟೇಶ ಆಲ್ಕೋಡ್, ವಿಜಯಕುಮಾರ ದಿನ್ನಿಯವರು ವೇದಿಕೆಯ ಮೇಲೆ ಆಶೀನರಾಗಿದ್ದರು. ನಂತರ ಸರ್ವರಿಗೂ ಶ್ರೀಗಳು ಸನ್ಮಾನಿಸಿ ಶುಭಾಶೀರ್ವದಿಸದರು.

ನಂತರ ಮಾತನಾಡಿದ ಪಂ. ಸೂಗೂರೇಶ ಅಸ್ಕಿಹಾಳರವರು ಒಬ್ಬ ಕಲಾವಿದನು ಶ್ರೇಷ್ಠ ಸಂಗೀತಗಾರನಾಗಿ ಬೆಳೆಯಬೇಕಾದರೆ ಒಳ್ಳೇ ಗುರುವಿನ ಹತ್ತಿರ ಕಠಿಣ ಅಭ್ಯಾಸ ಮಾಡಿರಬೇಕು ಯಶಕೆಂದರೆ ಇತ್ತೀಚೆಗೆ ಮಾಧ್ಯಮಗಳಲ್ಲಿ ಮತ್ತು ಯುಟ್ಯೂಬ್ ನಲ್ಲಿ ನೋಡುತ್ತಿದ್ದೇವೆ ಎಂಥೆಂತಾ ಚಿಕ್ಕ ಪುಟ್ಟ ಮಕ್ಕಳು ಅದೆಸ್ಟು ಚನ್ನಾಗಿ ಗಾಯನ ಮಾಡುತ್ತಾರೆಂದರೆ ಹಿರಿಯ ಗಾಯಕರನ್ನು ಮೀರಿಸುವಂಥಾ ಗಾಯಕರನ್ನು ನೋಡುತ್ತಿದ್ದೇವೆ ಆದರೆ ಅವರಿಗೆ ಒಳ್ಳೇ ಗುರುಗಳ ಅವಶ್ಯಕತೆ ಇದೆ, ಹಾಡುಗಾರರೆಲ್ಲಾ ಶ್ರೇಷ್ಠ ಗಾಯಕರಾಗಲು ಸಾಧ್ಯವಿಲ್ಲ, ಒಬ್ಬ ಕಲಾವಿದನನ್ನು ಬೆಳೆಸುವ ಗುಣ ಗುರುವಿನಲ್ಲಿರುತ್ತದೆ, ಆದುದರಿಂದ ಪಾಲಕರಲ್ಲಿ ಒಂದು ಕಿವಿಮಾತು ತಮ್ಮ ಮಕ್ಕಳಿಗೆ ಸಂಗೀತ ಅಭ್ಯಾಸ ಮಾಡಿಸುದಾದರೆ ಒಬ್ಬ ಗುರುವಿನ ಹತ್ತಿರ ಸಂಗೀತ ಕಲಿಸಿ ಆಗ ಆತನ ಬದುಕು ಬಂಗಾರವಾಗುತ್ತದೆ ಎಂದು ಹೇಳಿದರು. ನಂತರ ಮಾತನಾಡಿದ ಇಲ್ಲೂರ ಅನಂತ ಗೋಪಾಲಯ್ಯ ಶೆಟ್ಟಿಯವರು ಇಂಥ ಶರಣ ಸಂತರ, ಗವಾಯಿಗಳವರ ಕಾರ್ಯಕ್ರಮಗಳು ಮೇಲಿಂದ ಮೇಲೆ ನಡೆಯುತ್ತಿರಬೇಕು ಯಶಕೆಂದರೆ ಈಗಿನ ಮಕ್ಕಳಿಗೆ ಮೊಬೆಲೇ ಅವರ ಪ್ರಪಂಚವಾಗಿ ಹೋಗಿದೆ ಆಗಂತ ಹೇಳಿ ಮೊಬೆಲ್ ಬಳಕೆ ಮಾಡಬಾರದು ಅಂತ ಅಲ್ಲ ಚಿಕ್ಕ ಮಕ್ಕಳು ಹಾಗೂ ಯುವ ಪೀಳಿಗೆಯು ಮೊಬೆಲ್ ವ್ಯಸನಿಗಳಾಗುತ್ತಿದ್ದಾರೆ ಅದಕ್ಕಾಗಿ ಪಾಲಕರು ಎಚ್ಚರವಹಿಸಬೇಕು ಮತ್ತು ಇಂಥ ಕಾರ್ಯಕ್ರಮಗಳು ನಡೆಯಬೇಕೆಂದರೆ ದಾನಿಗಳು ಮುಂದೆ ಬರಬೇಕಾಗುತ್ತದೆ, ಈಗಿನ ಕಾಲದಲ್ಲಿ ಒಂದು ಚಿಕ್ಕ ಕಾರ್ಯಕ್ರಮ ಮಾಡಬೇಕೆಂದರೆ ತುಂಬಾ ಕಸ್ಟ ಪಡಬೇಕಾಗುತ್ತದೆ ಆದರೆ ಈ ಟ್ರಸ್ಟಿನವರು ಅದೂ ಸಹಿತ ಎರಡು ದಿನಗಳ ಸಂಗೀತ ದಮ್ಮೇಳನವನ್ನು ಹಮ್ಮಿಕೊಂಡು ಹೊರ ರಾಜ್ಯ ಮತ್ತು ಜಿಲ್ಲೆಗಳ ಕಲಶವಿದರನ್ನು ಗುರುತ್ತಿಸಿ ಅವರನ್ನು ಆಗಮಿಸಿಕೊಳ್ಳೋದು ಕಳಿಸುವುದು ಇದನ್ನೆಲ್ಲ ಕಂಡರೆ ಅದೆಸ್ಟು ಶ್ರಮ ಪಡುತ್ತಿದ್ದಾರೆ ಎನ್ನುವುದು ಕಣ್ಣಿಗೆ ಕಾಣುತ್ತದೆ, ಇದಕ್ಕೆಲ್ಲ ಸಾಕಸ್ಟು ಆರ್ಥಿಕ ಬೆಂಬಲವಿದ್ದರೆ ಮಾತ್ರ ಸಾಧ್ಯವಾಗುವುದು ಅದಕ್ಕಾಗಿ ನಾವು ನಮ್ಮ ವ್ಯವಹಾರದಲ್ಲಿ ಸ್ವಲ್ಪವಾದರೂ ಇಂಥ ಕಾರ್ಯಗಳಿಗೆ ದಾನ ಧರ್ಮ ಮಾಡಿದರೆ ಅದರಿಂದ ಮನುಷ್ಯನಿಗೆ ಸತ್ಕಾರ್ಯದಲ್ಲಿ ಭಾಗಿಯಾದಂತ ಪುಣ್ಯ, ಸುಖ, ನೆಮ್ಮದಿ ಮತ್ತು ಶರಣ ಸಂತರ ಮತ್ತು ಶ್ರೀಗಳ ಆಶೀರ್ವಾದ ಸಿಗುತ್ತದೆ, ಯಶಕೆಂದರೆ ಮನುಷ್ಯ ಎಸ್ಟೇ ಗಳಿಸಿದರು ಆ ಪರಶಿವ ಕರೆದಾಗ ಹೋಗುವುದು ಬರೀ ಕೈಯಲ್ಲಿ ತಾನು ಗಳಿಸಿದ್ದೆಲ್ಲ ಕೊಂಡೊಯ್ಯಲು ಸಾಧ್ಯವಿಲ್ಲ ಆದುದರಿಂದ ಸರ್ವರೂ ದಾನ ಧರ್ಮ ಮಾಡುವುದರಲ್ಲಿ ಮುಂದಾಗ

ಬೇಕಿದೆ ಎಂದು ಹೇಳಿದರು.

ನಂತರ ವೇದಿಕೆಯ ಮೇಲೆ ಡಾ.ಪಂ. ನರಸಿಂಹಲು ವಡವಾಟಿಜಿ, ಪಂ. ಸೂಗೂರೇಶ ಅಸ್ಕಿಹಾಳ, ಜೀ ಕನ್ನಡ ಖ್ಯಾತಿಯ ರೇವಣ ಸಿದ್ಧ ಪುಂಡಲೀಕ ಪುಲಾರಿ, ವಿರುಪಾಕ್ಷಯ್ಯ ಸ್ವಾಮಿ ವಂದಲಿ, ಸಮೀರಣ್ಣ ಜ್ಯೋಷಿ, ಕುಮಾರಿ ಪೂರ್ವಿ ಅರಳಿಕಟ್ಟಿ, ಬಳ್ಳಾರಿ, ಜಿಂದಪ್ಪ ಅಸ್ಕಿಹಾಳ, ಹಾಗೂ ಇನ್ನಿತರರು

ಈ ಸಂದರ್ಭದಲ್ಲಿ ಡಾ.ಪಂ. ಪುಟ್ಟರಾಜ ಸಾಂಸ್ಕೃತಿಕ ಟ್ರಸ್ಟಿನ ಅಧ್ಯಕ್ಷ ಈರಣ್ಣ ಜಾಲಿಬೆಂಚಿ, ಪಿ. ಚಿನ್ನಯ್ಯ ಸ್ವಾಮಿ, ಚೇತನಕುಮಾರ, ಕಲಾವಿದರು, ಕಲಾಭಿಮಾನಿಗಳು, ಶ್ರೀಮಠದ ಸರ್ವ ಶಿಷ್ಯವೃಂಧದವರು, ಸ್ಥಳಿಯ ಕಲಾವಿದರು, ಸಾರ್ವಜನಿಕರು ಮಹಿಳೆಯರು ಉಪಸ್ಥಿತರಿದ್ದರು.

## ಡಿ. 18ರಂದು ಲಿಂ. ಕರೆಪ್ಪ ತಾತನವರ 15ನೇ ವರ್ಷದ ಪುಣ್ಯಾರಾಧನೆ



**ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ:**
ಪಟ್ಟಣ ಸಮೀಪದ ನಗನೂರ ಗ್ರಾಮದಲ್ಲಿ ಪವಾಡ ಪುರುಷ ಲಿಂ. ಶ್ರೀ ಕರೆಪ್ಪ ತಾತನವರ 15ನೇ ವರ್ಷದ ಪುಣ್ಯಾರಾಧನೆ ಅಂಗವಾಗಿ ಡಿ. 18ರಂದು ಶಿವಶಿದ್ಧ ಶ್ರೀ ಭೀರಲಿಂಗೇಶ್ವರರ ಮಹಾಪುರಣ-ಪ್ರವಚನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ನಗರೇಶ್ವರ ದೇವಸ್ಥಾನದ ಪಟ್ಟಾಧಿಕಾರಿ ಪೂಜ್ಯ ಖಂಡಪ್ಪ ತಾತನವರು ಹೇಳಿದರು. ಸೋಮವಾರ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಪ್ರತಿ ವರ್ಷದಂತೆ ಪ್ರವಚನ ಕಾರ್ಯಕ್ರಮವು 15 ದಿನಗಳವರೆಗೆ ನಡೆಯಲಿದ್ದು, ಸೊಲ್ಲಾಪೂರ ಜಿಲ್ಲೆಯ ಅಕ್ಕಲಕೋಟ ತಾಲ್ಲೂಕಿನ ಬಸವನ ಸಂಗೊಳಗಿಯ ಶ್ರೀ ಅಭಿನವ ಸಿದ್ಧರತ್ನ ಮದಗೊಂಡೇಶ್ವರ ಮಹಾರಾಜರು ಪ್ರವಚನ ನೀಡಲಿದ್ದಾರೆ. ಪ್ರತಿದಿನ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಖ್ಯಾತ ಸಂಗೀತ ಕಲಾವಿದ ಬಸವರಾಜ ಭಂಟನೂರ, ತಬಲಾ ವಾದಕ ಯಮನೇಶ ಯಾಳಗಿ ಅವರು ಸಂಗೀತ ಸೇವೆ ನೀಡಲಿದ್ದಾರೆ ಎಂದು ತಿಳಿಸಿದರು. ಅಂದು ನಡೆಯುವ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಷ.ಬ್ರ. ಶ್ರೀ ಸೂಗೂರೇಶ್ವರ ಶಿವಾಚಾರ್ಯರು, ಶ್ರೀ ಶರಣಬಸವೇಶ್ವರ ದಾಸೋಹ ಮಠದ ಪೂಜ್ಯ ಶ್ರೀ ಶರಣಪ್ಪ ಶರಣರು ದೇವರಮನಿ ಅವರು ವಹಿಸುವರು. ತಮ್ಮ ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಾನಿಧ್ಯವನ್ನು ನಗನೂರದ ಶ್ರೀ ದೊಡ್ಡಪ್ಪ ತಾತನವರು, ಯಾಳಗಿಯ ಶ್ರೀ ಸಿದ್ದಪ್ಪ ಪೂಜಾರಿ, ಕಕ್ಕಸಗೇರಾದ ಶ್ರೀ ರೇವಣಸಿದ್ದೇಶ್ವರ ಪೂಜಾರಿ, ಕಾಡಮಗೇರಾದ ಶ್ರೀ ಕೆಂಚಪ್ಪ ಪೂಜಾರಿ, ಕೆಂಭಾವಿಯ ಶ್ರೀ ಭೀರಪ್ಪ ಪೂಜಾರಿ, ನಗನೂರದ ಶ್ರೀ ಸಿದ್ದಪ್ಪ ಪೂಜಾರಿ ವಹಿಸುವರು ಎಂದು ಮಾಹಿತಿ ನೀಡಿದ ಅವರು, ನಗನೂರ, ಖಾನಪೂರ ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪುರಾಣ-ಪ್ರವಚನ ಆಲಿಸಬೇಕು ಎಂದು ಅವರು ಕೋರಿದ್ದಾರೆ.

## ಕಸ್ತೂರಿಮಠದ ಶ್ರೀಗಳವರ 36ನೇ ಧನುರ್ಮಾಸ ಅನುಷ್ಠಾನ



**ಮಲ್ಲಮ್ಮ ನುಡಿ ವಾರ್ತೆ** ಬಾಗಲಕೋಟೆ : ಸುಕ್ಷೇತ್ರ ಗದ್ದನಕೇರಿ ಶ್ರೀ ಕಸ್ತೂರಿಮಠದ ಪರಮಪೂಜ್ಯರಾದ ಶ್ರೀ ಶ್ರೀ ಕರಬಸವೇಶ್ವರ ಶಿವಯೋಗಿ ಮಹಾಸ್ವಾಮೀಜಿಯವರ ಧನುರ್ಮಾಸ ಪ್ರಯುಕ್ತ ತ್ರಿಕಾಲ ಲಿಂಗ ಪೂಜಾ ಮೌನಾನುಷ್ಠಾನ ಪ್ರಾರಂಭವಾಗಿದೆ. ಶ್ರೀಗಳವರ 36ನೇ ಧನುರ್ಮಾಸ ಅನುಷ್ಠಾನವು ಗದ್ದನಕೇರಿಯ ಶ್ರೀ ಕಸ್ತೂರಿಮಠದಲ್ಲಿ ನಡೆದಿದೆ. ತಾ: 14-12-2025ನೇ ರವಿವಾರ ಬ್ರಾಹ್ಮಿ ಮುಹೂರ್ತದಲ್ಲಿ ಶ್ರೀ ಕ್ಷೇತ್ರನಾಥ ಮರುಳಸಿದ್ದೇಶ್ವರ ಸ್ವಾಮಿಗೆ ರುದ್ರಾಭಿಷೇಕ ಆದಿಶಕ್ತಿ ಸ್ವರೂಪಿಣಿ ಮಹಾಮಾತೆಗೆ ಕುಂಕುಮಾರ್ಚನೆ, ಮಹಾಮಂಗಳಾರತಿಯೊಂದಿಗೆ ಪ್ರಾರಂಭಿಸಿದ್ದಾರೆ. ಈ ಅನುಷ್ಠಾನದ ಮಂಗಲ ಮಕರ ಸಂಕ್ರಮಣದ ಪುಣ್ಯಕಾಲದಲ್ಲಿ ಮಂಗಲಗೊಳ್ಳುವುದು. ಅದೇ ವೇಳೆಗೆ ಭಕ್ತಹಿತಚಿಂತನಾ ಸಭೆ ಹಾಗೂ ಅನೇಕ ಪೂಜಾ ಕೈಂಕರ್ಯರಗಳು ಮತ್ತು ಸಾಮಾಜಿಕ, ಕಾರ್ಯಕ್ರಮಗಳು ನಡೆಯುವವು. ಇದೇ ಸಂದರ್ಭದಲ್ಲಿ ಕಲಾವಿದರಿಗೆ, ದಾನಿಗಳಿಗೆ, ರಾಜಕೀಯ ಧುರೀಣರಿಗೆ, ಪ್ರೋತ್ಸಾಹಪೂರ್ವಕ ಸನ್ಮಾನ ಮಾಡಲಾಗುವುದು. ಎಂದು ಕಸ್ತೂರಿಮಠ ಅಭ್ಯುದಯ ಪ್ರತಿಷ್ಠಾನ ಸಂಸ್ಥೆಯ ಪದಾಧಿಕಾರಿಗಳಾದ ಸಿದ್ದನಗೌಡ ಜಕ್ಕನಗೌಡರ, ಮಹಾವೀರ ಹೊನ್ನಾಳಿ, ಬಸವರಾಜ ಗೆಣ್ಣೂರ, ನಾರಾಯಣ ಹಣಗಿ, ಮಂತ್ರಪ್ಪ ರಾಜನಾಳ, ಕಾಳಪ್ಪ ಬಡಿಗೇರ, ಮಲ್ಲಿಕಾರ್ಜುನ ಸಬರದ, ರಾಜು ಬಡಿಗೇರ ಕಾರ್ಯಕ್ರಮಗಳ ವಿವರಣೆ ನೀಡಿದರು. ವಿಶೇಷ ಸೂಚನೆ : ಗುರುಗಳ ದರ್ಶನಾಶೀರ್ವಾದ ಪ್ರತಿದಿನ ಬೆಳಿಗ್ಗೆ 10-00 ರಿಂದ 11-00, ಸಾಯಂಕಾಲ 5-00 ರಿಂದ 6-00 ರ ವರೆಗೆ ಇರುವುದು ಕಾರಣ ಎಲ್ಲ ಮಹಾಶಯರಾದ ತಾವುಗಳು ಕಾರ್ಯಕ್ರಮಕ್ಕೆ ಸಹಕರಿಸಬೇಕೆಂದು ಸದ್ಭಕ್ತ ವೃಂದಕ್ಕೆ ಶ್ರೀ ಮಠದ ಸಂಸ್ಥೆಯ ಪದಾಧಿಕಾರಿಗಳು ಪ್ರಕಟಣೆಗೆ ತಿಳಿಸಿದ್ದಾರೆ.

## ಪೋಲಿಯೊ ಬೂತ್ ಮಾಹಿತಿಯನ್ನು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಪಡೆಯಿರಿ: ಡಾ.ಸುರೇಂದ್ರ ಬಾಬು

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ಡಿಸೆಂಬರ್ 15 (ಕರ್ನಾಟಕ ವಾರ್ತೆ): ಇದೆ ಡಿಸೆಂಬರ್ 21ರ ಭಾನುವಾರದಂದು ಹುಟ್ಟಿನಿಂದ ಐದು ವರ್ಷದೊಳಗಿನ ಮಕ್ಕಳಿಗೆ ಎರಡು ಹನಿ ಪೋಲಿಯೊ ಲಸಿಕೆ ಹಾಕುವ ಪಲ್ಸ್ ಪೋಲಿಯೊ ಕಾರ್ಯಕ್ರಮ ರಾಯಚೂರು ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾಗಿದೆ. ನಗರ, ಪಟ್ಟಣಗಳಲ್ಲಿಯ ಜನತೆಯು ತಮ್ಮ ಮನೆಗಳಿಗೆ ಹತ್ತಿರದ ಪೋಲಿಯೊ ಬೂತ್‌ಗಳ ಮಾಹಿತಿಯನ್ನು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ತಮ್ಮಗೆ ಹತ್ತಿರದ ಬೂತ್‌ಗಳಲ್ಲಿ ಲಸಿಕೆ ಹಾಕಿ ಅಭಿಯಾನದಲ್ಲಿ ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ಪಾಲಕರು ನೋಡಿಕೊಳ್ಳಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಸುರೇಂದ್ರ ಬಾಬು ಮನವಿ ಮಾಡಿದ್ದಾರೆ.

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಇವರ ಸಲಹೆಯಂತೆ ಈ ಬಾರಿ ರಾಯಚೂರು, ಮಾನವಿ, ದೇವದುರ್ಗ, ಲಿಂಗಸೂಗುರು, ಸಿಂಧನೂರು ನಗರ ಪ್ರದೇಶಗಳ ನಾಗರಿಕರಿಗೆ ಬೂತ್‌ಗಳ ಮಾಹಿತಿ ಕೊರತೆಯಾಗಬಾರದು ಎಂದು ಕ್ಯೂಆರ್ ಕೋಡ್ ಸ್ಕ್ಯಾನರ್ ಸಿದ್ದಪಡಿಸಲಾಗಿದ್ದು, ತಮ್ಮ ಮೊಬೈಲ್‌ಗಳ ಮೂಲಕ ಸ್ಕ್ಯಾನ್ ಮಾಡಿ ಬೂತ್‌ಗಳ ಮಾಹಿತಿ ಪಡೆದು ತಮಗೆ ಹತ್ತಿರದಲ್ಲಿರುವ ಬೂತ್‌ಗಳಲ್ಲಿ ಎರಡು ಹನಿ ಲಸಿಕೆಯನ್ನು ಮಗುವಿಗೆ ಹಾಕಿಸಿ ಪೋಲಿಯೋ ಮೇಲಿನ ನಮ್ಮ ಗೆಲುವನ್ನು ಮುಂದುವರೆಸಲು ಕೈಜೋಡಿಸುವಂತೆ ಕೋರಿದರು.

ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ನಂದಿತಾ ಎಮ್.ಎನ್. ಅವರು ಮಾತನಾಡಿ, ನಮ್ಮ ಭಾರತ ದೇಶದಲ್ಲಿ ಕೊನೆಯ ಪೋಲಿಯೋ ಪ್ರಕರಣ 2011 ಜನವರಿಯಲ್ಲಿ ಪಶ್ಚಿಮ ಬಂಗಾಳ ರಾಜ್ಯದಲ್ಲಿ ವರದಿಯಾದ ನಂತರ ಕಳೆದ 14 ವರ್ಷಗಳಿಂದ ನಮ್ಮ ದೇಶದಲ್ಲಿ ಯಾವುದೇ ಪ್ರಕರಣ ವರದಿಯಾಗಿಲ್ಲ.

ಆದರೂ ಸಹ ನೆರೆಯ ರಾಷ್ಟಗಳಲ್ಲಿ ಪ್ರಕರಣಗಳು ಇರುವುದರಿಂದ ಡಿಸೆಂಬರ್ 21 ರಂದು ದೇಶಾದ್ಯಾಂತ ಲಸಿಕೆ ಹಾಕಲಾಗುತ್ತಿದ್ದು, ನಮ್ಮ ಜಿಲ್ಲೆಯಲ್ಲಿ ಲಸಿಕೆ ಹಾಕಲು ತಂಡಗಳ ರಚನೆ ಮಾಡಲಾಗಿದ್ದು, ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ, ಬಸ್ ನಿಲ್ದಾಣ, ರೈಲು ನಿಲ್ದಾಣ, ಅಂಗನವಾಡಿಗಳಲ್ಲಿ ಮತ್ತು ಶಾಲೆಗಳಲ್ಲಿ ಹಾಗೂ ಕೊಳಚೆ ಪ್ರದೇಶ ಮುಂತಾದೆಡೆ ಬೂತ್ ತೆರೆಯಲಾಗುವುದು. ಇದಕ್ಕಾಗಿ ಈಗಿನಿಂದಲೆ

ಗ್ರಾಮಗಳಲ್ಲಿ ಸಿಬ್ಬಂದಿಯವರು ಖುದ್ದು, ಮನೆ ಭೇಟಿ ನೀಡುತ್ತಿದ್ದಾರೆ. ಇದರೊಂದಿಗೆ ಸ್ಥಳೀಯ ಸಂಸ್ಥೆಗಳ ಕಸ ವಿಲೇವಾರಿ ವಾಹನ, ಆಟೊ ಮೂಲಕ ಮೈಕಿಂಗ್, ಜಾಗೃತಿ ಜಾಥಾ, ಸಾಮಾಜಿಕ ಜಾಲ ತಾಣಗಳ ಮೂಲಕ ನಿರಂತರ ಪ್ರಚಾರವನ್ನು ಕೈಗೊಳ್ಳಲಾಗುತ್ತಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ಆರ್.ಸಿ.ಹೆಚ್ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರಜಾಪ್ರಭುತ್ವದಲ್ಲಿ ಮತದಾನದ ಪಾತ್ರ ಮಹತ್ವದ್ದು: ಡಾ.ಈರಣ್ಣ ಕೋಸಗಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ತಾಲೂಕು ಆಡಳಿತ, ತಾಲೂಕು ಪಂಚಾಯತ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಇವರುಗಳ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆ–ಯ ಅಂಗವಾಗಿ ರಾಯಚೂರು ತಾಲೂಕಾ ಮಟ್ಟದ ಪ್ರಬಂಧ ಸ್ಪರ್ಧೆ ಕಾರ್ಯಕ್ರಮವು ನಗರದ ಹಾಶ್ಮಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಯಿತ್ತು.

ಕಾರ್ಯಕ್ರಮಕ್ಕೆ ರಾಯಚೂರು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಡಾ. ಈರಣ್ಣ ಕೋಸಗಿ ಅವರು ಸಸಿಗೆ ನೀರು ಹಾಕುವುದರ ಮೂಲಕ ಉದ್ಘಾಟಿಸಿ, ಅವರು ಮಾತನಾಡಿ, ಚುನಾವಣೆಯ ಸಂದರ್ಭದಲ್ಲಿ ಒಂದೊಂದು ಮತವು ಅತ್ಯಮೂಲ್ಯವಾಗಿದೆ. ವಿದ್ಯಾರ್ಥಿಗಳಲ್ಲಿ ಮತದಾನದ ಜಾಗೃತಿಯ ಮೂಡಿಸಲು ಪ್ರತಿ ವರ್ಷ ರಾಷ್ಟ್ರೀಯ ಮತದಾರ ದಿನಾಚರಣೆ ಹಿನ್ನಲೆಯಲ್ಲಿ ಹಲವಾರು ಸ್ಪರ್ಧೆಗಳನ್ನು ಆಯೋಜನೆ ಮಾಡಲಾಗುತ್ತದೆ. ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಅಚ್ಚುಕಟ್ಟಾಗಿ ಭಾಗವಹಿಸಬೇಕು. ವಿದ್ಯಾರ್ಥಿಗಳು ಜಿಲ್ಲಾ, ರಾಜ್ಯಮಟ್ಟಕ್ಕೆ ಆಯ್ಕೆ ಆಗುವುದರ ಮೂಲಕ ರಾಯಚೂರು ತಾಲೂಕಿಗೆ ಕೀರ್ತಿ ತರಬೇಕೆಂದರು.

ಈ ವೇಳೆ ಮತದಾರರ ಸಾಕ್ಷರತಾ ಕ್ಲಬ್ ಜಿಲ್ಲಾ ನೂಡಲ್ ಅಧಿಕಾರಿ ಡಾ.ದಂಡಪ್ಪ ಬಿರಾದಾರ್ ಅವರು ಮಾತನಾಡಿ, ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರ. ಲಿಖಿತ ಸಂವಿಧಾನ ಹೊಂದಿರುವಂತಹ ದೇಶ. ನಮ್ಮ ದೇಶದಲ್ಲಿ ಜನನಾಯಕನ ಆಯ್ಕೆ ಮಾಡಲು ಮತದಾನದ ಮೂಲಕ ಆಯ್ಕೆ ಮಾಡುತ್ತಿರುವುದು ತಮಗೆಲ್ಲ ತಿಳಿದಿರುವ ವಿಷಯ. ಈ ಒಂದು ಪ್ರಬಂಧ ಸ್ಪರ್ಧೆಯನ್ನು ಶಾಲಾ ಮಟ್ಟದಲ್ಲಿ ಮುಖ್ಯ ಗುರುಗಳು ನೇತೃತ್ವದಲ್ಲಿ ನಡೆಯುತ್ತದೆ.




ತಾಲೂಕ ಮಟ್ಟದಲ್ಲಿ ಕ್ಷೇತ್ರ ಶಿಕ್ಷಣ ಅಧಿಕಾರಿಗಳ ಮಾರ್ಗದರ್ಶನದಲ್ಲಿ ನಡೆಯುತ್ತದೆ. ವಿದ್ಯಾರ್ಥಿಗಳು ಈ ಒಂದು ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನವನ್ನು ಆಯ್ಕೆ ಮಾಡಲಾಗುತ್ತದೆ ಎಂದರು.

ಜಿಲ್ಲಾ ಮಟ್ಟಕ್ಕೆ ಪ್ರಥಮ ಹಾಗೂ ದ್ವಿತೀಯ ಸ್ಥಾನವನ್ನು ಪಡೆದಂತ ವಿದ್ಯಾರ್ಥಿಗಳ ಹೆಸರನ್ನ ಕಳಿಸಿಕೊಡಲಾಗುತ್ತದೆ. ತಾಲೂಕ ಜಿಲ್ಲಾ ಮತ್ತು ರಾಜ್ಯ ಮಟ್ಟಕೆ ಆಯ್ಕೆ ಆದಂತಹ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಮತದಾರ ದಿನಾಚರಣೆ ದಿನದಂದು ಪ್ರಶಸ್ತಿ ಪತ್ರ ಮತ್ತು ಬಹುಮಾನವನ್ನು ಕೊಟ್ಟು ಗೌರವಿಸಲಾಗುವುದು ಎಂದರು.

ಈ ವೇಳೆ ಹಾಸ್ಮಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಗುರುಗಳಾದ ಮಹದೇವಪ್ಪ ಮಿರ್ಜಾಪುರ್ ಅವರು ಮಾತನಾಡಿ, ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ, ಮತದಾನದ ಬಗ್ಗೆ ಜೊತೆಗೆ ರಾಷ್ಟ್ರೀಯ ಮತದಾರರ ದಿನಾಚರಣೆ–ಯ ವಿಷಯ ತಿಳಿದುಕೊಳ್ಳಲು ಇದು ಅತ್ಯುತ್ತಮ ಕಾರ್ಯಕ್ರಮ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ತಾಲೂಕ ಮತದಾರ ಸಾಕ್ಷರತಾ ಕ್ಲಬ್ ನೋಡಲ್ ಸಂಯೋಜಕ ಸಿ.ಪಿ.ಓದಿಸೋಮಠ, ಶಿಕ್ಷಣ ಸಂಯೋಜಕ ರಾಘವೇಂದ್ರ, ಶಿಕ್ಷಕರಾದ ಸೌಮ್ಯಶ್ರೀ, ವೆಂಕಟೇಶ ನವಲಿ ಸೇರಿದಂತೆ ತಾಲ್ಲೂಕಿನ ವಿವಿಧ ಪ್ರೌಢಶಾಲಾ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.

## ಸಿಂಧು ಶಿಶು ಸುರಕ್ಷಾ ಯೋಜನೆ ಬಿಡುಗಡೆ



ಮಲ್ಲಮ್ಮ ನುಡಿ ವಾರ್ತೆ ಮುದಗಲ್:

: ಪಟ್ಟಣ ಸಮೀಪದ ನಾಗರಹಾಳ ಗ್ರಾಮದ ಸಿಂಧು ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ. ಸಿಂಧನೂರು ವತಿಯಿಂದ ಸಿಂಧು ಶಿಶು ಸುರಕ್ಷಾ ಯೋಜನೆ ನಾಗರಹಾಳ ಶಾಖೆಯ ಯಿಂದ ರವಿವಾರ ಜರುಗಿತು. ಬಿಜೆಪಿ ಜಿಲ್ಲಾ ಅಧ್ಯಕ್ಷ ವೀರನಗೌಡ ಪಾಟೀಲ್ ಲೆಕ್ಕಿಹಾಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು

ಇಂತಹ ವಿಶಿಷ್ಟ ಹಾಗೂ ಸಾಮಾಜಿಕ ಬದ್ಧತೆ–ಯ ಯೋಜನೆಯನ್ನು ಇದುವರೆಗೆ ಯಾವುದೇ ಸಹಕಾರಿಯೂ ಜಾರಿಗೆ ತಂದಿಲ್ಲ. ಈ ಯೋಜನೆ ರಾಜ್ಯ ಮಟ್ಟದಲ್ಲಿ ಪ್ರಚಾರ ಪಡೆದು ಇತರೆ ಸಹಕಾರಿಗಳಿಗೆ ಪ್ರೇರಣೆಯಾಗಬೇಕು. ಹಿಂದೆ ಮಾನ್ಯ ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಜಾರಿಗೆ ತಂದಿದ್ದ ಭಾಗ್ಯಲಕ್ಷ್ಮಿ ಬಾಂಡ್ ಯೋಜನೆ ಹೋಲುವಂತೆ, ಸರ್ಕಾರಿ ಶಾಲೆಗಳ ಉಳಿವು ಹಾಗೂ ಹೆಣ್ಣು ಮಕ್ಕಳ ಭವಿಷ್ಯ ಭದ್ರತೆಗೆ ಸಿಂಧು ಸಹಕಾರಿಯು ರೂಪಿಸಿರುವ ಈ ಯೋಜನೆ ಮಾನ್ಯ ಪ್ರಧಾನಮಂತ್ರಿಗಳ 'ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯ ಕನ್ನಡಿಯಾಗಿದೆ, ಎಂದು ತಿಳಿಸಿದರು. ಯೋಜನೆಯ ಫಲಾನುಭವಿಗಳ ಮಕ್ಕಳಿಗೆ ಠೇವಣಿ ಪತ್ರಗಳನ್ನು ವಿತರಿಸಿದರು. ಅಂತ್ಯೋದಯ ನಿಧಿ ಹಾಗೂ ಸಾಲ ಸುರಕ್ಷಾ ಯೋಜನೆಯಡಿ ಮೃತರಾದ ಕುಟುಂಬ ಸ್ಥರಿಗೆ ಪರಿಹಾರದಚೆಕ್‌ಗಳನ್ನು ವಿತರಿಸಲಾಯಿತು. ಸಹಕಾರಿಯ 2026 ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಿದರು.

ವೇದಿಕೆಯಲ್ಲಿ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷ ರಾಜಶೇಖರ ಬಿ ರವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿ ಹೊನ್ನಪ್ಪ ಮೇಟಿ ಉಪಾಧ್ಯಕ್ಷ ಕಾಂಗ್ರೆಸ್ ಜಿಲ್ಲಾ ಪ್ರಚಾರ ಸಮಿತಿ. ಹನುಮಂತಪ್ಪ ಕ್ವಾರಿ, ತಾಲೂಕು ಜನಸಂಪನ್ಮೂಲ ಅಧಿಕಾರಿಗಳು ಹಾಗೂ ಸಹಕಾರಿಯ ಉಪಾಧ್ಯಕ್ಷ ಅಮರೇಶ ಹಟ್ಟಿ ಉಪಸ್ಥಿತರಿದ್ದರು.

ಸಹಕಾರಿ ನಿರ್ದೇಶಕ ವಿಜಯಕುಮಾರ ಭಾಜೇಡ್, ಬಸವರಾಜ ಬಿ, ಶಂಕರಗೌಡ, ರಾಮಪ್ಪ ಕೆ, ಮುಖ್ಯ ಕಾರ್ಯವಿರ್ವಾಹಕ ನಾಗರಹಾಳ ಶಾಖಾ ಸಿಬ್ಬಂದಿಗಳು ಸದಸ್ಯರು ಸೇರಿದಂತೆ ಗ್ರಾಮಸ್ಥರು ಇದ್ದರು.

## ಸಿಂಧು ಶಿಶು ಸುರಕ್ಷಾ ಯೋಜನೆ ಸಾಮಾಜಿಕ ಬದ್ಧತೆಯ ಯೋಜನೆಯಾಗಿದೆ – ಹೊನ್ನಪ್ಪ ಮೇಟಿ

ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರು:

ಸಿಂಧು ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಸಿಂಧನೂರು ಇವರು ಜಾರಿಗೆ ತಂದಿರುವ ಸಿಂಧು ಶಿಶು ಸುರಕ್ಷಾ ಯೋಜನೆಯು ಸಾಮಾಜಿಕ ಬದ್ಧತೆಯ ಕಳಕಳಿಯ ಯೋಜನೆಯಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಉಪಾಧ್ಯಕ್ಷರಾದ ಹೊನ್ನಪ್ಪ ಮೇಟಿ ಹೇಳಿದರು.

ಅವರು ತಾಲೂಕಿನ ನಾಗರಹಾಳ ಗ್ರಾಮದಲ್ಲಿ ಸಿಂಧು ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ಜಾರಿಗೆ ತಂದಿರುವ ಸಿಂಧು ಶಿಶು ಸುರಕ್ಷಾ ಯೋಜನೆಯ ಕುರಿತು ಹಾಗೂ 2026 ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡುತ್ತಾ ಈ ಸಹಕಾರಿ ಸಂಘವು ಜನಸಾಮಾನ್ಯರಿಗೆ ಒಳ್ಳೆಯದಾಗುವ ರೀತಿಯಲ್ಲಿ ಕಾರ್ಯಗಳನ್ನು ಮಾಡುತ್ತಾ ಬಂದಿದ್ದು ಇಂತಹ ವಿಶಿಷ್ಟ ಹಾಗೂ ಸಾಮಾಜಿಕ ಬದ್ಧತೆಯ ಯೋಜನೆಯನ್ನು ಇದುವರೆಗೆ ಯಾವುದೇ ಸಹ



ಕಾರಿಯೂ ಜಾರಿಗೆ ತಂದಿಲ್ಲ. ಈ ಯೋಜನೆ ರಾಜ್ಯಮಟ್ಟದಲ್ಲಿ ಪ್ರಚಾರ ಪಡೆದು ಇತರೆ ಸಹಕಾರಿಗಳಿಗೆ ಪ್ರೇರಣೆಯಾಗಬೇಕು ಇಂತಹ ಯೋಜನೆಗಳಿಂದ ಆರ್ಥಿಕವಾಗಿ ಹಿಂದುಳಿದ ಬಡವರ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಅ ನುಕೂಲವಾಗಲಿದ್ದು ಜನತೆ ಎಲ್ಲರೂ ಇಂತಹ ಯೋಜನೆಯ ಲಾಭ ಪಡೆದು ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸುವಲ್ಲಿ ಮುಂದಾಗಬೇಕಾಗಿದೆ ಎಂದು ಅವರು ಹೇಳಿದರು.

ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ ಮಾತನಾಡಿ ಹಿಂದೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಜಾರಿಗೆ ತಂದಿದ್ದ 'ಭಾಗ್ಯಲಕ್ಷ್ಮಿ ಬಾಂಡ್ ಯೋಜನೆ'ಯನ್ನು ಹೋಲುವಂತೆ, ಸರ್ಕಾರಿ ಶಾಲೆಗಳ ಉಳಿವು ಹಾಗೂ ಹೆಣ್ಣು ಮಕ್ಕಳ ಭವಿಷ್ಯ ಭದ್ರತೆಗೆ ಸಿಂಧು ಸಹಕಾರಿಯು ರೂಪಿಸಿರುವ ಈ ಯೋಜನೆ ಮಾನ್ಯ ಪ್ರಧಾನಮಂತ್ರಿಗಳ 'ಬೇಟಿ ಬಚಾವೋ ಬೇಟಿ ಪಡಾವೋ' ಯೋಜನೆಯ ಕನ್ನಡಿಯಾಗಿದೆ," ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಅಂತ್ಯೋದಯ ನಿಧಿ ಹಾಗೂ ಸಾಲ ಸುರಕ್ಷಾ ಯೋಜನೆಯಡಿ ಮೃತರಾದ ಶ್ರೀ ಯಂಕಪ್ಪ ಚನ್ನದಾಸರ ಅವರ ವಾರಸುದಾರರಾದ ಶ್ರೀಮತಿ ದುರಗಮ್ಮ ಗಂಡ ಯಂಕಪ್ಪ ಅವರಿಗೆ ರೂ.75,000/– ಮೊತ್ತದ ಪರಿಹಾರ ಚೆಕ್‌ನ್ನು ವಿತರಿಸಲಾಯಿತು. ಕಾರ್ಯಕ್ರಮಕ್ಕೆ ಸಹಕಾರಿಯ ಅಧ್ಯಕ್ಷರಾದ ರಾಜಶೇಖರ ಬಿ ಅಧ್ಯಕ್ಷತೆ ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಹನುಮಂತಪ್ಪ ಕ್ವಾರಿ, ತಾಲೂಕು ಜನಸಂಪನ್ಮೂಲ ಅಧಿಕಾರಿಗಳು ಹಾಗೂ ಸಹಕಾರಿಯ ಉಪಾಧ್ಯಕ್ಷರಾದ ಅಮರೇಶ ಹಟ್ಟಿ, ಸೇರಿದಂತೆ ಹಲವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಹಕಾರಿಯ ನಿರ್ದೇಶಕರುಗಳಾದ ವಿಜಯಕುಮಾರ್ ಭಾಜೇಡ್, ಬಸವರಾಜ ಬಿ, ಶಂಕರಗೌಡ, ರಾಮಪ್ಪ ಕೆ, ಮುಖ್ಯ ಕಾರ್ಯವಿರ್ವಾಹಕರು , ನಾಗರಹಾಳ ಶಾಖಾ ಸಿಬ್ಬಂದಿಗಳು, ಸದಸ್ಯರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

## ಕ.ಕ ವಿಭಾಗ ಮಟ್ಟದ ಗೀತಗಾಯನ ಸ್ಪರ್ಧೆ



ಮಲ್ಲಮ್ಮನುಡಿವಾರ್ತೆರಾಯಚೂರು:

ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಜಿಲ್ಲಾ ವತಿಯಿಂದ ಜಿಲ್ಲಾ ಮುಖ್ಯ ಆಯುಕ್ತರಾದ ಬಸವರಾಜ ಬೋರೆಡ್ಡಿ ಇವರ ಅಧ್ಯಕ್ಷತೆಯಲ್ಲಿ ಕಲ್ಯಾಣ ಕರ್ನಾಟಕ ವಿಭಾಗ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ನಗರದ ಜಿಲ್ಲಾ ಸ್ಕೌಟ್ ಭವನದಲ್ಲಿ ಆಯೋಜನೆ ಮಾಡಲಾಯಿಗಿತ್ತು. ಮೊದಲಿಗೆ ಧ್ವಜಾರೋಹಣ ನೆರವೇರಿಸಿ ತದನಂತರ ಬಸಪ್ಪ ಗದ್ದಿ ಜಿಲ್ಲಾ ಕಾರ್ಯದರ್ಶಿಗಳು ಇವರು ಎಲ್ಲರನ್ನೂ ಸ್ವಾಗತಿಸಿದರು. ಗದಗಿನ ಜಿಲ್ಲಾ ಆಯುಕ್ತರು ಬಸವರಾಜ ಇವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ತಹಸೀಲ್ದಾರ್ ಸುರೇಶವರ್ಮ ಇವರು ದೀಪಬೆಳಗುವುದರ ಮೂಲಕ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ನಂತರ ಅವರು ಮಾತನಾಡಿ, ಮಕ್ಕಳಲ್ಲಿ ದೇಶಾಭಿಮಾನ, ಭ್ರಾತೃತ್ವ ಭಾವನೆ , ಮಾನವೀಯ ಮೌಲ್ಯ, ಶಿಸ್ತು, ಸಂಯಮ ಬೆಳೆಸುವಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ತುಂಬಾ ಸಹಕಾರಿಯಾಗಿರುತ್ತದೆ ಹಾಗೂ ಮಕ್ಕಳು ಹೆಚ್ಚು ಹೆಚ್ಚು ಇಂತಹ ಸಂಸ್ಥೆಯಲ್ಲಿ ತೊಡಗಿಸಿಕೊಳ್ಳುವಲ್ಲಿರುವುದರಿಂದ ಮಕ್ಕಳು ತಮ್ಮ ಜೀವನವನ್ನು ಉತ್ತಮಗೊಳಿಸುವಲ್ಲಿ ಸಹಕಾರಿಯಾಗುತ್ತದೆ ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗ ಪ್ರೋ. ಯಂಕಣ್ಣ ಪ್ರಾಂಶುಪಾಲರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ರಾಯಚೂರು, ಬಸೀರ್ ಅಹಮದ್ ಉಪಾಧ್ಯಕ್ಷರು ಎ.ಪಿ.ಎಮ್.ಸಿ ರಾಯಚೂರು, ಪ್ರಬಣ್ಣ ಗೌಡ ಪಾಟೀಲ್ ಹಂಚಿನಾಳ, ಮಹೇಶ ರಾಘವೇಂದ್ರ ಹೋಟೆಲ್ ಮಾಲೀಕರು, ಚಿನ್ನಿ ಗುತ್ತಿಗೆದಾರರು, ಶೇಖರ ಪಿ.ಡಿ.ಓ ರಾಯಚೂರು, ಹನುಮಂತಪ್ಪ ಗವಾಯಿ ನಿವೃತ್ತ ಜಿಲ್ಲಾ ಶಿಕ್ಷಣಾಧಿಕಾರಿಗಳು ಹಾಗೂ ಪೋಷಕರು, ಡಾ. ಪ್ರಾಣೇಶ್ ಕುಲಕರ್ಣಿ ಜಿಲ್ಲಾ ಆಯುಕ್ತರು, ಆಲೀಯಾ ಖಾನಂ ಜಿಲ್ಲಾ ಆಯುಕ್ತರು ದಾನಮ್ಮ ಉಪಾಧ್ಯಕ್ಷರು , ಆರ್.ಎಚ್ .ಸಾಗರ್ ಅಧ್ಯಕ್ಷರು ಇವರು ಉಪಸ್ಥಿತರಿದ್ದರು. ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಯಿಂದ ಕಬ್, ಬುಲ್ –ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ಮಕ್ಕಳಿಗೆ ಪ್ರತ್ಯೇಕವಾಗಿ ಗೀತಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಯಿತು, ಸ್ಪರ್ಧೆಯಲ್ಲಿ ಎಲ್ಲ ಮಕ್ಕಳೂ ಬಹಳ ಉತ್ಸಾಹದಿಂದ ಪಾಲ್ಗೊಂಡಿದ್ದರು, ಸ್ಪರ್ಧೆಯಲ್ಲಿ ವಿಜೇತರಾದ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ಮಕ್ಕಳಿಗೆ ಪ್ರಮಾಣ ಪತ್ರ ನಗದು ಬಹುಮಾನ ಪಾರಿತೋಷಕಗಳನ್ನು ನೀಡಲಾಯಿತು ಹಾಗೂ ಭಾಗವಹಿಸಿ ಎಲ್ಲಾ ಮಕ್ಕಳಿಗೂ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಆಯುಕ್ತರಾದ ರಾಮಚಂದ್ರಪ್ಪ ಶಿವಂಗಿ, ಮಲ್ಲನಗೌಡ, ಮಲ್ಲಯ್ಯ ಕಲ್ಲೂರ್, ಶಾಲೆ ನಾಗಪ್ಪ ಹೊರಪ್ಯಾಟಿ ಹಾಗೂ ಶರಣಪ್ಪ, ವಿಶ್ವನಾಥ ಗೌಡ, ನಾಗಭೂಷಣ, ಸಿದ್ದಲಿಂಗೇಶ ಕಡಗದ, ನರಸಿಂಹ ಹಾಗೂ ಯುವ ಸಮಿತಿಯ ಅಧ್ಯಕ್ಷರು ಶಾಂತಮ್ಮ, ಸದಸ್ಯರು ಸೋಮಶೇಖರ, ಕಿರಣ್ ಕುಮಾರ್ ಹಾಗೂ ರೋವರ್ಸ್, ರೇಂಜರ್ಸ್ ಮಕ್ಕಳು ಹಾಗೂ ಪದಾಧಿಕಾರಿಗಳು ಭಾಗವಹಿಸಿದ್ದರು. ಉಪಾಧ್ಯಕ್ಷರು ರೂಪ ಇವರು ಕಾರ್ಯಕ್ರಮವನ್ನು ನಿರೂಪಿಸಿದರು. ಅಂಬಣ್ಣ ನಾಯಕ ಜಿಲ್ಲಾ ಸಂಘಟಕರು ಸ್ಪರ್ಧೆಯನ್ನು ಸಂಘಟಿಸಿದರು.

## ಸರ್ಕಾರಿ ನೌಕರರ ವಾರ್ಷಿಕ ಮಹಾಸಭೆ ಯಶಸ್ವಿ

ಮಲ್ಲಮ್ಮ ನುಡಿ ವಾರ್ತೆ

ಗಂಗಾವತಿ :

ತಾಲೂಕಿನ ಸರ್ಕಾರಿ ನೌಕರರ ಸಂಘದ ವಾರ್ಷಿಕ ಮಹಾಸಭೆಯು ಇತ್ತೀಚಿಗೆ ಜರುಗಿತು. ಈ ಸಭೆಯಲ್ಲಿ ಗಂಗಾವತಿ ತಾಲೂಕ ಸರ್ಕಾರಿ ನೌಕರರ ತಾಲೂಕ ಸಂಘದ ಅಧ್ಯಕ್ಷ ಶಿವಶಂಕರ ಕಲ್ಮಠರವರು ಪ್ರಾಸ್ತಾವಿಕವಾಗಿ ಮಾತನಾಡಿ, "ಸರ್ಕಾರಿ ನೌಕರರ ಸಂಘದ ವತಿಯಿಂದ ಅನೇಕ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಂಡಿರುವುದು ಸಂತೋಷದ ವಿಷಯ. ರಾಜ್ಯ ಅಧ್ಯಕ್ಷರಾದ ಸಿ.ಎಸ್.ಷಡಕ್ಷರಿ ಅವರ ಅವಧಿಯಲ್ಲಿ 25ಕ್ಕೂ ಹೆಚ್ಚು ಮಹತ್ವದ ಆದೇಶಗಳನ್ನು ಸರ್ಕಾರಿ ನೌಕರರಿಗೆ ಜಾರಿಗೆ ತಂದಿರುವುದು ಹೆಮ್ಮೆಯ ಸಂಗತಿಯಾಗಿದೆ. ಹಾಗೆಯೇ ನಮ್ಮ ತಾಲೂಕಿನಲ್ಲಿ 66 ಕ್ರೀಡಾಪಟುಗಳು ಜಿಲ್ಲಾ ಮುಟ್ಟದಿಂದ ರಾಜ್ಯಮಟ್ಟಕ್ಕೆ ಆಯ್ಕೆಯಾಗಿ ಭಾಗವಹಿಸಿ ತಾಲೂಕಿಗೆ ಕೀರ್ತಿಯನ್ನು ತಂದಿದ್ದಾರೆ. ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಪಾಲ್ಗೊಂಡ ಕ್ರೀಡಾಪಟುಗಳಿಗೆ ಸಂಘದ ವತಿಯಿಂದ ಪ್ರಯಾಣ ಭತ್ಯೆಯನ್ನು ನೀಡಿರುವುದು ರಾಜ್ಯದಲ್ಲಿಯೇ ಪ್ರಥಮ ಸಂಘವಾಗಿದೆ ಎನ್ನಬಹುದು. ಅಲ್ಲದೆ ಸರ್ಕಾರಿ ನೌಕರರಿಗೆ ಅನೇಕ ಸೌಲಭ್ಯಗಳನ್ನು ಒದಗಿಸಿದ್ದೇವೆ. ಟ್ಯಾಕ್ಸ್ ಫಾರ್ಮ್ ನಂಬರ್ 16, ಮೃತರ ಕುಟುಂಬಕ್ಕೆ 5000 ರೂಪಾಯಿಗಳ ಸಹಾಯ



ಧನ, ನಿವೃತ್ತ ನೌಕರರಿಗೆ ಸನ್ಮಾನ ಮುಂತಾದ ಯೋಜನೆಗಳನ್ನು ಕೈಗೊಂಡಿದ್ದೇವೆ ಎಂದರು.

ನಂತರ ಕಾರ್ಯಕ್ರಮವನ್ನು ಉದ್ಘಾಟಿಸಿದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಉಪಾಧ್ಯಕ್ಷರು ಹಾಗೂ ಕೊಪ್ಪಳ ಜಿಲ್ಲಾ ಸರ್ಕಾರಿ ನೌಕರರ ಜಿಲ್ಲಾ ಅಧ್ಯಕ್ಷರಾದ ನಾಗರಾಜ ಜುಮ್ಮಣ್ಣನವರ್ ಮಾತನಾಡಿ, " ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘಕ್ಕೆ 103 ವರ್ಷಗಳ ಇತಿಹಾಸವಿದೆ. ಸಂಘವು ನೌಕರರ ಬೇಡಿಕೆಗಳ ಪರವಾಗಿ ಹೋರಾಟಗಳನ್ನು ಮಾಡುತ್ತಾ ಬಂದಿದ್ದು, ಗಂಗಾವತಿಯ ಮಹಿಳಾ ಶಿಕ್ಷಕಿಯರ ಕರೆಯ ಮೇರೆಗೆ ರಾಜ್ಯಾಧ್ಯಕ್ಷರನ್ನು ಸಂಪರ್ಕಿಸಿ, ಕ್ಯಾನ್ಸರ್ ಪೀಡಿತ ಹಾಗೂ ಕಿಡ್ನಿ ಡಯಾಲಿಸಿ ಪೀಡಿತ ನೌಕರರಿಗೆ ವೇತನ ಸಹಿತ ರಜೆ ಮಂಜೂರು ಮಾಡಿರುವುದನ್ನು ತಿಳಿಸಲು ಹೆಮ್ಮೆಯಾಗುತಿದೆ ಎಂದರು. ಮುಂದುವರಿದು ಮಾತನಾಡಿದ ಅವರು, "ನೌಕರರ ಸಮಸ್ಯೆಗಳಿಗೆ ಸದಾ ಸ್ಪಂದಿಸುವ ಕ್ರಿಯಾಶೀಲ ಸಿ.ಎಸ್. ಷಡಕ್ಷರಿಯವರ ನೇತೃತ್ವದಲ್ಲಿ ಮುಂದಿನ ದಿನಗಳಲ್ಲಿ ಕೇಂದ್ರ ಮಾದರಿ ವೇತನ ಹಾಗೂ ಎನ್.ಪಿ.ಎಸ್ ನಿಂದ ಓ.ಪಿ.ಎಸ್ ಜಾರಿಗೆಗೊಳಿಸುವಲ್ಲಿ ಶ್ರಮಿಸುತ್ತಿರುವುದಾಗಿ ಆಶಾಭಾವನೆಯೊಂದಿಗೆ ನಾವೆಲ್ಲರೂ ಇದ್ದೇವೆ ಎಂದು ಮಾಹಿತಿಯನ್ನು ಹಂಚಿಕೊಂಡರು. ಸರ್ಕಾರಿ ನೌಕರರ ಸಂಘಟನೆ ಕಟ್ಟುವಲ್ಲಿ ಶ್ರಮಿಸಿದ ಎಲ್ಲಾ ನೌಕರರನ್ನು ಹಾಗೂ ಮಹಿಳಾ ನೌಕರರ ಪಾತ್ರದ ಬಗ್ಗೆ ಸ್ಮರಿಸಿದರು. ವೇದಿಕೆಯ ಮೇಲೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಉಪಸ್ಥಿತರಿದ್ದ, ನಗರಸಭೆಯ ಪೌರಾಯುಕ್ತರು ಮಾತನಾಡಿ, "ತಮ್ಮ ಇಪ್ಪತ್ತು ವರ್ಷದ ಸೇವೆಯಲ್ಲಿ ಸರ್ಕಾರಿ ನೌಕರರ ಸಂಘಟನೆಯ ಕಾರ್ಯದ ಬಗ್ಗೆ ಸ್ಮರಿಸಿದರು. ಸರ್ಕಾರಿ ನೌಕರರು ಸದಾ ಕಾಲವು ಒತ್ತಡದಲ್ಲಿಯೇ ಸೇವೆಯನ್ನು ಸಲ್ಲಿಸುತಿದ್ದೇವೆ ಹಾಗಾಗಿ ಪ್ರತಿಯೊಬ್ಬರೂ ಧೈರ್ಯದಿಂದ ಸಾರ್ವಜನಿಕರ ಕೆಲಸವನ್ನು ನಿರ್ವಹಿಸಬೇಕು ಎಂದು ಹೇಳಿದರು. ವೃಂದ ಸಂಘಗಳಿಗೆ ಸರ್ಕಾರಿ ನೌಕರರ ಸಂಘವು ಕಳಸ ವಿದ್ದಂತೆ. ಇದು ಸರ್ಕಾರದ ಯೋಜನೆಗಳನ್ನು ಸಾರ್ವಜನಿಕರಿಗೆ ಸಮರ್ಪಕವಾಗಿ ಮುಟ್ಟುವಂತೆ ಕೆಲಸ ನಿರ್ವಹಿಸುತ್ತದೆ ಎಂದು ತಿಳಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾತನಾಡಿ, "ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು ಅವುಗಳನ್ನು ನಿವಾರಿಸಲು ಸರ್ಕಾರಿ ನೌಕರರ ಸಂಘವು ಅನೇಕ ಪರಿಹಾರೋಪಾಯದ ಮಾರ್ಗಗಳನ್ನು ಕಂಡುಕೊಳ್ಳಬೇ–ಕೆಂದು ಸಲಹೆ ನೀಡಿದರು. ನಂತರ ಮಾತನಾಡಿದ ಶ್ರೀಯುತ ಯಮನಪ್ಪ ಕೃಷಿ ಉತ್ಪನ್ನ ಮಾರುಕಟ್ಟೆಯ ಕಾರ್ಯದರ್ಶಿಗಳು ಹಾಗೂ ಕಾರಟಗಿ ತಾಲೂಕ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಹನುಮಂತಪ್ಪ ನಾಯಕರವರು ಸಂಘದ ಬಗ್ಗೆ ಮಾಹಿತಿಯನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷರಾದ ಡಾ.ಈಶ್ವರ ಶಿ. ಸವಡಿ, ಬಸವರಾಜ ಸ್ವಾಮಿ, ಎಲ್ಲಾ ಇಲಾಖೆಯ ತಾಲೂಕ ಮುಖ್ಯಸ್ಥರು ಹಾಗೂ ವಿವಿಧ ವೃಂದದ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು ನೌಕರರು ಹಾಜರಾಗಿದ್ದರು. ಅತಿಥಿಗಳನ್ನು ಶರಣಪ್ಪ ಹಕ್ಕಂಡಿ ಸ್ವಾಗತಿಸಿದರೆ, ಉಮೇಶ ವರದಿ ವಾಚನ ಮಾಡಿದರು. ವಾರ್ಷಿಕ ಲೆಕ್ಕಪತ್ರ ವರದಿಯನ್ನು ಶ್ರೀನಿವಾಸ್ ವೆಂಕಟರಾವ್ ಮಂಡಿಸಿದರು. ಶ್ರೀಮತಿ ಜಯಶ್ರೀ ಹಕ್ಕಂಡಿ ನಿರೂಪಿಸಿದರು ಈ ಸಂದರ್ಭದಲ್ಲಿ ನೌಕರರ ಸಂಘದ ಪದಾಧಿಕಾರಿಗಳು ಹಾಗೂ ನಿರ್ದೇಶಕರುಗಳು ಹಾಜರಿದ್ದರು.

## ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಕೃಷಿ ವಿಜ್ಞಾನಿಗಳ ತಂಡ ಭೇಟಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಡಿಸೆಂಬರ್ 15 ರಾಯಚೂರು ತಾಲ್ಲೂಕಿನ ದುಗನೂರಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚಿಗೆ ಕೃಷಿ ವಿಜ್ಞಾನಿಗಳ ತಂಡ ಭೇಟಿ ನೀಡಿ, ಮಕ್ಕಳಿಗೆ ಪೌಷ್ಟಿಕ ತೋಟದ ಮಹತ್ವದ ಕುರಿತು ಬೇಸಾಯಿ ಶಾಸ್ತ್ರ ವಿಭಾಗದ ವಿಜ್ಞಾನಿ ಡಾ.ಮಲ್ಲರೆಡ್ಡಿ ಅವರು ತಿಳಿಸಿದರು.

ಮನುಷ್ಯನ ಜೀವನಕ್ಕೆ ಬಹಳ ಮುಖ್ಯವಾದುದ್ದು, ಆರೋಗ್ಯ ಇದರ ರಕ್ಷಣೆ ಪೌಷ್ಟಿಕ ಆಹಾರದಿಂದ ಸಾದ್ಯ ಹಾಗಾಗಿ ಪೌಷ್ಟಿಕ ತೋಟ ಬೆಳಸುವುದು ಬಹಳ ಪ್ರಮುಖವಾಗಿದೆ.

ಈ ವೇಳೆ ಹಿರಿಯ ಕೃಷಿ




ವಿಜ್ಞಾನಿಗಳಾದ ಡಾ.ಹೇಮಲತಾ ಅವರು ಮಕ್ಕಳಿಗೆ ತೋಟದ ತಯಾರಿ ಹೇಗೆ ಮಾಡಿಕೊಳ್ಳಬೇಕು ಎಂದು ಪ್ರಾತ್ಯಕ್ಷೆಯನ್ನು ಮಾಡಿ ಮಾರ್ಗದರ್ಶನ ಮಾಡಿದರು. ಈ ವೇಳೆ ಕೀಟಶಾಸ್ತ್ರದ ವಿಜ್ಞಾನಿಗಳಾದ ಡಾ.ಶ್ರೀವಾಣಿ ಅವರು ಕೀಟಗಳ ಕುರಿತು ಅದರಲ್ಲಿ ವಿಶೇಷವಾಗಿ ಜೇನಿನ ಹುಳುಗಳ ಮಾಹಿತಿಯನ್ನು ನೀಡಿ ಮಕ್ಕಳಿಗೆ,

ಮಕರಂದ ಎಲ್ಲಿ ಇರುತ್ತೆ, ಜೇನು ನೊಣ ಮಕರಂದವನ್ನು ಯಾವ ವಿಧದಲ್ಲಿ ಹುಡುಕುತ್ತವೆ ಎಂದು ಚಟುವಟಿಕೆ ಮೂಲಕ ವಿವರಿಸಿದರು. ಈ ವೇಳೆ ಆಹಾರ ಸಂಸ್ಕರಣೆ ವಿಭಾಗದ ವಿಜ್ಞಾನಿಗಳಾದ ಡಾ.ವೀಣಾ ಅವರು ಶುದ್ಧ ಮತ್ತು ಸಂಸ್ಕರಣೆಯ ಆಹಾರ ನಿತ್ಯ ಜೀವನಕ್ಕೆ ಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಶಾಲೆಯ ಮುಖ್ಯಗುರುಗಳಾದ ಗಫೂರ್, ಸಹಶಿಕ್ಷಕರಾದ ಚಂದ್ರಶೇಖರ್ ನಾಯ್ಕ್. ಸಂಪತರಾಜ್, ಪುಲಿ ಅಂಜಿನೇಯ್ಯ, ಮಲ್ಲೇಶ, ನರೇಶ ಕುಮಾರ್, ನವೀನ್ ಕುಮಾತ್, ಮಹೇಶ ಕುಮಾರ್ ಸೇರಿದಂತೆ ಇತರರು ಇದ್ದರು.

## ಸಿರುಗುಪ್ಪ: ಬಿಡಾಡಿ ದನಕರುಗಳನ್ನು ಸುಪರ್ದಿಯಲ್ಲಿಯೇ ಕಟ್ಟಿಕೊಳ್ಳಿ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,:ಸಿರುಗುಪ್ಪ ನಗರಸಭೆ ವ್ಯಾಪ್ತಿಯಲ್ಲಿನ ಬಿಡಾಡಿ ದನಕರುಗಳ ಮಾಲೀಕರು ತಮ್ಮ ಮನೆಯಲ್ಲಿಯೇ ಕಟ್ಟಿಕೊಂಡು ಪೋಷಿಸಬೇಕು ಎಂದು ಸಿರುಗುಪ್ಪ ನಗರಸಭೆ ಪೌರಾಯುಕ್ತ ಗಂಗಾಧರ ಅವರು ತಿಳಿಸಿದ್ದಾರೆ.ಸಿರುಗುಪ್ಪ ಪಟ್ಟಣದಲ್ಲಿ ಬಿಡಾಡಿ ದನಕರುಗಳ ಹಾವಳಿ ಹೆಚ್ಚಾಗಿದ್ದು, ರಸ್ತೆ ಸೇರಿದಂತೆ ಸಾರ್ವಜನಿಕರಿಗೆ, ವಾಹನ ಸವಾರರಿಗೆ ಸಮಸ್ಯೆಯಾಗುತ್ತಿದೆ. ಹಾಗಾಗಿ ಮಾಲೀಕರು ತಮ್ಮ ತಮ್ಮ ದನಕರುಗಳನ್ನು ತಮ್ಮ ಸುಪರ್ದಿಯಲ್ಲಿಯೇ ಕಟ್ಟಿಕೊಳ್ಳಬೇಕು. ತಪ್ಪಿದಲ್ಲಿ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಾಮನೂರು ಶಿವಶಂಕರಪ್ಪ ಅವರ ನಿಧನಕ್ಕೆ ಸಂತಾಪ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ .ಮಾಜಿ ಸಚಿವರು, ಶಾಸಕರು, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು ಆದ ಶಾಮನೂರು



ಶಿವಶಂಕರಪ್ಪಅವರನಿಧನವಾರ್ತೆನೋವುಂಟುಮಾಡಿದೆ ಎಂದು ಕೆಪಿಸಿಸಿ ಮಾಧ್ಯಮ ವಾಕ್ತಾರರು, ರಾಜ್ಯ ಸಂಯೋಜಕರು ಪ್ರಚಾರ ಸಮಿತಿ ವೆಂಕಟೇಶ್ ಹೆಗಡೆ.ತಮ್ಮಸುದೀರ್ಘ ಸಾರ್ವಜನಿಕ ಜೀವನದಲ್ಲಿ ಅಪವಾದ, ಆರೋಪಗಳಿಂದ ದೂರವಿದ್ದು, ಸಿಕ್ಕ ಅಧಿಕಾರವನ್ನು ಜನಕಲ್ಯಾಣಕ್ಕಾಗಿಯೇ ಮುಡುಪಿಟ್ಟಿದ್ದ ಮುತ್ಸದ್ದಿ ನಾಯಕನ ಅಗಲಿಕೆಯಿಂದ ಸಮಾಜ ಬಡವಾಗಿದೆ. ದಾವಣಗೆರೆ ಜಿಲ್ಲೆಯನ್ನು ಮಾದರಿ ಜಿಲ್ಲೆಯಾಗಿಸಿದ ಶಿವಶಂಕರಪ್ಪನವರ ಕಾರ್ಯಗಳು ಅವರನ್ನು ಜನಮಾನಸದಲ್ಲಿ ಚಿರಸ್ಥಾಯಿಯಾಗಿಸಲಿದೆ. ಮೃತರ ಆತ್ಮ-ಕ್ಕೆ ಚಿರಶಾಂತಿ ದೊರಕಲಿ, ಅವರ ಪುತ್ರ ಗಣಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಮತ್ತವರ ಕುಟುಂಬಕ್ಕೆ ಈ ನೋವು ಭರಿಸುವ ಶಕ್ತಿ ಸಿಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

## ಬೈಕ್ಗಳನ್ನು ಸಾಗಿಸುತ್ತಿದ್ದ ಲಾರಿಗೆ ಆಕಸ್ಮಿಕ ಬೆಂಕಿ



ಬಳ್ಳಾರಿ,: ಯಮಹಾ ಕಂಪನಿಯ ಬೈಕ್ ಗಳನ್ನು ಸಾಗಿಸುತ್ತಿದ್ದ ಲಾರಿಗೆ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡಿದ್ದು, ರಸ್ತೆಯಲ್ಲೇ 40 ಬೈಕ್‌ಗಳು ಸಂಪೂರ್ಣವಾಗಿ ಸುಟ್ಟು ಕರಕಲಾಗಿರುವ ಘಟನೆ ಸೋಮವಾರ ನಡೆದಿದೆ.

ಇಂದು ಬೆಳಗ್ಗೆ ಬಳ್ಳಾರಿ ನಗರದ ಅನಂಪುರ ರಸ್ತೆಯ ಆಟೋ ನಗರ ಪ್ರದೇಶದಲ್ಲಿ ರಸ್ತೆ ಬದಿ ನಿಂತಿದ್ದ ಲಾರಿಯಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದ್ದು, ಕೆಲವೇ ಕ್ಷಣಗಳಲ್ಲಿ ಲಾರಿ ಹಾಗೂ ಬೈಕ್‌ಗಳು ಹೊತ್ತಿ ಉರಿದಿವೆ. ಚೆನ್ನೈಯಿಂದ ಬಳ್ಳಾರಿಗೆ ಬೈಕ್‌ಗಳನ್ನು ಸಾಗಿಸುತ್ತಿದ್ದ ಲಾರಿಯಲ್ಲಿ ಸಂಭವಿಸಿದ ಈ ಅವಘಡದಲ್ಲಿ ಸುಮಾರು 45 ಲಕ್ಷ ರೂಪಾಯಿ ಮೌಲ್ಯದ 40 ಬೈಕ್‌ಗಳು ಬೆಂಕಿಗೆ ಆಹುತಿಯಾಗಿವೆ. ಅದೃಷ್ಟವಶಾತ್ ಲಾರಿ ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಮಾಹಿತಿ ಪಡೆದ ತಕ್ಷಣ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯ ಕೈಗೊಂಡು ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ.ಘಟನೆಯಿಂದ ಕೆಲಕಾಲ ಸಂಚಾರ ಅಸ್ತವ್ಯಸ್ತವಾಗಿದ್ದು, ನಂತರ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದೆ.

ಈ ಸಂಬಂಧ ಬಳ್ಳಾರಿಯ ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಬೆಂಕಿ ಅವಘಡದ ನಿಖರ ಕಾರಣ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

## ಅನಾಮಧೇಯ ಮೃತ ವೃದ್ಧೆಯ ವಾರಸುದಾರರ ಪತ್ತೆಗೆ ಮನವಿ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ: ತಾಲ್ಲೂಕಿನ ಮೋಕಾ ಗ್ರಾಮದ ಈಶ್ವರ ದೇವಸ್ಥಾನದ ಬಳಿ ಸುಮಾರು 70 ರಿಂದ 75 ವರ್ಷದ ಅನಾಮಧೇಯ ವೃದ್ಧೆಯು ಡಿ.09 ರಂದು ಅನಾರೋಗ್ಯದಿಂದ ಮೃತಪಟ್ಟಿದ್ದು, ವಾರಸುದಾರರ ಮಾಹಿತಿ ಇರುವುದಿಲ್ಲ. ಈ ಕುರಿತು ಮೋಕಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮೃತಳ ವಾರಸುದಾರರ ಪತ್ತೆಗೆ ಸಹಕರಿಸಬೇಕು ಎಂದು ಪೊಲೀಸ್ ಸಬ್ ಇನ್ಸ್ ಪೆಕ್ಟರ್ ಮನವಿ ಮಾಡಿದ್ದಾರೆ.ಚಹರೆ: 4.5 ಅಡಿ ಎತ್ತರ, ತೆಳ್ಳನೇಯ ಮೈಕಟ್ಟು ಹೊಂದಿದ್ದು, ತಿಳಿ ಹಸಿರು ಬಣ್ಣದ ಸೀರೆ, ಆರೆಂಜ್ ಬಣ್ಣದ ಸ್ವೆಟರ್ ಧರಿಸಿರುತ್ತಾಳೆ.ವಾರಸುದಾರರ ಬಗ್ಗೆ ಮಾಹಿತಿ ಇದ್ದಲ್ಲಿ ಮೋಕಾ ಪೊಲೀಸ್ ಠಾಣೆಯ ಪಿಎಸ್‌ಐ ದೂ.08292-293228, ಮೊ.9480803050, ಪಿಡಿ ಹಳ್ಳಿ ವೃತ್ತ ಸಿಪಿಐ ದೂ.08392-270480, ಮೊ.9480803031 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸ್ವಯಂಪ್ರೇರಿತ ರಕ್ತದಾನ ಶಿಬಿರ ಯಶಸ್ವಿ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ: ವೀರಶೈವ ವಿದ್ಯಾವರ್ಧಕ ಸಂಘದ ತೊಗರಿ ವೀರಮಲ್ಲಪ್ಪ ಸ್ಮಾರಕ ಔಷಧ ವಿಜ್ಞಾನ ಮಹಾವಿದ್ಯಾಲಯ, ಬಳ್ಳಾರಿ ಹಾಗೂ ಹೆಚ್.ಡಿ.ಎಫ್.ಸಿ. ಬ್ಯಾಂಕ್, ಬಳ್ಳಾರಿ ಶಾಖೆಯ ಸಹಯೋಗದಲ್ಲಿ ದಿನಾಂಕ 15-12-2025 ರಂದು ಮಹಾವಿದ್ಯಾಲಯದ ಆವರಣದಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ತೊಗರಿ ವೀರಮಲ್ಲಪ್ಪ ಸ್ಮಾರಕ ಔಷಧ ವಿಜ್ಞಾನಮಹಾವಿದ್ಯಾಲಯದಅಧ್ಯಕ್ಷರಾದ ಶ್ರೀ ಎಲ್.ಟಿ. ಶೇಖರ್ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ವೈದ್ಯಕೀಯ ಅಧೀಕ್ಷಕರಾದ ಡಾ॥ ಇಂದುಮತಿ ವಿ ಅವರು ಭಾಗವಹಿಸಿ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅವರು ತಮ್ಮ ಭಾಷಣದಲ್ಲಿ ಇಂದಿನ ಸಂದರ್ಭದಲ್ಲಿ ರಕ್ತದಾನದ ಅಗತ್ಯತೆ ಹಾಗೂ ಅದರ ಮಹತ್ವವನ್ನು ವಿವರಿಸಿದರು.




ವೇದಿಕೆಯ ಮೇಲೆ ಉಪಸ್ಥಿತರಿದ್ದ ಕಾಲೇಜು ಆಡಳಿತ ಮಂಡಳಿಯ ಸದಸ್ಯರಾದ ಡಾ॥ ಸೋಮನಾಥ ಎಸ್.ಎಂ ಅವರು ಮಾತನಾಡಿ, ಜನಸಾಮಾನ್ಯರಲ್ಲಿ ರಕ್ತದಾನದ ಮಹತ್ವ ಮತ್ತು ಸಾಮಾಜಿಕ ಕಾಳಜಿಯ ಕುರಿತು ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮವನ್ನು ಕಾಲೇಜಿನ ಪ್ರಾಧ್ಯಾಪಕರಾದ ಡಾ॥ ಆರ್. ಎಲ್.ಎನ್. ಮೂರ್ತಿ ಅವರು ನಿರೂಪಿಸಿದರು. ಈ ಶಿಬಿರದಲ್ಲಿ ತೊಗರಿ ವೀರಮಲ್ಲಪ್ಪ ಸ್ಮಾರಕ ಔಷಧ ವಿಜ್ಞಾನ ಮಹಾವಿದ್ಯಾಲಯದ 100 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿ, ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ರಕ್ತನಿಧಿಗೆ ರಕ್ತವನ್ನು ಸಮರ್ಪಿಸಿದರು.

ರಕ್ತದಾನ ಶಿಬಿರವು ಅತ್ಯಂತ ಯಶಸ್ವಿಯಾಗಿ ನೆರವೇರಿದ್ದು, ವಿದ್ಯಾರ್ಥಿಗಳ ಸಾಮಾಜಿಕ ಜವಾಬ್ದಾರಿಯನ್ನು ಪ್ರತಿಬಿಂಬಿಸಿತು.

# ಸಿಂಧನೂರು ಹೇಗಿರಬೇಕು ಮಾಧ್ಯಮ

## ಮುಖಂಡರೊಂದಿಗೆ ಎಂಎಲ್ಸಿ ಬಸನಗೌಡ ಬಾದರ್ಲಿ ಸಂವಾದ.

ಮಲ್ಲಮ್ಮನುಡಿವಾರ್ತೆ ಸಿಂಧನೂರು: ಕ್ಷೇತ್ರ ಅಭಿವೃದ್ಧಿ ಹೊಂದಿಲ್ಲ ಡ್ರಗ್ಸ್ ಗಾಂಜಾ ಮಾಫಿಯಾ ನಿಲ್ಲಬೇಕು. ಶಿಕ್ಷಣ ಆರೋಗ್ಯಸಮಗ್ರಅಭಿವೃದ್ಧಿಯಾಗಬೇಕು. ಎಂಎಲ್ಸಿ ಬ.ಬಾದರ್ಲಿ

ಸಿಂಧನೂರು. ಸಿಂಧನೂರು ಕ್ಷೇತ್ರ ಮಾದರಿ ಕ್ಷೇತ್ರವನ್ನಾಗಿ ಮಾಡುವ ನಿಟ್ಟಿನಲ್ಲಿ ಮಾಧ್ಯಮ ಪಾತ್ರ ಬಹು ದೊಡ್ಡದಾಗಿದ್ದು. ಮಾಧ್ಯಮ ಸಲಹೆ ಪಡೆದು ಸಿಂಧನೂರು ಕ್ಷೇತ್ರ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇನೆ ಎಂದು ವಿಧಾನ ಪರಿಷತ್ ಶಾಸಕ ಬಸನಗೌಡ ಬಾದರ್ಲಿ ಹೇಳಿದರು.ನಗರದ ರಾಜ್ ಮಹಲ್ ಖಾಸಗಿ ಹೋಟೆಲ್ ನಲ್ಲಿ ಶನಿವಾರದಂದು ನವ ಸಂಕಲ್ಪ... ನವ ಸಿಂಧನೂರು ಮತ್ತು ನಮ್ಮಕನಸಿನ ಸಿಂಧನೂರು ಹೆಂಗಿರಬೇಕು...? ಕಲ್ಪನೆಯೊಂದಿಗೆ ಮಾಧ್ಯಮಗಳೊಂದಿಗೆ ಅವರು ಸಂವಾದ ನಡೆಸಿದರು.

ಈ ಹಿನ್ನೆಲೆಯಲ್ಲಿ ನವ ಸಿಂಧನೂರು ನವ ಸಂಕಲ್ಪ ಯಾತ್ರೆಯಲ್ಲಿ ರಾಜಕಾರಣಿಗಳು ಅಧಿಕಾರಿಗಳು ಸಂಘಟನೆಗಳು ವಾಣಿಜ್ಯೋದ್ಯಮ ಮುಖಂಡರಗಳೊಂದಿಗೆಮಾಧ್ಯಮಗಳು ಪಾತ್ರಬಹಳಷ್ಟುಪ್ರಮುಖವಾದದ್ದು. ಕ್ಷೇತ್ರ ಅಭಿವೃದ್ಧಿ ಹೊಂದಬೇಕಾದರೆ ಡ್ರಗ್ಸ್ ದಂಧೆ ಗಾಂಜಾ ಸಹಿತ ಹಲವು ಅನೈತಿಕ ಚಟುವಟಿಕೆಗಳ ಸಂಪೂರ್ಣವಾಗಿ ನಿಲ್ಲಿಸಬೇಕು. ಶಿಕ್ಷಣ.ಆರೋಗ್ಯ ಸೇರಿದಂತೆ ಸಮಗ್ರ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುತ್ತದೆ. ಈಗಾಗಲೇ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರವೇ ಎಲ್ಲಾ ಕೆಲಸಗಳನ್ನೂ ಮಾಡುತ್ತಾ ಬಂದಿದೆ. ಇನ್ನೂ ಅನೇಕ ಸಮಸ್ಯೆಗಳು ನಿವಾರಣೆಯಾಗಿ ಮಾಧ್ಯಮಗಳು ಸಲಹೆ ಸಹಕಾರ



ನನಗೆ ಪ್ರಮುಖವಾಗಿದ್ದು. ಏಕೆಂದರೆ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕೆಲಸ ನಿಮ್ಮದಾಗಿದ್ದು.ಸಮಗ್ರ ಅಭಿವೃದ್ಧಿಗಾಗಿ ನಿಮ್ಮ ಸಲಹೆಗಳೊಂಗೆ ನಾನು ಕ್ಷೇತ್ರ ಅಭಿವೃದ್ಧಿ ಕೆಲಸಗಳನ್ನು ಮಾಡಿವೆ ಎಂದು ಹೇಳಿದರು.

ಕೆಲ ಮಾಧ್ಯಮ ಮಿತ್ರರು ಮಾತನಾಡಿ ಸಿಂಧನೂರು ಕ್ಷೇತ್ರದಲ್ಲಿ ಜ್ವಲಂತ ಸಮಸ್ಯೆಗಳು ಇವೆ. ಶಿಕ್ಷಣ. ಆರೋಗ್ಯ. ಬೈಪಾಸ್ ರಸ್ತೆ. ನಗರದಲ್ಲಿ ಟ್ರಾಫಿಕ್ ಜಾಮ್. ನಗರ ಸಭೆ ಇಲಾಖೆಯ ಫಾರಂ10. ಪಡೆಯುವುದಕ್ಕೆ ಸಮಸ್ಯೆ. ಆರೋಗ್ಯ ಇಲಾಖೆ ಸೇರಿದಂತೆ ಕೆಲವು ಇಲಾಖೆಗಳಲ್ಲಿ ಅಧಿಕಾರಿಗಳು ನಿರ್ಲಕ್ಷ್ಯಧೋರಣೆ. ಹಾಗೂ ಸಿಬ್ಬಂದಿ ವರ್ಗ ಇಲ್ಲದಿರುವುದು.ಪೊಲೀಸ್ ಇಲಾಖೆಯ ಅಧಿಕಾರಿಗಳು ಕಾರ್ಯ ವೈಫಲ್ಯ.

ಸೇರಿದಂತೆ ಹಲವು ಬೇಡಿಕೆಗಳು ಮತ್ತು ಸಮಸ್ಯೆಗಳು ಬಗ್ಗೆ ಸುದೀರ್ಘವಾಗಿ ನವ ಸಿಂಧನೂರು ನವ ಸಂಕಲ್ಪ... ಹಾಗೂ ಕನಸಿನ ಸಿಂಧನೂರು ಎಂಬು ಪತ್ರಕರ್ತರ ಸಂವಾದ ಕಾರ್ಯಕ್ರಮದಲ್ಲಿ ಮಾಧ್ಯಮ ಮಿತ್ರರು ಭಾಗವಹಿಸಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ. ಆರ್ ಡಿ ಸಿಸಿ ಬ್ಯಾಂಕ್ ನಿರ್ದೇಶಕರು ಸೋಮನಗೌಡ ಬಾದರ್ಲಿ.

# ಸುಪ್ತ ಪ್ರತಿಭೆಗಳ ಅನಾವರಣಕ್ಕೆ ಕಲೋತ್ಸವ

## ಕಾರ್ಯಕ್ರಮ ಸೂಕ್ತ ವೇದಿಕೆ. ಇಮಾಮ್ ನಿಯಾಜಿ ಹೇಳಿಕೆ.



ಮಲ್ಲಮ್ಮ ನುಡಿ ವಾರ್ತೆ

ವಿಜಯನಗರ: ಮಕ್ಕಳಲ್ಲಿನ ಸುಪ್ತ ಪ್ರತಿಭೆಗಳನ್ನು ಸೂಕ್ತವೇದಿಕೆ ಕಲ್ಪಿಸುವ ಮೂಲಕ ಅನಾವರಣಗೊಳಿಸಲು ಜಿಲ್ಲಾ ಮಟ್ಟದಲ್ಲಿ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮ ಪ್ರಮುಖ ಪಾತ್ರ ವಹಿಸಿದೆ ಎಂದು ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎನ್.ಎಫ್.ಇಮಾಮ್ ನಿಯಾಜಿ ಹೇಳಿದರು.

ನಗರದ ಶ್ರೀಮಾರ್ಕಂಡೇಶ್ವರ ಶಾಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆಯಿಂದ ಏರ್ಪಡಿಸಿದ್ದ 2025-26ನೇ ಸಾಲಿನ ವಿಜಯನಗರ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಸೋಮವಾರ ಮಾತನಾಡಿದರು. ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿ ಕೇವಲ ಪಠ್ಯಪುಸ್ತಕದ ಶಿಕ್ಷಣ ನೀಡುವುದರ ಜತೆಗೆ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಆದ್ಯತೆ ನೀಡಿ ಇಂತಹ ಪ್ರತಿಭಾ ಕಾರಂಜಿ ಕಾರ್ಯಕ್ರಮಗಳನ್ನು ಆಯೋಜಿಸುವುದು ಅಗತ್ಯವಾಗಿದೆ. ಇದರಿಂದ ಮಕ್ಕಳಲ್ಲಿ ಅನೇಕ ಪ್ರತಿಭಾವಂತರು ಒಂದೊಂದು ಕ್ಷೇತ್ರದಲ್ಲಿ ತಮ್ಮದೇ ಆದ ಕೌಶಲ್ಯವನ್ನು ಹೊಂದಿರುತ್ತಾರೆ. ಕೆಲವರು ಓದಿನಲ್ಲಿ ಮುಂದಿದ್ದರೇ, ಕೆಲವು ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಸಾಧನೆ ಸಾಧಿಸುತ್ತಾರೆ. ಇನ್ನೂ ಕೆಲವರು ಗಾಯನ, ನಟನೆ, ಸಂಗೀತ ಸೇರಿದಂತೆ ವಿವಿಧ ಮನೋರಂಜನಾತ್ಮಕವಾದ ನೈಪುಣ್ಯಗಳನ್ನು ಹೊಂದಿರುತ್ತಾರೆ. ಅವರಲ್ಲಿನ ಪ್ರತಿಭೆಗಳನ್ನು ಅನಾವರಣಗೊಳಿಸಲು ಶಾಲಾ ಹಂತದಲ್ಲಿ ಭವಿಷ್ಯರೂಪಿಸಿದಂತಾಗಲಿದೆ. ಪಾಲಕರು ಮತ್ತು ಶಿಕ್ಷಕರು ಮಕ್ಕಳಲ್ಲಿ ವಿಶೇಷಗುಣಗಳನ್ನು ಗ್ರಹಿಸಿ ಅವರನ್ನು ಪ್ರೋತ್ಸಾಹಿಸಬೇಕಿದೆ. ಮಕ್ಕಳಲ್ಲಿ ಅತ್ಮವಿಶ್ವಾಸ ಹೆಚ್ಚುವ ಮೂಲಕ ಇನ್ನಷ್ಟು ಆಸಕ್ತಿ ವಹಿಸಲಿದ್ದಾರೆ ಎಂದರು.

ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಂಜುನಾಥ ಮಾತನಾಡಿ, ಬಾಲ್ಯದಲ್ಲಿ ಮಕ್ಕಳು ಅನೇಕ ಕಲಾತ್ಮಕ ವಿಷಯಗಳಲ್ಲಿ ಆಸಕ್ತಿ ಉಳ್ಳವರಾಗಿರುತ್ತಾರೆ. ಮಕ್ಕಳು ತಮ್ಮ ಸ್ವಂತ ಪ್ರತಿಭೆಯನ್ನು ಪ್ರದರ್ಶಿಸಲು ಸೂಕ್ತ ವೇದಿಕೆಗಳನ್ನು ನೀಡುವುದು ಅಗತ್ಯವಿದೆ. ಶಾಲಾ ಪರಿಸರದಿಂದಲೇ ಮಕ್ಕಳಿಗೆ ಕಲಾತ್ಮಕ ಚಟುವಟಿಕೆಗಳಿಗೆ ಉತ್ತೇಜನ ನೀಡಿದರೇ ಉತ್ತಮ ಕಲಾವಿದರಾಗಿ ಕಲಾ ಕ್ಷೇತ್ರಕ್ಕೆ ಕೊಡುಗೆ ನೀಡಲಿದ್ದಾರೆ ಎಂದರು.

ಜಿಲ್ಲೆಯ ವಿವಿಧ ತಾಲೂಕಿನ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ 178 ಸ್ಪರ್ಧಾಳುಗಳು ಜಿಲ್ಲಾ ಮಟ್ಟದ ವೇದಿಕೆಯಲ್ಲಿ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಹೊಸಪೇಟೆ ಕ್ಷೇತ್ರಶಿಕ್ಷಣಾಧಿಕಾರಿ ಶೇಖರಪ್ಪ ಹೊರಪೇಟೆ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಬಿ.ಶಿವಾನಂದ, ವೃತ್ತ ನಿರೀಕ್ಷಕ ಗುರುರಾಜ, ಅಕ್ಷರ ದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಅಯ್ಯಪ್ಪ, ಮಾರ್ಕಂಡೇಶ್ವರ ಶಾಲೆಯ ಅಧ್ಯಕ್ಷರಾದ ಬಿ.ಜಯರಾಮ್, ನಿವೃತ್ತ ಎನ್‌ಸಿಸಿ ವಿಭಾಗಾಧಿಕಾರಿ ಗಿರೀಶ್, ಜಿಲ್ಲಾ ಪ್ರೌಢಶಾಲಾ ಮುಖ್ಯಗುರುಗಳ ಸಂಘದ ಅಧ್ಯಕ್ಷೆ ಅಕ್ಕಮಹಾದೇವಿ, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ತಿಮ್ಮಪ್ಪ, ಗ್ರೇಡ್-2 ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಅಶೋಕ್ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಶಿಕ್ಷಣಾಧಿಕಾರಿ ಪರುಷಪ್ಪ ಭಜಂತ್ರಿ ಸ್ವಾಗತಿಸಿದರು. ಜಿಲ್ಲಾ ಪ್ರತಿಭಾ ಕಾರಂಜಿ ಹಾಗು ಕಲೋತ್ಸವ ಕಾರ್ಯಕ್ರಮದ ನೋಡಲ್ ಅಧಿಕಾರಿ ಹಾಗೂ ವಿಷಯ ಪರಿವೀಕ್ಷಕ ಕೆ.ಎಚ್.ಎಮ್.ವಿಶ್ವನಾಥ ಪ್ರಾಸ್ತಾವಿಕವಾಗಿ ಮಾತನಾಡಿದರು ಪರಿವೀಕ್ಷಕ ವಿಷಯ ಪರಿವೀಕ್ಷಕ ಬಸಂತಯ್ಯ ಹಿರೇಮಠ ವಂದಿಸಿದರು. ಶಿಕ್ಷಕ ಜಿ.ಎಂ.ಪ್ರದೀಪ್ ಕುಮಾರ್ ಹಾಗೂ ನಾಗರಾಜ್ ನಿರ್ವಹಿಸಿದರು. ಹಾಗೂ ಸ್ಪರ್ಧೆಯ ನಿರ್ಣಾಯಕರಾಗಿ ಜಿಲ್ಲೆಯ ವಿವಿಧ ತಾಲೂಕಿನ ಶಾಲೆಗಳ ಶಿಕ್ಷಕರು ಭಾಗವಹಿಸಿದ್ದರು.

## ಮಾನವ ವನ್ಯಜೀವಿಗಳ ಸಂಘರ್ಷ ತಡೆಗೆ ಸಮನ್ವಯತೆ ಅಗತ್ಯ: ಡಾ.ಕೆ.ಎನ್ ಬಸವರಾಜ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ಅರಣ್ಯ ಇಲಾಖೆ ಹಾಗೂ ಪಶು ಸಂಗೋಪನೆ ಇಲಾಖೆಗಳ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಿದಲ್ಲಿ ಮಾನವ-ವನ್ಯಜೀವಿಗಳ ಸಂಘರ್ಷ ತಡೆಗಟ್ಟಬಹುದಾಗಿದೆ ಎಂದು ಬಳ್ಳಾರಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್.ಬಸವರಾಜ್ ಅವರು ಹೇಳಿದರು.

ಅರಣ್ಯ ಇಲಾಖೆ ವತಿಯಿಂದ ವನ್ಯಜೀವಿ ಕಾಯ್ದೆ ಹಾಗೂ ಅಪರಾಧಗಳ ವೈಜ್ಞಾನಿಕ ತನಿಖೆಗೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಬಳ್ಳಾರಿ ಪ್ರಾದೇಶಿಕ ವಿಭಾಗದ ಅರಣ್ಯ ಅಧಿಕಾರಿ ಸಿಬ್ಬಂದಿಗಳು ಹಾಗೂ ಪಶು ಸಂಗೋಪನೆ ಇಲಾಖೆಯ ಪಶು ವೈದ್ಯಾಧಿಕಾರಿಗಳಿಗೆ ಸಂಡೂರಿನ ಗುರುಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಾರ್ಯಾಗಾರದಲ್ಲಿ ಕರ್ನಾಟಕ ಅರಣ್ಯ ಕಾಯ್ದೆ, ಮಾಹಿತಿ ಹಕ್ಕು ಕಾಯ್ದೆ ಹಾಗೂ ಸರ್ಕಾರಿ ನೌಕರರಿಗೆ ಸಂಬಂಧಿಸಿದ ಸೇವಾ ನಿಯಮಗಳ ಬಗ್ಗೆಯೂ ಮಾಹಿತಿ ನೀಡಲಾಯಿತು.

ವನ್ಯಜೀವಿ ಅಪರಾಧ ನಿಯಂತ್ರಣ ಬ್ಯೂರೋದ ಸಹಾಯಕ ನಿರ್ದೇಶಕ ಶೇಷಾದ್ರಿ, ಆರೋಗ್ಯ ಇಲಾಖೆಯ ಸೂಪರಿಂಟೆಂಡೆಂಟ್ ವೆಂಕಟೇಶ್, ಮತ್ತು ನಿವೃತ್ತ ಡಿಸಿಎಫ್ ಸಿಎಂ ಅಮ್ಮಣ್ಣವರ್ ಕಾರ್ಯಾಗಾರದಲ್ಲಿ ಸಂಪನ್ಮೂಲವ್ಯಕ್ತಿಗಳಾಗಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಪಶುಸಂಗೋಪನೆಯ ಇಲಾಖೆಯ ಉಪನಿರ್ದೇಶಕ ಡಾ.ಎಸ್ ಉಪ್ಪಾರ್ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶರಣ್ ಕುಮಾರ್ ಸೇರಿದಂತೆ ಅರಣ್ಯ ಇಲಾಖೆ ಮತ್ತು ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

## ಸ್ವಯಂ ಉದ್ಯೋಗ ತರಬೇತಿಗೆ ಅರ್ಜಿ ಆಹ್ವಾನ.

ಮಲ್ಲಮ್ಮ ನುಡಿ ವಾರ್ತೆ

ವಿಜಯನಗರ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಕೇಂದ್ರದಿಂದ ವಿವಿಧ ಉಚಿತ ತರಬೇತಿಗಳಿಗೆ ಅರ್ಜಿ ಅಹ್ವಾನಿಸಲಾಗಿದೆ ಎಂದು ಆರ್‌ಎಸ್‌ಇಟಿಐ ನಿರ್ದೇಶಕ ಗಿರಿಧರ್ ತಿಳಿಸಿದ್ದಾರೆ.

ಜಿಲ್ಲೆಯ ಗ್ರಾಮೀಣ ಭಾಗದ ಆಸಕ್ತ ನಿರುದ್ಯೋಗಿ ಯುವಕ, ಯುವತಿಯರಿಗೆ ಮಹಿಳಾ ಹೊಲಿಗೆ ತರಬೇತಿ (31 ದಿನಗಳು), ಪಂಪ್‌ಸೆಟ್‌ನ ಮೋಟಾರ್ ರಿಪೇರಿ ತರಬೇತಿ (31 ದಿನಗಳು), ಹೈನುಗಾರಿಕೆ ತರಬೇತಿ (13 ದಿನಗಳು) ಮತ್ತು ಕೈವರ್ಕ್(ಮಗ್ಗಂ) ಕೈಕಸೂತಿ ತರಬೇತಿ (31 ದಿನಗಳು) ಗಳವರಗೆ ತರಬೇತಿ ನೀಡಲಾಗುತ್ತದೆ. ಆಸಕ್ತ ಅರ್ಜಿದಾರರು ವಿಜಯನಗರ ಜಿಲ್ಲೆಯ ಗ್ರಾಮೀಣ ಭಾಗದವರಾಗಿರಬೇಕು. ಕನಿಷ್ಠ 8ನೇ ತರಗತಿ ಉತ್ತೀರ್ಣರಾಗಿರಬೇಕು. ವಯೋಮಿತಿ 18 ರಿಂದ 50 ವರ್ಷದೊಳಗಿರಬೇಕು. ಸ್ವಯಂ ಉದ್ಯೋಗದಲ್ಲಿ ಆಸಕ್ತಿಯನ್ನು ಹೊಂದಿರಬೇಕು. ಅರ್ಜಿ ಸಲ್ಲಿಸಲು ಆಧಾರ ಕಾರ್ಡ್, ರೇಷನ್ ಕಾರ್ಡ್, ಅಂಕಪಟ್ಟಿ ಜೆರಾಕ್ಸ್ ಪ್ರತಿಯೊಂದಿಗೆ 3 ಪಾಸ್‌ಪೋರ್ಟ್ ಸೈಜ್ ಮಾರ್ಕ್ಸ್ ಕಾರ್ಡ್, ಜಾತಿ ಆದಾಯ ಪ್ರಮಾಣ ಪತ್ರಮತ್ತುಪ್ಯಾನ್ ಕಾರ್ಡ್ ಗಳೊಂದಿಗೆ ನಿರ್ದೇಶಕರ ಕಚೇರಿ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ, ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ಆವರಣ, ಪೈ ಹೋಟೆಲ್ ಎದುರುಗಡೆ, ಬಸ್ ನಿಲ್ದಾಣ ಹತ್ತಿರ ಹೊಸಪೇಟೆ. ವಿಳಾಸಕ್ಕೆ ಅರ್ಜಿಗಳನ್ನು ಸಲ್ಲಿಸಬೇಕು. ಆಸಕ್ತ ಅರ್ಹರು ಡಿಸೆಂಬರ್.29 ರಂದು ಸಂದರ್ಶನಕ್ಕೆ ಭಾಗವಹಿಸಬೇಕು. ಡಿಸೆಂಬರ್.30 ರಿಂದ ತರಬೇತಿಗಳು ಪ್ರಾರಂಭವಾಗಲಿವೆ. ಹೆಚ್ಚಿನ ಮಾಹಿತಿಗಾಗಿ ಮೊ.9741987137, ಮತ್ತು 6360467102, 9663471468 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಾಲೀಕಾರ ಪುಣ್ಯತಿಥಿಯ ನಿಮಿತ್ಯ ವಿಶೇಷ ಉಪನ್ಯಾಸ.

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ: ಡಾ. ಚೆನ್ನಣ್ಣ ವಾಲೀಕಾರ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆ ಕಲಬುರಗಿ ಬಂಡಾಯ ಬರಹಗಾರ. ಹೋರಾಟಗಾರ, ಸಾಮಾಜಿಕ ಚಿಂತಕ ಡಾ. ಚೆನ್ನಣ್ಣ ವಾಲೀಕಾರ ಅವರ ಆರನೆಯ ಪುಣ್ಯತಿಥಿಯ ನಿಮಿತ್ಯ ವಿಶೇಷ ಉಪನ್ಯಾಸ ಮತ್ತು ಡಾ. ಚೆನ್ನಣ್ಣನವರ ಹೋರಾಟ ಗೀತೆಗಳ ಗಾಯನ ಸಮಾರಂಭವನ್ನು ಕಾರ್ಯಕ್ರಮವನ್ನು 16 ರಂದು ಬೆಳಿಗ್ಗೆ 10-30 ಗಂಟೆಗೆ ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗ (ಸ್ವಾಯತ್ತ), ಕಲಬುರಗಿ ಹಮ್ಮಿಕೊಳ್ಳಲಾಗಿದೆ.

ಹಿರಿಯ ಸಾಹಿತಿಗಳು ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಡಾ. ಸಿದ್ದರಾಮ ಪೊನ್ನಲ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ, ಮುಖ್ಯ ಅತಿಥಿಗಳಾಗಿ ಸದಸ್ಯರು, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ಪ್ರಾಚಾರ್ಯರು, ಬಿ.ಎಚ್. ನಿರಗುಡಿ, ಪ್ರಾಂಶುಪಾಲರು ಸರಕಾರಿ ಪ್ರಥಮ ದರ್ಜೆ ಕಾಲೇಜು, ಸ್ವಾಯತ್ತು, ಕಲಬುರಗಿ ಡಾ.ಸವಿತಾ ತಿವಾರಿ ಭಾಗವಹಿಸುವರು.

ಡಾ. ಸ್ವಾಮಿರಾವ್ ಕುಲಕರ್ಣಿ ಹಿರಿಯ ಸಾಹಿತಿಗಳು, ಅಧ್ಯಕ್ಷತೆ ವಹಿಸುವರು.

ವಿಶೇಷ ಉಪನ್ಯಾಸ: ಡಾ. ಚೆನ್ನಣ್ಣ ವಾಲೀಕಾರರ ಕಾವ್ಯ ತತ್ವ ಮತ್ತು ಸತ್ಯ ಪ್ರಾಚಾರ್ಯರು, ಸರಕಾರಿ ಪ್ರಥಮ ದರ್ಜೆ ಕಾಲೇಜ್ ಡಾ. ಅಮೃತಾ ಕಟಕೆ,

ಗೌರವ ಉಪಸ್ಥಿತಿ : ಶ್ರೀಮತಿ ಸಿದ್ದಮ್ಮ ಡಾ. ಚೆನ್ನಣ್ಣ ವಾಲೀಕಾರ : ಪ್ರೊ. ಎಚ್.ಟಿ. ಪೋತೆ, ಹಿರಿಯ ಲೇಖಕರು, ನಿರ್ದೇಶಕರು, ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಉಪಾಧ್ಯಕ್ಷರು,

ಡಾ. ಚೆನ್ನಣ್ಣ ವಾಲೀಕಾರ, ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆ, ಕಲಬುರಗಿ, ಶ್ರೀ ಸಿದ್ಧಾರ್ಥ ಚಿಮ್ಮ ಇದಲಾಯಿ ಸಂಗೀತ ಕಲಾವಿದ ಹಾಗೂ ಸಂಗಡಿಗರಿಂದ ಗೀತೆಗಳ ಗಾಯನಗಳು ನಡೆಸಿಕೊಡಲಿದ್ದಾರೆ.

## ಲಘುಮೋಟಾರ ವಾಹನ ತರಬೇತಿ ಸಂಸ್ಥೆಗಳಿಂದ ದರಪಟ್ಟಿ ಅಹ್ವಾನ.

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ: 2025-26ನೇ ಸಾಲಿನ ಪುರಸಭೆ ಅನುದಾನದಲ್ಲಿ ಪ.ಜಾ/ ಪಪಂ ಮತ್ತು ಇತರೆ ಹಿಂದುಳಿದ ವರ್ಗಗಳ ಜನರಿಗೆ ಲಘುಮೋಟಾರ ವಾಹನ ತರಬೇತಿ ನೀಡಲು ಉದ್ದೇಶಿಸಿಸಲಾಗಿದ್ದು.

ಅದರಂತೆ ತರಬೇತಿ ನೀಡಲು ತರಬೇತಿ ಸಂಸ್ಥೆಗಳಿಂದ ಅರ್ಹ ದರಪಟ್ಟಿಯನ್ನು ಅಹ್ವಾನಿಸಲಾಗಿದೆ ಆಸಕ್ತ ಅರ್ಹ ತರಬೇತಿ ಸಂಸ್ಥೆಗಳು ತಮ್ಮ ದರಪಟ್ಟಿಯನ್ನು ದಿನಾಂಕ:20-12-2025ರ ಒಳಗಾಗಿ ಸೇಡಂನ ಪುರಸಭೆ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು ಎಂದು ಅವರು ತಿಳಿಸಿದ್ದಾರೆ.

2025-26ನೇ ಸಾಲಿನ ಪುರಸಭೆ ಅನುದಾನದಲ್ಲಿ ಪ.ಜಾ/ ಪಪಂ ಮತ್ತು ಇತರೆ ಹಿಂದುಳಿದ ವರ್ಗಗಳ ಜನರಿಗೆ ಲಘು ಮೋಟಾರ ವಾಹನ ತರಬೇತಿ ಅವಧಿಯು

(1 ತಿಂಗಳು ಮಾತ್ರ ಇರುತ್ತದೆ).ಎಂದು ಸೇಡಂನ ಪುರಸಭೆ ಕಾರ್ಯಾಲಯದ ಮುಖ್ಯಾದಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹೊಲಿಗೆ ಯಂತ್ರಗಳನ್ನು ಸರಬರಾಜು ದರಪಟ್ಟಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ: 2025-26ನೇ ಸಾಲಿನ ಪುರಸಭೆ ಅನುದಾನದಲ್ಲಿ ಪ.ಜಾ/ ಪಪಂ ಜನರಿಗೆ ಹೊಲಿಗೆ ಯಂತ್ರಗಳನ್ನುಮಹಿಳೆಯರಿಗೆ ನೀಡಲು ಉದ್ದೇಶಿಸಲಾಗಿದ್ದು.ಅದರಂತೆ ಆಸಕ್ತ ಅರ್ಹ ನೊಂದಾಯಿತ ಸರಬರಾಜುದಾರರು. ಹೊಲಿಗೆ

ಯಂತ್ರಗಳನ್ನು ಸರಬರಾಜು ಮಾಡಲು ತಮ್ಮ ದರಪಟ್ಟಿಯನ್ನು 22-12-2025ರ ಒಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು. ಹೊಲಿಗೆ ಯಂತ್ರ ವಿವರ ಹೊಲಿಗೆ ಯಂತ್ರಗಳ (ಉಷಾ, ಸಿಂಗರ್, ಡರ್ಬಿ ) ಕಂಪನಿ ಮಾತ್ರ ಸರಬರಾಜು ಮಾಡುವುದಾಗಿತ್ತದೆ ಸೇಡಂನ ಪುರಸಭೆ ಕಾರ್ಯಾಲಯದ ಮುಖ್ಯಾದಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ ವಿಜಯನಗರ: 2025-26ನೇ ಸಾಲಿನಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳೆಯರನ್ನು ಸಮಾಜದ ಮುಖ್ಯ ವಾಹಿನಿಯಲ್ಲಿ ಪ್ರತಿಬಿಂಬಿಸಲು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಪ್ರೋತ್ಸಾಹಿಸಲು ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಶ್ವೇತಾ ತಿಳಿಸಿದ್ದಾರೆ.

ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಅರ್ಹ ಸಂಸ್ಥೆಗಳು ಮತ್ತು ಕ್ರೀಡೆ, ಸಾಹಿತ್ಯ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಮಹಿಳೆಯರು ಹಾಗೂ ಸಂಕಷ್ಟ ಪರಿಸ್ಥಿತಿಯಲ್ಲಿ ಆತ್ಮಸ್ಥೈರ್ಯದಿಂದ ಹೋರಾಡಿ ಜೀವನೋಪಾಯವನ್ನು ಮಾಡಿರುವ ಮಹಿಳೆಯರು ಅರ್ಜಿ ಸಲ್ಲಿಸಬಹುದು.

ಅರ್ಜಿಗಳನ್ನು ಆಯಾ ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಪಡೆದು ಭರ್ತಿ ಮಾಡಿ ಡಿಸೆಂಬರ್.30 ರೊಳಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿ, ಅಥವಾ ದೂ. 08394223583 ಸಂಖ್ಯೆ ಕರೆ ಮಾಡಿ ಮಾಹಿತಿ ಪಡೆಯಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಸ್ಥೆಗಳಿಂದ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ವಿಜಯನಗರ: ಸರ್ವೋಚ್ಚ ನ್ಯಾಯಾಲಯ ಆದೇಶದಂತೆ ಬೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕಾಗಿ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಸ್ಥಳಿಯ ಸಂಘ-ಸಂಸ್ಥೆಗಳು,

ಎನ್‌ಜಿಓ, ಪ್ರಾಣಿ ಕಲ್ಯಾಣ ಸಂಸ್ಥೆಗಳೊಂದಿಗೆ ಅನುಷ್ಠಾನಗೊಳಿಸಲು ಹೊಸಪೇಟೆ ನಗರಸಭೆ ವ್ಯಾಪ್ತಿಯಲ್ಲಿರುವ ಬೀದಿ ನಾಯಿಗಳನ್ನು ದತ್ತು ಪಡೆದು ಸಾಕಾಣಿಕೆ, ಪಾಲನೆ ಮತ್ತು ಪೋಷಣೆ ಮಾಡಲು ಇಚ್ಛೆಯುಳ್ಳವರು 07 ದಿನಗೊಳಗಾಗಿ ಪೌರಾಯುಕ್ತರ ಹೆಸರಿಗೆ ಮನವಿಯನ್ನು ಸಲ್ಲಿಸಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಆರೋಗ್ಯ ಶಾಖೆಯನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬೇಕೆಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಗರ ಸಭೆ ಅಧ್ಯಕ್ಷರಿಂದ ಕಾಮಗಾರಿ ಪರಿಶೀಲನೆ



**ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:** 31ನೇ ವಾರ್ಡಿನ ವ್ಯಾಪ್ತಿಯಲ್ಲಿ ಬರುವ ಗವಿಮಠ ರಸ್ತೆಯಿಂದ ನಂದಿನಗರ ಬಡಾವಣೆಗೆ ಹೋಗುವ ಮುಖ್ಯರಸ್ತೆ ಡಾಂಬರಿಕರಣ ಮಾಡಬೇಕೆಂಬ ಆ ಭಾಗದ ಜನರ ಬಹುದಿನದ ಬೇಡಿಕೆಯಾಗಿದ್ದು ಸದರಿ ರಸ್ತೆ ಡಾಂಬರೀಕರಣ ಕಾಮಗಾರಿ ಪ್ರಾರಂಭಗೊಂಡಿರುವ ಹಿನ್ನೆಲೆಯಲ್ಲಿರವಿವಾರದಂದು ಕೊಪ್ಪಳ ನಗರಸಭೆಯ ಅಧ್ಯಕ್ಷ ಅಮ್ಜದ ಪಟೇಲ್ ಅವರು ಕಾಮಗಾರಿ ಸ್ಥಳಕ್ಕೆ ಭೇಟಿ ಮಾಡಿ ವೀಕ್ಷಣೆ ಮಾಡಿದರೂ,

ಶೀಘ್ರ ಬರಲಿರುವ ಇಲ್ಲಿ ಐತಿಹಾಸಿಕ ಪ್ರಸಿದ್ಧ ದಕ್ಷಿಣ ಭಾರತದ ಕುಂಭಮೇಳವೆಂದು ಖ್ಯಾತಿ ಪಡೆದ ಶ್ರೀ ಗವಿಮಠದ ಮಹಾ ರಥೋತ್ಸವ ಜಾತ್ರೆಗೆ ಬರುವ ಲಕ್ಷಾಂತರ ಭಕ್ತಾದಿಗಳಿಗೆ ಹಾಗೂ ಅಲ್ಲೇ ಇರುವ ಕಾಲೇಜು ಶಾಲೆಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಬಹಳಷ್ಟು ತೊಂದರೆ ಆಗುತ್ತಿದ್ದು ಈಗ ಸದರಿ ರಸ್ತೆ ಡಾಂಬರೀಕರಣ ಕಾಮಗಾರಿಯಿಂದ ಎಲ್ಲಾ ರೀತಿಯ ಅನುಕೂಲವಾಗಲಿದೆ, ಸದರಿ ರಸ್ತೆ ಡಾಂಬರೀಕರಣ ಕಾಮಗಾರಿ ಗುಣಮಟ್ಟದಿಂದ ಮಾಡಬೇಕು ಮತ್ತು ನಿಗದಿತ ಅವಧಿ ಒಳಗೆ ಪೂರ್ಣಗೊಳಿಸಿ ಬರುವ ಜಾತ್ರಾ ಸಂದರ್ಭದಲ್ಲಿ ಎಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿ ಪೂರ್ಣಗೊಳಿಸುವಂತೆ ಸಂಬಂಧಿಸಿದ ಗುತ್ತಿಗೆದಾರರಿಗೆ ಮತ್ತು ಇಲಾಖೆ ಅಧಿಕಾರಿಗಳಿಗೆ ಕೊಪ್ಪಳ ನಗರಸಭೆಯ ಅಧ್ಯಕ್ಷರಾದ ಅಮ್ಜದ್ ಪಟೇಲ್ ರವರು ಸೂಚನೆ ನೀಡಿದರು,

ಈ ಸಂದರ್ಭದಲ್ಲಿ ಅವರೊಂದಿಗೆ ನಗರಸಭೆಯ ಕಿರಿಯ ಅಭಿಯಂತ ಸೋಮಲಿಂಗಪ್ಪ, ಯುವ ನಾಯಕ ರಮೇಶ್ ಕವಲೂರು ,ನಗರಸಭೆಯ ಸದಸ್ಯ ಚೆನ್ನಪ್ಪ ಕೊಟ್ಯಾಳ, ಮತ್ತು ಆಸೀಫ್ ಹಣಗಿ ಸೇರಿದಂತೆ ಕಾರ್ಯಕರ್ತರು ಮತ್ತು ಅಭಿಮಾನಿಗಳು ಪಾಲ್ಗೊಂಡಿದ್ದರು,

# ಸಹಕಾರ ಕ್ಷೇತ್ರದೊಂದಿಗೆ ಸಮಾಜಮುಖಿ ರಕ್ತದಾನ ಸೇವೆಯಲ್ಲಿ ತೊಡಗಿದ ಮಲ್ಲಯ್ಯ

**ಮಲ್ಲಮ್ಮ ನುಡಿ ವಾರ್ತೆಕೊಪ್ಪಳ :**

ಜಿಲ್ಲೆಯ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀಮಲ್ಲಯ್ಯ ಅವರು ಇವರ ಜನ್ಮಸ್ಥಳ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಸಾಲಗುಂದ ಗ್ರಾಮದವರು ಇವರು ತಮ್ಮ ದಿನನಿತ್ಯದ ಸಹಕಾರ ಕಾರ್ಯದೊಂದಿಗೆ , ಸಮಾಜಮುಖಿ ಕಾರ್ಯವಾದ ರಕ್ತದಾನ ಸೇವೆಯನ್ನು ನಿರಂತರವಾಗಿ ತಮ್ಮನ್ನ ತಾವು ತೊಡಗಿಸಿಕೊಂಡಿದ್ದಾರೆ.

ಅನೇಕರು ಕೆಲಸ , ಮನೆ ಜವಬ್ದಾರಿ ಈಗೆ ಸ್ವಂತ ಹಾಗೂ ಒತ್ತಡದ ಜೀವನದಲ್ಲಿ ಸಾಗೂವ ಈ ಜಗದಲ್ಲಿ ನಮ್ಮಿಂದ ಒಂದು ಅಳಿಲು ಸೇವೆ ಹಾಗೂ ಮತ್ತೊಬ್ಬರ ಕಷ್ಟದಲ್ಲಿ ಭಾಗಿಯಾಗುವ ಸಂತಸದ ಕ್ಷಣಗಳನ್ನುಆನಂದಿಸುವ ಈ ಕಾರ್ಯದಲ್ಲಿಭಾಗಿಯಾಗುವುದು ನಿಜಕ್ಕೂ ಸಾರ್ಥಕದ ಬದುಕಿಗೆ ಸಾಕ್ಷಿಯಾಗಿದೆ ಎಂದು ತಿಳಿಸಿಕೊಟ್ಟಿದ್ದಾರೆ . ಕೊಪ್ಪಳ ಜಿಲ್ಲೆಯ ಅನೇಕ ಸಹಕಾರ ಸಂಘಗಳ ಕಾರ್ಯಕಲಾಪದೊಂದಿಗೆ ರಕ್ತದಾನ ಸೇವೆಯನ್ನು ಮಾಡುತ್ತಿದ್ದಾರೆ.



ಜೀವ ನೀಡುವ ಭಾಗ್ಯ ತಾಯಿಯ ಸ್ಥಾನಕ್ಕೆಮಾತ್ರ ಉಂಟು ಆದರೆ ತುರ್ತು ಪರಿಸ್ಥಿತಿಯಲ್ಲಿ ಅಂದರೆ ಅಘಘಾತ , ಡೆಲಿವರಿ , ಆಪರೇಷನ್ ಇನ್ನಿತರ ಸಂದರ್ಭಗಳಲ್ಲಿ ರಕ್ತದ ಅವಶ್ಯಕತೆಯನ್ನು ನೀಗಿಸುವ ಮೂಲಕ ಜೀವ ನೀಡುವ ಕಾರ್ಯವೇ ಈ ರಕ್ತದಾನ ಸೇವೆ , ತುರ್ತು ಪರಿಸ್ಥಿತಿಯಲ್ಲಿನ ಕರೆಗಳನ್ನು ಸ್ವೀಕರಿಸಿ ಅವರ ರಕ್ತದ ಬೇಡಿಕೆಯನ್ನು ತಮ್ಮ ವ್ಯಾಟ್ಸಪ್ ಮೂಲಕ , ಸ್ಟೇಟಸ್ ಇನ್ನಿತರ ಸ್ನೇಹಿತರಿಗೆ ಹಂಚಿಕೊಳ್ಳುವ ಮೂಲಕ ಒಂದು ಜೀವ ಉಳಿಸಿವ ಕಾರ್ಯದಲ್ಲಿ ಮಲ್ಲಯ್ಯರವರು ನಿರಂತ ಆರು ವರ್ಷಗಳ ಕಾಲ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ.

ಅವರು ನಮ್ಮ ಕೊಪ್ಪಳದ ಜನತೆಗೆ ತುರ್ತು ಪರಿಸ್ಥಿತಿಯಲ್ಲಿ ನಮ್ಮನ್ನು ಸಂಪರ್ಕಿಸಿ ನಮ್ಮಿಂದಾದ ರಕ್ತದಾನ ಸೇವೆಯನ್ನು ಮಾಡೋಣ ಎಂದು ತಮ್ಮ ಸಹಕಾರಿ ಮಿತ್ರರರಿಗೂ ಹಾಗೂ ರಕ್ತದ ಬೇಡಿಕೆ ಕರೆಗಳಿಗೂ ಹಾಗೂ ಸ್ವಯಂ ಪ್ರೇರಣೆಯಿಂದ ರಕ್ತದಾನ ಮಾಡು ಇಚ್ಛೆಯಿಸುವವರಿಗೆ ನಮ್ಮದೂರವಾಣಿ,97391 67850 ಸಂರ್ಕಿಸಿ ಎಂದು ಈ ಮೂಲಕ ಕರೆ ನೀಡಿದ್ದಾರೆ

# ಮುರಡಿಯಲ್ಲಿ ಅಪರಾಧ ತಡೆ ಮಾಸಾಚರಣೆ ಕಾರ್ಯಕ್ರಮ



**ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :** ಜಿಲ್ಲೆ ಯಲಬುರ್ಗಾ ತಾಲೂಕು ಬೇವೂರು ಪೊಲೀಸ್ ಠಾಣೆವತಿಯಿಂದ ಮುರಡಿ ಡಾ.ಗುರುಚಾರ ನರಗುಂದ ಕಾಲೇಜು ಆಫ್ ಫಾರ್ಮಸಿಯಲ್ಲಿ ಅಪರಾಧ ತಡೆ ಮಾಸಾಚರಣೆ ಪ್ರಯುಕ್ತ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ನಂತರ ಮಾತನಾಡಿದ ಬೇವೂರು ಪೊಲೀಸ್ ಠಾಣೆಯ ಪಿಎಸ್ಐ ಎಸ್.ಪಿ.ನಾಯ್ಕ್ ದೈನಂದಿನ ಚಟುವಟಿಕೆಗಳಲ್ಲಿ ನಡೆಯುವ ಅಪರಾಧಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಿದರು.ಪೊಕ್ಸೋ ಕಾಯಿದೆ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಮೇಲೆ ನಡೆಯುವ ಲೈಂಗಿಕ ಕಿರುಕುಳಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಪೊಕ್ಸೋ ಪ್ರಕರಣಗಳ ಕುರಿತು ಜಾಗೃತಿ ಮೂಡಿಸಿದರು.ಬಾಲ್ಯ ವಿವಾಹ ನಿಷೇಧ: ಹುಡುಗನಿಗೆ 21 ವರ್ಷ ಹುಡುಗಿಗೆ 18 ವರ್ಷ ಆಗದಿದ್ದರೆ ಅದು ಬಾಲ್ಯ ವಿವಾಹವಾಗುತ್ತದೆ ಮತ್ತು ವಿವಾಹ ಮಾಡಿದವರ ಹಾಗೂ ಪಾಲ್ಗೊಂಡವರ ಮೇಲೆ ಕೇಸು ದಾಖಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಬೈಕ್ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಎಂದು ಸೂಚಿಸಿದರು. ಜತೆಗೆ, ವಾಹನ ಚಾಲನೆ ಮಾಡುವಾಗ ವಿಮೆ, ಚಾಲನಾ ಪರವಾನಗಿ ಸೇರಿದಂತೆ ಎಲ್ಲ ಅಗತ್ಯ ದಾಖಲೆಗಳನ್ನು ಜೊತೆಯಲ್ಲಿ ಇಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದರು ಹಾಗೂ ಕಾನೂನು ಪಾಲಿಸುವಂತೆ ಮನವಿ ಮಾಡಿದರು.ಈ ಸಂದರ್ಭದಲ್ಲಿ ಕಾಲೇಜು ಪ್ರಾಂಶುಪಾಲರು ಹಾಗೂ ವಿಧ್ಯಾರ್ಥಿಗಳು ಹಾಗೂ ಪೊಲೀಸ್ ಸಿಬ್ಬಂದಿಗಳಾದ ಗವಿಸಿದ್ದಯ್ಯ ಹಿರೇಮಠ, ಬಸವರಾಜ ಸೇರಿದಂತೆ ಇತರರು ಇದ್ದರು

# 11 ಜೋಡಿಗಳ ಮದುವೆ ಸಾಮೂಹಿಕ ವಿವಾಹಗಳು ಭಾಗ್ಯವಂತರ ಮದುವೆಗಳು

**ಮಲ್ಲಮ್ಮ ನುಡಿ ಬಾಗಲಕೋಟೆ:**

ಸಾಮೂಹಿಕ ವಿವಾಹಗಳು ಬಡವರು ಹಾಗೂ ನಿರ್ಗತಿಕರ ಮದುವೆಗಳಲ್ಲ. ಭಾಗ್ಯವಂತರ ಮದುವೆಗಳು. ಇಲ್ಲಿ ಮದುವೆಯಾಗುವವರು ಬಹಳಷ್ಟು ಪುಣ್ಯಶಾಲಿಗಳು ಎಂದು ಬಿಲ್‌ಕೆರೂರ ಬಿಲ್ವಾಶ್ರಮ ಹಿರೇಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲೂಕಿನ ಬೇವೂರ ಗ್ರಾಮದಲ್ಲಿ ಗ್ಯಾನೇಶ್ವರ ದೇವರ ಕಾರ್ತಿಕೋತ್ಸವದ ಅಂಗವಾಗಿ ಸೋಮವಾರ ಪೂಜ್ಯ ಗ್ಯಾನಪ್ಪಜ್ಜನವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದ ಸರ್ವಧರ್ಮ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಬಡವರ ಆರ್ಥಿಕ ಹೊರೆಯನ್ನು ತಗ್ಗಿಸುವ ಉದ್ದೇಶದಿಂದ ಹಲವಾರು ಸಂಘ-ಸಂಸ್ಥೆಗಳು ದಾನಿಗಳ ಸಹಾಯ, ಸಹಕಾರದಿಂದ ಸಾಮೂಹಿಕ ವಿವಾಹ ಮಾಡುತ್ತಾರೆ. ಹೀಗಾಗಿ ಇಲ್ಲಿ ವಿವಾಹ ಮಾಡಿಕೊಳ್ಳುವವರು ಅತ್ಯಂತ ಭಾಗ್ಯಶಾಲಿಗಳು ಎಂದರು.



ನವದಂಪತಿಗಳು ಒಳ್ಳೆಯ ಮಕ್ಕಳನ್ನು ಹೆತ್ತು ಅವರಿಗೆ ಉತ್ತಮ ಶಿಕ್ಷಣ ಕೊಡಿಸಿ, ಸಂಸ್ಕಾರ ಕಲಿಸಿ ಸತ್ಪಜೆಗಳನ್ನಾಗಿ ಮಾಡಬೇಕು. ಅವರಲ್ಲಿ ಹಿರಿಯರನ್ನು ಗೌರವಿಸುವ ಗುಣಗಳನ್ನು ಬೆಳೆಸಿ ಸದ್ಗುಣಿಗಳನ್ನಾಗಿ ಮಾಡಿ ದೇಶದ ಆಸ್ತಿಯನ್ನಾಗಿ ಮಾಡಬೇಕು ಎಂದು ಬಿಲ್‌ಕೆರೂರ ಶ್ರೀಗಳು ಹೇಳಿದರು.ಬೇವೂರ ಆದರ್ಶ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಜಿ.ಜಿ.ಮಾಗನೂರ ಮಾತನಾಡಿ, ಸಾಮೂಹಿಕ ವಿವಾಹಗಳು ಬಡವರ ಪಾಲಿಗೆ ವರದಾನವಾಗಿದ್ದು, ಪೂಜ್ಯ ಗ್ಯಾನಪ್ಪಜ್ಜನವರು ಪ್ರತಿ ವರ್ಷ ನಡೆಸಿಕೊಡುವ ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ಸರ್ವರ ಸಹಾಯ, ಸಹಕಾರ ನಿರಂತರವಾಗಿ ದೊರೆಯಬೇಕು ಎಂದರು.

ಅತಿಥಿ ಸಿದ್ದಪ್ಪ ಶಿರೂರ ಮಾತನಾಡಿ, ಸರ್ವಧರ್ಮ ಸಾಮೂಹಿಕ ವಿವಾಹ ಪುಣ್ಯದ ಕಾರ್ಯವಾಗಿದ್ದು, ಇಲ್ಲಿ ಮದುವೆಯಾಗುವವರು ಸಹ ಬಹಳ ಪುಣ್ಯವಂತರೇ ಸರಿ ಎಂದು ಹೇಳಿದರು.ಆಶೀರ್ವಚನ ನೀಡಿದ ಹರನಾಳದ ಸಂಗನಬಸವ ಸ್ವಾಮೀಜಿ, ನೂತನ ವಧು- ವರರು ಸಮನ್ವಯತೆಯ ಜೀವನ ಸಾಗಿಸಿ ಆದರ್ಶ ದಂಪತಿಗಳಾಗಿ ಬಾಳಬೇಕು ಎಂದರು. ನಾಯನೇಗಲಿಯ ನಿರಂಜನ ಮಾತಾಜಿ ಉಪಸ್ಥಿತರಿದ್ದರು. ಅಧ್ಯಕ್ಷತೆ ವಹಿಸಿದ್ದ ಗ್ರಾಪಂ ಮಾಜಿ ಅಧ್ಯಕ್ಷ ಜಿ.ವಾಯ್.ಹೆರಕಲ್ ಮಾತನಾಡಿದರು.

ನಿಡಗುಂದಿಯ ರುದ್ರಮುನಿ ಶಿವಾಚಾರ್ಯರು ಕಾರ್ಯಕ್ರಮ ಉದ್ಘಾಟಿಸಿದರು. ಗ್ಯಾನಪ್ಪಜ್ಜನವರು ನೇತೃತ್ವ ವಹಿಸಿದ್ದರು. ಆಲಮಟ್ಟಿ ರೇಂಜ್ ಫಾರೆಸ್ಟ್ ಅಧಿಕಾರಿ ಮಹೇಶ ಪಾಟೀಲ, ಶೇಖಣ್ಣ ಹೆರಕಲ್, ನಿಂಗಪ್ಪ ಮಾಗನೂರ, ಗ್ರಾಪಂ ಪಿಡಿಓ ಬಿ.ಬಿ.ಇಟಗಿ, ಈರಣ್ಣ ಪತ್ತಾರ, ಶರಣಪ್ಪ ಮಾಗನೂರ, ರತನಕುಮಾರ ವೈಜಾಪೂರ, ಗ್ಯಾನಪ್ಪ ಚಲವಾದಿ, ಮಲ್ಲಪ್ಪ ಹೆರಕಲ್, ಸಿದ್ದು ಕುರಿ, ಸಂಗಮೇಶ ಇಂಡಿ, ಮಡ್ಡೇಸಾಬ ಗುರಗುನ್ನಿ, ವಕೀಲ ಬಿ.ಬಿ.ತೆಗ್ಗಿನಮನಿ, ಬಸವರಾಜ ಮಸಬಿನಾಳ ಅತಿಥಿಗಳಾಗಿದ್ದರು.

11 ಜೋಡಿಗಳ ವಿವಾಹ: ವಿವಾಹ ಕಾರ್ಯಕ್ರಮದಲ್ಲಿ 11 ಜೋಡಿ ವಧು-ವರರು ಸಪ್ತಪದಿ ತುಳಿದು ಹೊಸ ಜೀವನಕ್ಕೆ ಅಡಿಯಿಟ್ಟರು. ಶಾರದಾ ಹೊಸಮನಿ ಪ್ರಾರ್ಥಿಸಿದರು. ಎಂ.ಎಸ್.ವೈಜಾಪೂರ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಎಂ.ಎಸ್. ಮೇಟಿ ನಿರೂಪಿಸಿದರು.

# ವಿಕಲಚೇತನರ ಬಸ್ ಪಾಸ್ ನವೀಕರಣ

**ಮಲ್ಲಮ್ಮ ನುಡಿ ಬಾಗಲಕೋಟೆ:**

ವಿಕಲಚೇತನರ ರಿಯಾಯಿತಿ ದರದ ಪಾಸುಗಳನ್ನು ವಿಭಾಗದ ಎಲ್ಲ ಘಟಕಗಳ ಪಾಸ್ ಕೌಂಟರ್‌ಗಳಲ್ಲಿ 2026ರ ಫೆಬ್ರವರಿ ಅಂತ್ಯದವರೆಗೆ ನವೀಕರಿಸಲಾಗುತ್ತಿದ್ದು, ವಿಕಲಚೇತನ ಫಲಾನುಭವಿಗಳು 2026 ಜನವರಿ 1ರಿಂದ ಫೆಬ್ರವರಿ 28 ರೊಳಗಾಗಿ 660 ರೂ.ಗಳನ್ನು ನಗದು ರೂಪದಲ್ಲಿ ಪಾವತಿಸಿ ವಿಕಲಚೇತನರ ಬಸ್ ಪಾಸ್ ನವೀಕರಿಸಿಕೊಳ್ಳಬಹುದಾಗಿದೆ.

2025ರಲ್ಲಿ ನೀಡಿದ ವಿಕಲಚೇತನರ ಬಸ್ ಪಾಸ್‌ಗಳು ಡಿಸೆಂಬರ 31ವರೆಗೆ ಮಾನ್ಯತೆ ಇದ್ದು, ಅವುಗಳನ್ನು ಫೆಬ್ರವರಿ 28 ವರೆಗೆ ಮಾನ್ಯ ಮಾಡಲಾಗಿದೆ. ಸದರಿ ಅವಧಿಯೊಳಗಾಗಿ ಎಲ್ಲ ಫಲಾನುಭವಿಗಳು ತಮ್ಮ ಪಾಸ್ಗಳನ್ನು ನವೀಕರಿಸಿಕೊಳ್ಳಲು ಅಗತ್ಯ ದಾಖಲಾತಿಗಳನ್ನು ಸಲ್ಲಿಸಿ ಪಾಸ್ ಪಡದುಕೊಳ್ಳಬಹುದಾಗಿದೆ. ನೂತನ ಪಾಸ್‌ಗಳಿಗೆ ನಿರ್ಧಿಷ್ಟ ಕಾಲಮಿತಿ ಇರುವುದಿಲ್ಲ. ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

2026ನೇ ಸಾಲಿನಲ್ಲಿ ಅರ್ಹ ವಿಕಲಚೇತನರಿಗೆ ಹೊಸದಾಗಿ ಪಾಸ್‌ಗಳನ್ನು ಪೂರೈಸಲು ಸಹ ಸೂಕ್ತ ವ್ಯವಸ್ಥೆ ಮಾಡಲಾಗಿದೆ. ರಿಯಾಯಿತಿ ಬಸ್ ಪಾಸ್ ಪಡೆಯಲು ಯುಡಿಐಡಿ ಕಾರ್ಡ, ಆಧಾರ ಕಾರ್ಡ ಹಾಗೂ ಮೂರು ಇತ್ತೀಚಿನ ಭಾವಚಿತ್ರದೊಂದಿಗೆ ವಿಭಾಗೀಯ ಕಚೇರಿ, ವಾಕರಸಾಸಂಸ್ಥೆ, ನವನಗರ ಬಾಗಲಕೋಟೆಯಲ್ಲಿ ಪ್ರತಿ ಮಂಗಳವಾರ ಮತ್ತು ಶುಕ್ರವಾರಗಳಂದು ಅರ್ಜಿ ಸಲ್ಲಿಸಬಹುದಾಗಿದೆ ಎಂದು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಿ.21 ರಿಂದ ಪಲ್ಸ್ ಪೋಲೀಯೋ ಕಾರ್ಯಕ್ರಮ

**ಮಲ್ಲಮ್ಮ ನುಡಿಬಾಗಲಕೋಟೆ:**

ಜಿಲ್ಲೆಯಾದ್ಯಂತ ಡಿಸೆಂಬರ 21 ರಿಂದ ನಾಲ್ಕು ದಿನಗಳ ಕಾಲ ಪಲ್ಸ್ ಪೋಲೀಯೋ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, 5 ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಲಸಿಕೆ ಹಾಕಿಸುವಂತೆ ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಪಲ್ಸ್ ಪೋಲೀಯೋ ಲಸಿಕಾ ಕಾರ್ಯಕ್ರಮದ ಕುರಿತು ಜಿಲ್ಲಾ ಮಟ್ಟದ ಕಾರ್ಯಪಡೆ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಡಿಸೆಂಬರ 21 ರಂದು ಬೂತ್ ಮಟ್ಟದಲ್ಲಿ ನಡೆಸಲಾಗುತ್ತಿದ್ದು, ನಂತರದ ಮೂರು ದಿನ ಮನೆ ಮನೆಗೆ ತೆರಳಿ ಪೋಲಿಯೋ ಲಸಿಕೆ ಹಾಕಲಾಗುತ್ತಿದೆ ಎಂದು ತಿಳಿಸಿದರು.

ಪೊಲಿಯೋ ಒಂದು ಮಾರಕ ರೋಗವಾಗಿದ್ದು, 5 ವರ್ಷದೊಳಗಿನ ಯಾವುದೇ ಮಗು ಈ ಕಾರ್ಯಕ್ರಮದಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕು. ಈ ಲಸಿಕಾ ಕಾರ್ಯಕ್ರಮಕ್ಕೆ ಗ್ರಾ.ಪಂ ಮತ್ತು ನಗರ ಸ್ಥಳೀಯ ಸಂಸ್ಥೆಗಳು ಹೆಚ್ಚಿನ ಕಾಳಜಿ ವಹಿಸಬೇಕು. ಸಾರ್ವಜನಿಕರು ಸ್ವಯಂ ಪ್ರೇರಿತವಾಗಿ ಲಸಿಕಾ ಕೇಂದ್ರಗಳಿಗೆ ಕರೆದುಕೊಂಡು ಬರತಕ್ಕದ್ದು. ನಗರ, ಸ್ಲಂ ಪ್ರದೇಶಗಳಲ್ಲಿ ವಿಶೇಷ ಗಮನಹರಿಸಬೇಕು. ಅಲ್ಲದೇ ಜಿಲ್ಲೆಯ ಕಬ್ಬು ಕಡೆಯುವ ಗ್ಯಾಂಗ್‌ನ ಮತ್ತು ಇಟ್ಟಂಗಿ ಬಟ್ಟಿಯಲ್ಲಿನ ಮಕ್ಕಳು ಸಹ ಲಸಿಕೆಯಿಂದ ವಂಚಿತರಾಗದಂತೆ ಕ್ರಮವಹಿಸಬೇಕು. ಸಂಘ ಸಂಸ್ಥೆಗಳ ಸಹಕಾರ ಪಡೆದು ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಂಜುನಾಥ ಡಿ ಮಾತನಾಡಿ, ನಗರ ಪ್ರದೇಶದಲ್ಲಿ 76730 ಹಾಗೂ ಗ್ರಾಮೀಣ ಪ್ರದೇಶದಲ್ಲಿ 146251 ಸೇರಿ ಒಟ್ಟು 222981 ಮಕ್ಕಳಿದ್ದು, 407777 ಕುಟುಂಬಗಳಿವೆ. ಲಸಿಕಾ ಕಾರ್ಯಕ್ಕೆ ಒಟ್ಟು 1282 ಬೂತ್‌ಗಳನ್ನು ಸ್ಥಾಪಿಸಲಾಗಿದೆ. ಅಲ್ಲದೇ 63 ಮೊಬೈಲ್ ಟೀಮ್ ಹಾಗೂ 45 ಟ್ರಾನ್ಸಿಸ್ಟ್ ಟೀಮ್‌ಗಳನ್ನು ಕೂಡ ಸ್ಥಾಪಿಸಲಾಗಿದೆ. ಲಸಿಕಾ ಕಾರ್ಯಕ್ರಮಕ್ಕೆ 2665 ಸಿಬ್ಬಂದಿಗಳು, 265 ಮೇಲ್ವಿಚಾರಕರನ್ನು ನೇಮಿಸಲಾಗಿದೆ. ಪ್ರತಿ ಬೂತ್‌ಗೆ ಇಬ್ಬರು ಸದಸ್ಯರು, ಐದು ತಂಡಕ್ಕೆ ಒಬ್ಬ ಮೇಲ್ವಿಚಾರಕರು ಕಾರ್ಯನಿರ್ವಹಿಸಲಿದ್ದು, ಪ್ರತಿ ಬೂತ್ ಮಟ್ಟದ ವ್ಯಾಪ್ತಿಯಲ್ಲಿ ಬರುವ ಮನೆಗಳಿಗೆ ತೆರಳಿ ಪೋಲಿಯೊ ಹನಿ ಹಾಕಲಿದ್ದಾರೆ ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಜಿ.ಪಂ ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು, ಜಿಲ್ಲಾ ಆರ್.ಸಿ.ಎಚ್ ಅಧಿಕಾರಿ ಡಾ.ರಾಜಕುಮಾರ ಯರಗಲ್ಲ, ಜಿಲ್ಲಾ ಕುಷ್ಟರೋಗ ನಿಯಂತ್ರಣಾಧಿಕಾರಿ ಶಿವನಗೌಡ ಪಾಟೀಲ, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ಕುಸುಮಾ ಮಾಗಿ, ಜಿಲ್ಲಾ ಸಮೀಕ್ಷಣಾಧಿಕಾರಿ ಡಾ.ದಯಾನಂದ ಕರೆನ್ನವರ, ಜಿಲ್ಲಾ ಕ್ಷಯ-ರೋಗ ನಿಯಂತ್ರಣಾಧಿಕಾರಿ ಡಾ.ಸುವರ್ಣ ಕುಲಕರ್ಣಿ ಸೇರಿದಂತೆ ಆಯಾ ತಾಲೂಕಾ ಆರೋಗ್ಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಲೋಕ ಅದಾಲತ್-ಮತ್ತೆ ಒಂದಾದ 8 ಜೋಡಿ ದಂಪತಿಗಳು ರಾಜೀ ಸಂಧಾನದ ಮೂಲಕ 33,693 ಪ್ರಕರಣ ಇತ್ಯರ್ಥ

ಮಲ್ಲಮ್ಮ ನುಡಿ

ಬಾಗಲಕೋಟೆ,15-ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎನ್.ವಿ.ವಿಜಯ್ ಅವರ ನೇತೃತ್ವದಲ್ಲಿ ಶನಿವಾರ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಬಾಕಿ ಇರುವ 5885 ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳಲ್ಲಿ 27808 ಪ್ರಕರಣ ಸೇರಿ ಒಟ್ಟು 33,693 ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಲಾಯಿತು.



ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಬಾಗಲಕೋಟೆ ಜಿಲ್ಲಾ ನ್ಯಾಯಾಲಯದಲ್ಲಿ ನಡೆದ ಲೋಕ ಅದಾಲತ್‌ನಲ್ಲಿ ಬಾಕಿ ಇರುವ ಒಟ್ಟು 11833 ಪೈಕಿ 5885 ಪ್ರಕರಣ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳಲ್ಲಿ ಒಟ್ಟು 31282 ಪೈಕಿ 27808 ಪ್ರಕರಣಗಳನ್ನು ಇತ್ಯರ್ಥಪಡಿಸಲಾಯಿತು. ಅದಾಲತ್‌ನಲ್ಲಿ ಒಟ್ಟು 42.86 ಕೋಟಿ ರೂ.ಗಳ ಪ್ರಕರಣದ ಮೊತ್ತವಾಗಿತ್ತು.

ಕೌಟುಂಬಿಕ ವಿವಾದದ ಹಿನ್ನಲೆಯಲ್ಲಿ ಜಿಲ್ಲಾ ಮತ್ತು ಅಧೀನ ಕುಟುಂಬ ನ್ಯಾಯಾಲಯದಲ್ಲಿ ವಿಚ್ಛೇದನ ಬಯಸಿ ಅರ್ಜಿ ಸಲ್ಲಿಸಿದ್ದ 58 ಜೋಡಿ ಪೈಕಿ 8 ಜೋಡಿಗಳು ಮತ್ತೆ ಒಂದಾಗುವ ಮೂಲಕ ಹೊಸ ಜೀವನ ಆರಂಭಿಸಲು ಅಣಿಯಾದರು. ಜಿಲ್ಲಾ ನ್ಯಾಯಾಲಯದಲ್ಲಿ ಬಾಕಿ ಇರುವ 4807 ಪ್ರಕರಣಗಳ ಪೈಕಿ 1872, ಬೀಳಗಿ ನ್ಯಾಯಾಲಯದಲ್ಲಿ 448 ಪೈಕಿ 316, ಮುಧೋಳ ನ್ಯಾಯಾಲಯದಲ್ಲಿ 801 ಪೈಕಿ 708, ಬನಹಟ್ಟಿ ನ್ಯಾಯಾಲಯದಲ್ಲಿ 1734 ಪೈಕಿ 466, ಹುನಗುಂದ ನ್ಯಾಯಾಲಯದಲ್ಲಿ 1467 ಪೈಕಿ 613, ಇಲಕಲ್ಲ ನ್ಯಾಯಾಲಯದಲ್ಲಿ 446 ಪೈಕಿ 386, ಬಾದಾಮಿ ನ್ಯಾಯಾಲಯದಲ್ಲಿ 836 ಪೈಕಿ 761, ಜಮಖಂಡಿ ನ್ಯಾಯಾಲಯದಲ್ಲಿ 1254 ಪೈಕಿ 762 ಹಾಗೂ ಎಫ್.ಟಿ.ಎಸ್.ಸಿ-1 ಕೋರ್ಟನಲ್ಲಿ 31 ಪೈಕಿ 1 ಪ್ರಕರಣಗಳನ್ನು ಇತ್ಯರ್ಥಪಡಿಸಲಾಯಿತು.

ವ್ಯಾಜ್ಯಪೂರ್ವ ಪ್ರಕರಣಗಳಲ್ಲಿ ಬ್ಯಾಂಕಿಗೆ ಸಂಬಂಧಿಸಿದ 4 ಪೈಕಿ 1 ಪ್ರಕರಣಗಳಿಗೆ ಒಟ್ಟು 5.19 ಲಕ್ಷ ರೂ.ಗಳಿಗೆ ಇತ್ಯರ್ಥಗೊಂಡರೆ, ಭೂ ಸ್ವಾಧೀನ ಪ್ರಕರಣಕ್ಕೆ ಸಂಬಂಧಿಸಿದ 1757 ಪೈಕಿ 23 ಕ್ಕೆ 3.98 ಕೋಟಿ ರೂ, ಕಾರ್ಮಿಕರಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ 12 ಪೈಕಿ 12ಕ್ಕೆ 15 ಸಾವಿರ ರೂ, ಸಿವಿಲ್ ಪ್ರಕರಣಗಳಲ್ಲಿ ಪಾಟಿಶನ್ ಸೂಟ್‌ದಲ್ಲಿ 874 ಪೈಕಿ 334ಕ್ಕೆ 12.38 ಕೋಟಿ ರೂ, ಎಂ.ಎ.ಟಿ.ಸಿ ಪ್ರಕರಣಗಳಲ್ಲಿ 207 ಪೈಕಿ 62ಕ್ಕೆ 3.4 ಕೋಟಿ ರೂ.ಗಳಿಗೆ ಇತ್ಯರ್ಥಪಡಿಸಲಾಯಿತು.

ಲೋಕ ಅದಾಲತ್ ಶಿಬಿರದಲ್ಲಿ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ಹಾಗೂ ಎಫ್‌ಟಿಎಸ್‌ಸಿ-1 ನ್ಯಾಯಾಧೀಶೆ ಪಿ.ಎಸ್.ಸದರಜೋಶಿ, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಜಿ.ಎ.ಮೂಲಿಮನಿ, 4ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಧೀಶ ರಾಜೇಶ ಕರಣಮ್ ಕೆ, 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ರಮೇಶ ಎಕಬೋಟೆ, ಜಿಲ್ಲಾ ನ್ಯಾಯಾಧೀಶರು ಮತ್ತು ಕುಟುಂಬ ನ್ಯಾಯಾಲಯದ ಕೃಷ್ಣಮೂರ್ತಿ ಪಡಸಲಗಿ, ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶ ಮಹೇಶ ಪಾಟೀಲ, 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧಿಶ ಸುದೀಪ ನಾಯಕ, 2ನೇ ಹೆಚ್ಚುವರು ಹಿರಿಯ ದಿವಾಣಿ ನ್ಯಾಯಾಧೀಶ ರಾಜಶೇಖರ ತಿಳಗಂಜಿ, ಪ್ರಧಾನ ದಿವಾಣಿ ನ್ಯಾಯಾಧೀಶ ಮುರಗೇಂದ್ರ ತುಬಾಕೆ, ಹೆಚ್ಚುವರಿ ದಿವಾನಿ ನ್ಯಾಯಾಧೀಶೆ ರೂಪಾ ಮಟ್ಟಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಚಂದ್ರಶೇಖರ ದಿಡ್ಡಿ ಇದ್ದರು.

# ಬೀದಿ ನಾಯಿಗಳ ಪಾಲನೆ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಚಿಂಚೋಳಿ ಪುರಸಭೆಯ ವ್ಯಾಪ್ತಿಯಲ್ಲಿನ ಬೀದಿ ನಾಯಿಗಳ ಪಾಲನೆ ಮತ್ತು ಪ್ರಾಣಿಗಳ ರಕ್ಷಣಾ ಸೇವೆಗಳನ್ನು ನೀಡಲು ಅನುಭವ , ಹೊಂದಿರುವ ಅರ್ಹ ಅನುಭವಿ ಸರ್ಕಾರೇತರ ಸಂಸ್ಥೆಗಳು (ಎನ್‌ಜಿ) ಗಳಿಂದ ಮುಚ್ಚಿದ ಲಕೋಟೆಯಲ್ಲಿ ಸೀಲ್ ಬಂದ ಕೋಟೆಶನಗಳನ್ನು ಆಹ್ವಾನಿಸಲಾಗಿದೆ ಎಂದು ಚಿಂಚೋಳಿ ಪುರಸಭೆಯ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

ಬೀದಿ ನಾಯಿಗಳಿಗೆ ಪ್ರತಿ ನಿತ್ಯ ಆಹಾರ ಮತ್ತು ನೀರು ನೀಡುವುದು, ಲಸಿಕೆ ನಿಯಮಿತ ಆರೋಗ್ಯ ಪರಿಶಿಲನೆ ಮತ್ತು ಪ್ರಾಥಮಿಕ ಚಿಕಿತ್ಸಾ ವ್ಯವಸ್ಥೆ, ಎಬಿಸಿ ನಿಯಾಮಗಳ ಅನುಸಾರ ಸಂತಾನ ಹರಣ ಶಸ್ತ್ರ ಚಿಕಿತ್ಸೆ (sterilization) ಕಾರ್ಯದ ಸಮನ್ವಯತೆ, ಆಶ್ರಯ ಕೇಂದ್ರದ ನಿರ್ವಹಣೆ ಹಾಗೂ ದಾಖಲಾತಿ ಸಂರಕ್ಷಣೆ, ಪುರಸಭೆಯ ಆರೋಗ್ಯ ವಿಭಾಗಕ್ಕೆ ದೈನಂದಿನ ವರದಿ ನೀಡುವುದು.

ಅರ್ಹತಾ ಮಾನದಂಡಗಳು:- ಭಾರತೀಯ ಪ್ರಾಣಿ ಕಲ್ಯಾಣಿ ಮಂಡಳಿ ಯವರಿಗಂದ ಪ್ರಮಾಣ ಪತ್ರ ಹೊಂದಿರುವ ನೋಂಧಾಯಿತ ಸರಕಾರೇತರ ಸಂಸ್ಥೆಗಳು, ಪ್ರಾಣಿ ಪಾಲನೆ/ಎ.ಬಿ.ಸಿ. ಕಾರ್ಯಕ್ರಮಗಳಲ್ಲಿ ಕನಿಷ್ಠ ವರ್ಷದ ಅನುಭವ ಎನ್.ಜಿ.ಓ. ಅಧಿಕೃತ ಪ್ರತಿನಿಧಿಯ ಮಾನ್ಯತೆ ಹೊಂದಿರುವ ಆಧಾರ ಪ್ರಮಾಣ ಪತ್ರಗಳು ಬ್ಯಾಂಕ್ ಖಾತೆಯ ವಿವರು. Animal birth control (dog) Rules, ಸಲ್ಲಿಕೆ ವಿವರಗಳು, ಅರ್ಹ ಸಂಸ್ಥೆಗಳು ಮುಚ್ಚಿದ ಲಕೋಟೆಯಲ್ಲಿ ಕೋಟೇಶನಗಳನ್ನು ಹಾಗೂ ಅಗತ್ಯ ದಾಖಲೆಗಳಣ್ನು ಮುಖ್ಯಾಧಿಕಾರಿ ಪುರಸಭೆಯ ಕಚೇರಿಗೆ 15 ದಿನಗಳ ಒಳಗಾಗಿ ಅವಶ್ಯಕ ಇರುವ ದಾಖಲೆಗಳನ್ನು ಚಿಂಚೋಳಿ ಪುರಸಭೆ ಕಛೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ನಗರಸಭೆಯ ಆರೋಗ್ಯ ವಿಭಾಗವನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಲು ಕೋರಲಾಗಿದೆ.

# ಬೆಳಗಾವಿಯಲ್ಲಿ ಸರಸ್ ಮೇಳ ಗಮನ ಸೆಳೆದ ಬಾಗಲಕೋಟೆ ಜಿಲ್ಲೆಯ ಉತ್ಪನ್ನಗಳು

**ಮಲ್ಲಮ್ಮ ನುಡಿ ಬಾಗಲಕೋಟೆ:**

ಬೆಳಗಾವಿಯಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಸಂಜೀವಿನಿ ವತಿಯಿಂದ ಆಯೋಜಿಸಲಾದ ಬೆಳಗಾವಿ ಸರಸ್ ಮೇಳದಲ್ಲಿ ಜಿಲ್ಲೆಯ ಸ್ವಸಹಾಯ ಸಂಘದ ಮಹಿಳೆಯರು ತಯಾರಿಸಿದ ಉತ್ಪನ್ನಗಳು ಗಮನ ಸೆಳೆದವು.

ಬೆಳಗಾವಿಯ ಸರ್ದಾರ್ ಆಟದ ಮೈದಾನದಲ್ಲಿ ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ರಾಷ್ಟ್ರೀಯ ಜೀವನೋಪಾಯ ಅಭಿಯಾನ ಹಾಗೂ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಮಹಾನಗರ ಪಾಲಿಕೆ ಬೆಳಗಾವಿ ಇವರ ಸಹಯೋಗದಲ್ಲಿ ಡಿಸೆಂಬರ 12 ರಿಂದ 21 ವರೆಗೆ ಹಮ್ಮಿಕೊಂಡ ರಾಜ್ಯ ಮಟ್ಟದ ಬೆಳಗಾವಿ ಸರಸ್ ಮೇಳದಲ್ಲಿ ಜಿಲ್ಲೆಯ ಮಹಿಳಾ ಸ್ವ-ಸಹಾಯ ಗುಂಪುಗಳಿಂದ ತಯಾರಿಸಿದ ಪರಿಸರ ಸ್ನೇಹಿ ಜೂಟ್ ಬ್ಯಾಗ್‌ಗಳು, ಆಕರ್ಷಕ ಸುಪ್ರಸಿದ್ದ ಇಲಕಲ್ಲ ಸೀರೆಗಳು ಹಾಗೂ ಆರೋಗ್ಯಕರ ನೈಸರ್ಗಿಕ ವಸ್ತುಗಳು ನೋಡುಗರ ಗಮನ ಸೆಳೆದವು.



ಈ ಸಂದರ್ಭದಲ್ಲಿ ರಾಷ್ಟ್ರೀಯ ಜೀವನೋಪಾಯದ ಅಭಿಯಾನದ ನಿರ್ದೇಶಕಿ ಸ್ನೇಹಲ್ ಆರ್ ಬಾಗಲಕೋಟೆ ಜಿಲ್ಲೆಯ ಮಹಿಳಾ ಸ್ವ-ಸಹಾಯ ಗುಂಪುಗಳಾದ ಸುಳೇಭಾವಿಯ ಶ್ರೀ ರೇವಣಸಿದ್ದೇಶ್ವರ ಸ್ತ್ರೀ ಶಕ್ತಿ ಮಹಿಳಾ ಸಂಘ ಹಾಗೂ ಇಳಕಲ್ಲಿನ ಶ್ರೀ ರಾಮಲಿಂಗೇಶ್ವರ ಮಹಿಳಾ ಸ್ತ್ರೀ ಶಕ್ತಿ ಸಂಘಗಳು ಸ್ಥಾಪಿಸಿದ ಮಳಿಗೆಗೆ ಭೇಟಿ ನೀಡಿ ಕೈ ಮಗ್ಗದಿಂದ ತಯಾರಿಸಿದ ಇಳಕಲ್ ಸೀರೆಗಳ ಗುಣಮಟ್ಟ, ಗ್ರಾಮೀಣ ಭಾಗದ ಸೊಗಡನ್ನು ಮುಂದುವರಿಸುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸೈದಾಪೂರದ ಶ್ರೀ ವರಮಹಾಲಕ್ಷ್ಮಿ ಸಂಜೀವಿನಿ ಮಹಿಳಾ ಸ್ವ-ಸಹಾಯ ಗುಂಪು ತಯಾರಿಸಿದ ಸಾವಯವ ಉತ್ಪನ್ನಗಳಾದ ಶುದ್ಧ ಗಾನದ ಎಣ್ಣೆ, ನುಗ್ಗೆ ಸೊಪ್ಪಿನ ಪೌಡರ, ಬೆಟ್ಟದ ನೆಲ್ಲಿಕಾಯಿಯ ಚೂರ್ಣ, ಬೇವಿನ ಸೊಪ್ಪು, ಕಡಲೆ ಹಿಟ್ಟು ಲೋಳಸರಗಳಿಂದ ತಯಾರಿಸಲ್ಪಟ್ಟಿರುವ ಸಾಬೂನುಗಳನ್ನು ಖರೀದಿಸಿ, ನುಗ್ಗೆ ಸೊಪ್ಪಿನ ಕಷಾಯಿಯನ್ನು ಸವಿದರು. ವಿವಿಧ ರೀತಿಯ ಆರೋಗ್ಯಕರ ಉತ್ಪನ್ನಗಳನ್ನು ತಯಾರಿಸುವಂತೆ ಮಾರ್ಗದರ್ಶನ ನೀಡಿದರು. ಜಿಲ್ಲೆಯಿಂದ ನಿಯೋಜನೆಗೊಂಡಿದ್ದ ಅಡಿವೇಶ ಧೂಪದ, ಜಯಶ್ರೀ ಮುಂಗಲಿ ಸಂಜೀವಿನಿ ಯೋಜನೆಯಿಂದ ಸೌಲಭ್ಯ ಪಡೆದು ಜೀವನೋಪಾಯ ಚಟುವಟಿಕೆ ಕೈಗೊಂಡು ಸ್ವಾವಲಂಬಿ ಜೀವನ ನಡೆಸುತ್ತಿರುವ ಬಗ್ಗೆ ಅಭಿಯಾನ ನಿರ್ದೇಶಕರಿಗೆ ತಿಳಿಸಿದರು. ಸ್ವಸಹಾಯ ಗುಂಪುಗಳ ಮಹಿಳೆಯರು ತೋರಿದ ಶ್ರಮ, ಸೃಜನಶೀಲತೆ ಹಾಗೂ ಸ್ವಾವಲಂಬನೆಯ ಪ್ರಯತ್ನವನ್ನು ಶ್ಲಾಘಿಸಿ ಇಂತಹ ಮೇಳಗಳು ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಸೂಕ್ತ ವೇದಿಕೆ ಆಗಿದೆ ಎಂದು ತಿಳಿಸಿದರು.

## ಗುರುಗಳ ಗೌರವ, ಗೆಳೆಯರ ಸಮಾಗಮ



**ಯಾದಗಿರಿ:** ತಾಲೂಕಿನ ಲಿಂಗೇರಿ ಸ್ಟೇಷನ್ ಸ್ಥಳೀಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ಶನಿವಾರ 2011–12ನೇ ಸಾಲಿನಲ್ಲಿ ಎಸ್ ಎಸ್ ಎಲ್ ಸಿ ಮುಗಿಸಿದ ವಿದ್ಯಾರ್ಥಿಗಳ ತಂಡವು ಶ್ರದ್ಧಾಭಕ್ತಿಯಿಂದ 'ಗುರುವಂದನಾ ಮತ್ತು ಸ್ನೇಹ ಸಮ್ಮಿಲನ' ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿತು.

ಗುರು–ಶಿಷ್ಯ ಪರಂಪರೆಯನ್ನು ಮತ್ತೊಮ್ಮೆ ಅನಾವರಣಗೊಳಿಸಿದ ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಸಂಘಟನಾ ಚಾತುರ್ಯ ಎದ್ದು ಕಾಣಿಸಿತು.

**ಪುಷ್ಪನಮನದೊಂದಿಗೆ ಪೂಜ್ಯ ಗುರುಗಳಿಗೆ ಆಹ್ವಾನ:** ಸನ್ಮಾನ ಸಮಾರಂಭದ ಪ್ರಮುಖ ಆಕರ್ಷಣೆಯಾಗಿ, ವಿದ್ಯಾರ್ಥಿಗಳು ತಮ್ಮನ್ನು ರೂಪಿಸಿದ ಗುರುಗಳಿಗೆ ಗೌರವ ಸಲ್ಲಿಸಲು ವಿಭಿನ್ನ ಆಯಾಮ ನೀಡಿದರು. ಗುರುಗಳೆಲ್ಲರೂ ತಮ್ಮ ಹಳೆಯ ಪಾಠದ ಕೋಣೆಯಾದ 10ನೇ ತರಗತಿ ಕೋಣೆಯಲ್ಲಿ ಸಮಾವೇಶಗೊಂಡರು.

ನಂತರ, ವಿದ್ಯಾರ್ಥಿಗಳು ಹಳೆಯ ಗೆಳೆಯರೊಂದಿಗೆ ಸೇರಿ, ತಮ್ಮ ಗುರುಗಳ ಹೆಜ್ಜೆ ಹೆಜ್ಜೆಗೂ ಪುಷ್ಪಗಳನ್ನು ಅರ್ಪಿಸುತ್ತಾ (ಪುಷ್ಪಾರ್ಚನೆ ಮಾಡುತ್ತಾ), ಆ ಕೋಣೆಯಿಂದ ವೇದಿಕೆಯವರೆಗೆ ಕರೆತಂದರು. ತಾವು ಜ್ಞಾನಾರ್ಜನೆ ಮಾಡಿದ ಸ್ಥಳದಿಂದಲೇ ಶಿಷ್ಯರ ಪ್ರೀತಿಯ ಕಾಣಿಕೆಯೊಂದಿಗೆ ವೇದಿಕೆ ಏರಿದ ಗುರುಗಳು ಈ ಅಪರೂಪದ ಗೌರವಕ್ಕೆ ಭಾವುಕರಾದರು. ಇದು ವಿದ್ಯಾರ್ಥಿಗಳ ಕೃತಜ್ಞತೆಯ ಭಾವವನ್ನು ಅನಾವರಣಗೊಳಿಸಿತು.

# ವಚನಗಳ ಅಧ್ಯಯನದಿಂದ ಬದುಕು ಉನ್ನತಿ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ಶರಣರ ವಚನಗಳು ನಮ್ಮ ಬದುಕಿಗೆ ಹಿಡಿದ ಕೈಗನ್ನಡಿ. ಅವರ ಜೀವನ ಮತ್ತು ವಚನಗಳ ಅಧ್ಯಯನ ಮಾಡಿದರೆ, ನಮ್ಮ ಬದುಕನ್ನು ಹೇಗೆ ಉನ್ನತೀಕರಿಸಿಕೊಳ್ಳಬೇಕು ಎಂಬುದು ತಿಳಿಯುತ್ತದೆ ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಹೇಳಿದರು.

ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ಹಿರೇಮಠ ಸಂಸ್ಥಾನದ ವತಿಯಿಂದ ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರ 136ನೇ ಜಯಂತ್ಯುತ್ಸವ ನಿಮಿತ್ತ ಭಾನುವಾರ ಆಯೋಜಿಸಿದ್ದ ವಚನ ದರ್ಶನ ಪ್ರವಚನ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಮುಂಜಾನೆಯ ಮಂಜಿನಲ್ಲಿ ಮುಂದಿನ ದಾರಿ ಕಾಣುವುದಿಲ್ಲ ಸೂರ್ಯನ ಕಿರಣಗಳು ಬಂದಾಗ ಮಂಜು ಸರಿದು ದಾರಿ ಸ್ಪಷ್ಟವಾಗಿ ಕಾಣುತ್ತದೆ. ಬದುಕಿನಲ್ಲಿ ಅನೇಕ ಜಂಜಡ ತೊಂದರೆಗಳು ಅಶಾಂತಿ ನೆಲೆ ಮಾಡಿ ಮುಂದಿನ ದಾರಿ ಕಾಣದಿದ್ದಾಗ, ಪ್ರವಚನಗಳ ಮೂಲಕ ಜ್ಞಾನ ಸೂರ್ಯನ ಕಿರಣಗಳಿಂದ ಬದುಕಿನ ಮುಂದಿನ ದಾರಿ ಕಾಣುತ್ತದೆ. ಹಾಗಾಗಿ ಇಂತಹ ಪ್ರವಚನಗಳು ನಮ್ಮ ಬದುಕಿಗೆ ಅತ್ಯವಶ್ಯ ಎಂದು ತಿಳಿಸಿದರು.

ಪ್ರವಚನಕಾರರಾದ ಪ್ರಭುಲಿಂಗ ದೇವರು ಮಾತನಾಡಿ ಮನೆಯಲ್ಲಿ ಕಸ ಬಿದ್ದಾಗ ಪ್ರತಿದಿನ ಸ್ವಚ್ಛಪಡಿಸಿಕೊಳ್ಳುವಂತೆ, ಮನದ ಮೈಲಿಗೆಯನ್ನು ತೊಳೆಯಲು ಇಂತಹ ಪ್ರವಚನಗಳು ಪರಿಣಾಮಕಾರಿ ಕೆಲಸವನ್ನು ಮಾಡುತ್ತವೆ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ತಾಲೂಕು ವಕೀಲರ ಸಂಘದ ಅಧ್ಯಕ್ಷ ಸಂಗಮೇಶ ಗಾಮಾ ಮಾತನಾಡಿ, ಶರಣರ ಮಹಾತ್ಮರ ಬದುಕು ಅವರ ನಡೆ–ನುಡಿಗಳು ನಮ್ಮ ಬದುಕಿನ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ನೀಡುತ್ತವೆ. ಆದ್ದರಿಂದ ಜನತೆ ಹೆಚ್ಚು ಇಂತಹ ಪ್ರವಚನಗಳನ್ನು ಆಲಿಸಬೇಕು ಎಂದರು.

ಚನ್ನಬಸವಾಶ್ರಮ ಪರಿಸರದ ಸಂಚಾಲಕ ವಿಶ್ವನಾಥಪ್ಪ ಬಿರಾದರ್ ಬಸವಗುರುವಿನ ಪೂಜೆ ನೆರವೇರಿಸಿದರು. ತಾಲೂಕು ಜಾಗತಿಕ ಲಿಂಗಾಯತ ಮಹಾಸಭಾದ ಅಧ್ಯಕ್ಷ ಬಸವರಾಜ ಮರೆ ಅವರು ಧರ್ಮ ಗ್ರಂಥ ಪಠಣ ಮಾಡಿದರು. ಪ್ರವಚನ ಸೇವಾ ಸಮಿತಿಯ ಅಧ್ಯಕ್ಷ ಶಿವಕುಮಾರ ಕಮಠಾಣೆ ಸ್ವಾಗತಿಸಿದರು. ದೀಪಕ ಠಮಕೆ ನಿರೂಪಿಸಿದರು.

> ಡಿ.21ರ ವರೆಗೆ ಪ್ರಭುಲಿಂಗ ಸ್ವಾಮೀಜಿ ಅವರು ವಚನ ದರ್ಶನ ವಿಷಯದ ಮೇಲೆ ಬೆಳಕು ಚೆಲ್ಲಲಿದ್ದು ಜಿಲ್ಲೆಯ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪ್ರವಚನದ ಸದುಪಯೋಗ ಪಡೆದುಕೊಳ್ಳಬೇಕು.
>
> –ಗುರುಬಸವ ಪಟ್ಟದ್ದೇವರು
> ಹಿರೇಮಠ ಸಂಸ್ಥಾನ ಭಾಲ್ಕಿ

## ಕ್ಷೇತ್ರದ ಅಭಿವೃದ್ಧಿಯೇ ಮುಖ್ಯ ಗುರಿ: ಶಾಸಕ ಎಸ್ ಮುನಿರಾಜು



**ಪೀಣ್ಯ ದಾಸರಹಳ್ಳಿ:** ಹುಟ್ಟುಹಬ್ಬ ಆಚರಣೆ ಕೇವಲ ನೆಪವಷ್ಟೇ. ಆದರೆ ಸಾರ್ವಜನಿಕರಿಗೆ ಮತ್ತು ಕ್ಷೇತ್ರದ ಜನತೆಗೆ ವಿವಿಧ ಸೇವಾ ಕಾರ್ಯಕ್ರಮಗಳನ್ನು ನೆರವೇರಿಸುವ ಮೂಲಕ ಜನ ಸಾಮಾನ್ಯರೊಂದಿಗೆ ಬೆರೆಯುವ ಸುವರ್ಣಾವಕಾಶ ಎಂದು ಶಾಸಕ ಎಸ್ ಮುನಿರಾಜು ತಿಳಿಸಿದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಬಾಗಲಗುಂಟೆ ವಾರ್ಡ್ ನ ಶೇಶಾದ್ರಿ ಲೇಔಟ್ ನಲ್ಲಿ ಡಾ.ಮುರಳಿ ಬಿ.ಅವರ ನೇತೃತ್ವದಲ್ಲಿ ಶಾಸಕ ಎಸ್ ಮುನಿರಾಜು ಹುಟ್ಟುಹಬ್ಬದ ಪ್ರಯುಕ್ತ ಗಿಡ ನೆಡುವ ಮೂಲಕ ಹಾಗೂ ಸಸಿಗಳನ್ನು ನೀಡುವ ಮೂಲಕ ವಿಶಿಷ್ಟವಾಗಿ ಹುಟ್ಟುಹಬ್ಬದ ಆಚರಣೆಯನ್ನು ಆಚರಿಸಲಾಯಿತು

ಕ್ಷೇತ್ರದ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುವುದು ನನ್ನ ಮುಖ್ಯ ಗುರಿ.ನಮ್ಮ ಕ್ಷೇತ್ರದಲ್ಲಿ ಹಲವಾರು ಸಾಕಷ್ಟು ಸಮಸ್ಯೆಗಳಿದ್ದು ಅವುಗಳನ್ನು ಬಗೆಹರಿಸಿ ನಮ್ಮ ಕ್ಷೇತ್ರವನ್ನು ಅಭಿವೃದ್ಧಿ ಹೊಂದಿದ ಕ್ಷೇತ್ರವನ್ನಾಗಿ ಮಾಡುವುದೆ ನಮ್ಮ ಗುರಿ ಎಂದರು.

ಬಳಿಕ ಮಾತನಾಡಿದ ಬಿಜೆಪಿ ಹಿರಿಯ ಮುಖಂಡ ಡಾ.ಮುರುಳಿ ಬಿ ಶಾಸಕರವರ ನೇತೃತ್ವದಲ್ಲಿ ವಿಶೇಷ ಸೇವಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಈಸಂದರ್ಭದಲ್ಲಿ ಮಹಿಳೆಯರಿಗೆ ಉಚಿತವಾಗಿ ಸೀರೆ ವಿತರಣೆ ಅನ್ನದಾನ, ಆಟೋ ಚಾಲಕರಿಗೆ ಸಮವಸ್ತ್ರ ಗಿಡ ನೆಡುವ ಮೂಲಕ ವಿಶಿಷ್ಟ ಅಚರಿಸಲಾಯಿತು ಬಂದಿದ್ದ ಸಾರ್ವಜನಿಕರಿಗೆ ಉಚಿತವಾಗಿ ಗಿಡಗಳನ್ನು ವಿತರಿಸಲಾಯಿತು. ಈ ಮೂಲಕ ಶಾಸಕರ ಹುಟ್ಟುಹಬ್ಬವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು ಎಂದು ತಿಳಿಸಿದರು.

ಸಮಾಜಮುಖಿ ಕಾರ್ಯಕ್ರಮ: ಶಾಸಕರ ಜನುಮದಿನದ ಪ್ರಯುಕ್ತ ಕ್ಷೇತ್ರದ ಹಲವಾರು ವಾರ್ಡ್‌ಗಳಲ್ಲಿ ವೈವಿಧ್ಯಮಯ ಸಮಾಜ ಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಉಚಿತ ಆರೋಗ್ಯ ಶಿಬಿರ ಮತ್ತು ರಕ್ತದಾನ ಶಿಬಿರ, ಉಚಿತ ದಾಸೋಹ ಹಾಗೂ ಸಮವಸ್ತ್ರ ವಿತರಣೆ ತಳ್ಳೋಗಾಡಿ ವಿತರಣೆಯನ್ನು ಮಾಡಲಾಯಿತು.

ಈ ಸಂಧರ್ಭದಲ್ಲಿ ಬಿಜೆಪಿ ಮುಖಂಡರುಗಳಾದ ಡಾ.ಮುರುಳಿ ಬಿ, ಲಕ್ಷ್ಮಣ್ ಗೌಡ್ರು, ಆನಂದ್ ರೆಡ್ಡಿ, ಬಿ ನಾರಾಯಣ್, ಭರತ್ ಸೌಂದರ್ಯ, ಮಂಜುನಾಥ್, ಜೈಶ್ರೀ ರಾಮ್, ಮಹಿಳಾ ಮುಖಂಡರಾದ ರಾಜಮ್ಮ, ವಿಜಯಮ್ಮ, ಇನ್ನೂ ಮುಂತಾದವರು ಇದ್ದರು.

## ಅಕ್ರಮ ಕಲ್ಲಿದ್ದಲು ದಂಧೆ ನಿಲ್ಲಿಸಲು ದಲಿತ ಸೇನೆ ಮನವಿ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ತಾಲ್ಲೂಕಿನ ವೈ.ಟಿ.ಪಿ.ಎಸ್ ಥರ್ಮಲ್ ಪವರ್ ಕಾರ್ಖಾನೆಗೆ ಸಂಬಂಧಪಟ್ಟಂತೆ ನಡೆಯುತ್ತಿರುವ ಅಕ್ರಮ ಕಲ್ಲಿದ್ದಲು ಸಾಗಾಟ ಮತ್ತು ಭಾರೀ ಭ್ರಷ್ಟಾಚಾರ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳು ಹಾಗೂ ಖಾಸಗಿ ಕಂಪನಿಯ ಇನ್‌ಚಾರ್ಜ್‌ಗಳ ವಿರುದ್ಧ ಸೂಕ್ತ ತನಿಖೆ ನಡೆಸಿ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ದಲಿತ ಸೇನೆ ಜಿಲ್ಲಾ ಸಮಿತಿ ರಾಯಚೂರು ವತಿಯಿಂದ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ.




ಈ ಕುರಿತು ಮಾತನಾಡಿದ ದಲಿತ ಸೇನೆ ಜಿಲ್ಲಾಧ್ಯಕ್ಷ ಮಾರುತಿ ಚಿಕ್ಕಸೂಗೂರು, ವೈಟಿಪಿಎಸ್ ಕಾರ್ಖಾನೆಯೊಳಗೆ ಬರುವ ಕಲ್ಲಿದ್ದಲು ಸಾಗಾಟದಲ್ಲಿ ಗಂಭೀರ ಅಕ್ರಮಗಳು ನಡೆಯುತ್ತಿದ್ದು, ಕಾರ್ಖಾನೆಗೆ ಬಂದ ಕಲ್ಲಿದ್ದಲು ವ್ಯಾಗನ್‌ಗಳನ್ನು ಪೂರ್ಣ ಪ್ರಮಾಣದಲ್ಲಿ ಖಾಲಿ ಮಾಡದೆ, ಅಲ್ಪಪ್ರಮಾಣ ಉಳಿಸಿಕೊಂಡು ಕಾರ್ಖಾನೆಯ ಹೊರಗಡೆ ತಂದು ಯರಮರಸ್ ರೈಲ್ವೇ ನಿಲ್ದಾಣದ ಬಳಿ ಸಂಪೂರ್ಣ ಖಾಲಿ ಮಾಡಿ, ಇಟಂಗಿ ಬಟ್ಟಿಗಳು ಸೇರಿದಂತೆ ಕೆಲವು ಸಣ್ಣ ಕಾರ್ಖಾನೆಗಳು ಹಾಗೂ ಅನಾಮಿಕರಿಗೆ ದಿನನಿತ್ಯ ಲಕ್ಷಾಂತರ ರೂಪಾಯಿಗಳಿಗೆ ಕಲ್ಲಿದ್ದಲು ಮಾರಾಟ ಮಾಡಲಾಗುತ್ತಿದೆ ಎಂಬ ಆರೋಪಗಳನ್ನು ಹೊರಿಸಿದರು. ಇದೊಂದು ಸಂಘಟಿತ ದೊಡ್ಡ ದಂದೆಯಾಗಿದ್ದು, ನೂರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರ ನಡೆದಿರುವ ಶಂಕೆಯಿದೆ ಎಂದು ಅವರು ತಿಳಿಸಿದರು. ಈ ಅಕ್ರಮ ವ್ಯವಹಾರದಲ್ಲಿ ವೈಟಿಪಿಎಸ್‌ನ ಹಿಂದಿನ ಕಾರ್ಯನಿರ್ವಾಹಕ ನಿರ್ದೇಶಕರಾದ ಗಂಗಾಧರ (ಹಾಲಿ ಟಿ.ಡಿ., ಬೆಂಗಳೂರು), ಸೆಕ್ಯೂರಿಟಿ ಇನ್‌ಚಾರ್ಜ್ ಎಇಇ ರವೀಶ್ ಹಾಗೂ ಪವರ್‌ಮ್ಯಾಕ್ ಕಂಪನಿ ಇನ್‌ಚಾರ್ಜ್ ಸುರೇಂದ್ರ ಅವರು ಪರಸ್ಪರ ಕೈಜೋಡಿಸಿ ನೇರವಾಗಿ ಪಾಲುದಾರರಾಗಿದ್ದಾರೆ ಎಂಬ ಆರೋಪಗಳು ಈಗಾಗಲೇ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದ್ದು, ಪಬ್ಲಿಕ್ ಟಿವಿ ಸೇರಿದಂತೆ ಅನೇಕ ಮಾಧ್ಯಮಗಳಲ್ಲಿ ಈ ಕುರಿತು ಹಲವು ಬಾರಿ ಪ್ರಸಾರವಾಗಿರುವುದನ್ನೂ ಅವರು ಉಲ್ಲೇಖಿಸಿದರು. ಇಂತಹ ಆರೋಪಗಳ ನಡುವೆಯೂ ಗಂಗಾಧರ ಅವರಿಗೆ ಟಿ.ಡಿ. ಹುದ್ದೆಗೆ ಮುಂಬಡ್ತಿ ನೀಡಿರುವುದು ಕಾನೂನುಬಾಹೀರ ಮತ್ತು ಅನುಮಾನಾಸ್ಪದವಾಗಿದೆ ಎಂದು ಮಾರುತಿ ಚಿಕ್ಕಸೂಗೂರು ಹೇಳಿದರು.

## ಪತ್ರಿಕೋದ್ಯಮ ಅಪ್ರೆಂಟಿಸ್ ತರಬೇತಿಗೆ ಅರ್ಜಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪತ್ರಿಕೋದ್ಯಮ ವಿಷಯ ವ್ಯಾಸಂಗ ಮಾಡಿರುವ ಪದವಿ, ಸ್ನಾತಕೋತ್ತರ ಪದವಿಧರರಿಗೆ ಬಳ್ಳಾರಿ ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯಲ್ಲಿ ಮಾಧ್ಯಮ ಚಟುವಟಿಕೆಗಳ ಕಾರ್ಯನಿರ್ವಹಣೆ ಕುರಿತು 12 ತಿಂಗಳ ಅವಧಿಯ ಅಪ್ರೆಂಟಿಸ್ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಈ ತರಬೇತಿಗಾಗಿ ಕರ್ನಾಟಕದಲ್ಲಿ ಕಾನೂನಾತ್ಮಕವಾಗಿ ಸ್ಥಾಪಿತಗೊಂಡ ವಿಶ್ವವಿದ್ಯಾನಿಲಯದಿಂದ ಪತ್ರಿಕೋದ್ಯಮದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿರುವ ಹಾಗೂ ಕಂಪ್ಯೂಟರ್ ಜ್ಞಾನವಿರುವ ಕನ್ನಡ ಭಾಷೆ ಬಳಸಲು ಪ್ರಬುದ್ಧತೆ ಇರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದು. ಮೆರಿಟ್ ಹಾಗೂ ಸಂದರ್ಶನದ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳಿಗೆ 35 ವರ್ಷ ಮೀರಿರಬಾರದು. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅರ್ಜಿ ಲಕೋಟೆಯ ಮೇಲೆ ಕಡ್ಡಾಯವಾಗಿ ವಿಶೇಷ ಘಟಕ ಯೋಜನೆಯಡಿ ಹಾಗೂ ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನೀಡುವ ಅಪ್ರೆಂಟಿಸ್ ತರಬೇತಿಗಾಗಿ ಅರ್ಜಿ ಎಂದು ನಮೂದಿಸಬೇಕು.

ಆಯ್ಕೆಯಾದ ಅಭ್ಯರ್ಥಿಗಳು ಸಂದರ್ಶನದ ವೇಳೆ ಮೂಲ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಆಯ್ಕೆಯಾಗಿ ತರಬೇತಿಗೆ ಹಾಜರಾಗುವ ಸಂದರ್ಭದಲ್ಲಿ ಮೂಲ ದಾಖಲಾತಿಗಳನ್ನು ಬಳ್ಳಾರಿ ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಸಲ್ಲಿಸಬೇಕು. ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಅಭ್ಯರ್ಥಿಗಳು ಸ್ನಾತ್ತ–ಕೋತ್ತರ ಅಂತಿಮ ವರ್ಷದ ಪದವಿಯ ಅಂಕಪಟ್ಟಿಯೊಂದಿಗೆ ಅರ್ಜಿ ಸಲ್ಲಿಸಬೇಕು.

## ಕಮಠಾಣ ಗ್ರಾಮದ ವಾರ್ಡ್–06ರಲ್ಲಿ ಗ್ಯಾರಂಟಿ ಯೋಜನೆಗಳ ಕ್ರಾಂತಿ





• ಮಲ್ಲಮ್ಮ ನುಡಿ ವಾರ್ತೆ ಬೀದರ್

ರಾಜ್ಯ ಸರ್ಕಾರದ ಜನಪರ ಕಾರ್ಯಕ್ರಮಗಳಾದ ಗ್ಯಾರಂಟಿ ಯೋಜನೆಗಳನ್ನು ಪ್ರತಿ ಮನೆಗೂ ತಲುಪಿಸುವ ನಿಟ್ಟಿನಲ್ಲಿ ಮಾನ್ಯ ಮಾಜಿ ಶಾಸಕರಾದ ಅಶೋಕ ಖೇಣಿ ರವರ ಮಾರ್ಗದರ್ಶನದಲ್ಲಿ ಬೀದರ ದಕ್ಷಿಣ ಕ್ಷೇತ್ರದ ತಾಲ್ಲೂಕ ಪಂಚ ಗ್ಯಾರಂಟಿ ಉಪಾಧ್ಯಕ್ಷರಾದ ರಾಜಕುಮಾರ ಮಡಕಿ ಹಾಗೂ ಸದಸ್ಯರ ನೇತೃತ್ವದಲ್ಲಿ ನಮ್ಮ ನಡೆ ಹಳ್ಳಿ ಕಡೆ ಕಾರ್ಯಕ್ರಮವನ್ನು ಬೀದರ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಮಠಾಣ ಗ್ರಾಮದ ವಾರ್ಡ್– 06 ರಲ್ಲಿ ಕರ್ನಾಟಕ ಸರ್ಕಾರದ ಪಂಚ್ ಗ್ಯಾರಂಟಿ ಯೋಜನೆಗಳಾದ,

ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ ಯೋಜನೆ, ಯುವನಿಧಿ, ಯೋಜನಗಳು ಬಡ ಕುಟುಂಬಗಳ ಮೇಲಿನ ಆರ್ಥಿಕ ಒತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡಿವೆ ಎಂದು ಮಹಿಳೆಯರು ತಿಳಿಸಿದ್ದಾರೆ, ಗೃಹಲಕ್ಷ್ಮಿ ಹಣದ ಯೋಜನೆಯಿಂದ ತಮ್ಮ ಆರೋಗ್ಯಕಾಗಲಿ, ದಿನನಿತ್ಯದ ಜೀವನ ಬಾಳಿಗೆ ಬೆಳಕಾಗಿದೆ ಎಂದು ತಿಳಿಸಿರುತ್ತಾರೆ.

ಶಕ್ತಿ ಯೋಜನೆ ಟಿಕೆಟ್ ರಹಿತ ಪ್ರಯಾಣದಿಂದಾಗಿ ಮಹಿಳೆಯರು ಉತ್ತಮ ಉದ್ಯೋಗದ ವೇತನ ಕಂಡು–ಕೊಂಡಿದ್ದಾರೆ, ಈ ಯೋಜನೆಯಿಂದ ಮಹಿಳೆಯರು ಬಸ್ ನಲ್ಲಿ ಹೆಚ್ಚಿನ ಪ್ರಯಾಣ ಮಾಡುತ್ತಿದಾರೆ, ಮಹಿಳೆಯರಿಗೆ ಉತ್ತಮ ಆರೋಗ್ಯ ಸೌಲಭ್ಯಗಳನ್ನು ಪಡೆಯಲು ಇದರಿಂದ ಸಹಾಯಕಾರಿ ಆಗುತ್ತಿದೆ, ಈ ಐದು ಯೋಜನೆಗಳ ಮಹತ್ವದ ಬಗ್ಗೆ ಮನೆ ಮನೆಗೆ ತೆರಳಿ ಜನರಲ್ಲಿ ತಿಳಿಸಲಾಯಿತು...

ಈ ಸಂದರ್ಭದಲ್ಲಿ ಕಮಿಟಿಯ ಸದಸ್ಯರಾದ ಉದಯಕುಮಾರ ಚಟನಳ್ಳಿ, ಶಿವಕುಮಾರ ಕುತ್ತಾಬಬಾದ ಮುಖಂಡರಾದ ಇನಾಯತ್, ಸಿದ್ದರೆಡ್ಡಿ, ಸೇರಿ ಅನೇಕ ಗ್ರಾಮಸ್ಥರು ಪಾಲ್ಗೊಂಡಿದರು.

# ಬೇವೂರಿನಲ್ಲಿ 11 ಜೋಡಿಗಳ ಮದುವೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ



ಸಾಮೂಹಿಕ ವಿವಾಹಗಳು ಬಡವರು ಹಾಗೂ ನಿರ್ಗತಿಕರ ಮದುವೆಗಳಲ್ಲ. ಭಾಗ್ಯವಂತರ ಮದುವೆಗಳು. ಇಲ್ಲಿ ಮದುವೆಯಾಗುವವರು ಬಹಳಷ್ಟು ಪುಣ್ಯಶಾಲಿಗಳು ಎಂದು ಬಿಲ್‌ಕೆ–ರೂರ ಬಿಲ್ವಾಶ್ರಮ ಹಿರೇಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲೂಕಿನ ಬೇವೂರ ಗ್ರಾಮದಲ್ಲಿ ಗ್ಯಾನೇಶ್ವರದೇವರ ಕಾರ್ತಿಕೋತ್ಸವದ ಅಂಗವಾಗಿ ಸೋಮವಾರ ಪೂಜ್ಯ ಗ್ಯಾನಪ್ಪಜ್ಜನವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದ ಸರ್ವಧರ್ಮ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಬಡವರ ಆರ್ಥಿಕ ಹೊರೆಯನ್ನು ತಗ್ಗಿಸುವ ಉದ್ದೇಶದಿಂದ ಹಲವಾರು ಸಂಘ–ಸಂಸ್ಥೆಗಳು ದಾನಿಗಳ ಸಹಾಯ, ಸಹಕಾರದಿಂದ ಸಾಮೂಹಿಕ ವಿವಾಹ ಮಾಡುತ್ತಾರೆ. ಹೀಗಾಗಿ ಇಲ್ಲಿ ವಿವಾಹ ಮಾಡಿಕೊಳ್ಳುವವರು ಅತ್ಯಂತ ಭಾಗ್ಯಶಾಲಿಗಳು ಎಂದರು.

ನವದಂಪತಿಗಳು ಒಳ್ಳೆಯ ಮಕ್ಕಳನ್ನು ಹೆತ್ತು ಅವರಿಗೆ ಉತ್ತಮ ಶಿಕ್ಷಣ ಕೊಡಿಸಿ, ಸಂಸ್ಕಾರ ಕಲಿಸಿ ಸತ್ಪ್ರಜೆಗಳನ್ನಾಗಿ ಮಾಡಬೇಕು. ಅವರಲ್ಲಿ ಹಿರಿಯರನ್ನು ಗೌರವಿಸುವ ಗುಣಗಳನ್ನು ಬೆಳೆಸಿ ಸದ್ಗುಣಿಗಳನ್ನಾಗಿ ಮಾಡಿ ದೇಶದ ಆಸ್ತಿಯನ್ನಾಗಿ ಮಾಡಬೇಕು ಎಂದು ಬಿಲ್‌ಕೆರೂರ ಶ್ರೀಗಳು ಹೇಳಿದರು. ಬೇವೂರ ಆದರ್ಶ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಜಿ.ಜಿ.ಮಾಗನೂರ ಮಾತನಾಡಿ, ಸಾಮೂಹಿಕ ವಿವಾಹಗಳು ಬಡವರ ಪಾಲಿಗೆ ವರದಾನವಾಗಿದ್ದು, ಪೂಜ್ಯ ಗ್ಯಾನಪ್ಪಜ್ಜನವರು ಪ್ರತಿ ವರ್ಷ ನಡೆಸಿಕೊಡುವ ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ಸರ್ವರ ಸಹಾಯ, ಸಹಕಾರ ನಿರಂತರವಾಗಿ ದೊರೆಯಬೇಕು ಎಂದರು.

ಅತಿಥಿ ಸಿದ್ದಪ್ಪ ಶಿರೂರ ಮಾತನಾಡಿ, ಸರ್ವಧರ್ಮ ಸಾಮೂಹಿಕ ವಿವಾಹ ಪುಣ್ಯದ ಕಾರ್ಯವಾಗಿದ್ದು, ಇಲ್ಲಿ ಮದುವೆಯಾಗುವವರು ಸಹ ಬಹಳ ಪುಣ್ಯವಂತರೇ ಸರಿ ಎಂದು ಹೇಳಿದರು. ಆಶೀರ್ವಚನ ನೀಡಿದ ಹರನಾಳದ ಸಂಗನಬಸವ ಸ್ವಾಮೀಜಿ, ನೂತನ ವಧು–ವರರು ಸಮನ್ವಯತೆಯ ಜೀವನ ಸಾಗಿಸಿ ಆದರ್ಶ ದಂಪತಿಗಳಾಗಿ ಬಾಳಬೇಕು ಎಂದರು. ನಾಯನೇಗಲಿಯ ನಿರಂಜನ ಮಾತಾಜಿ ಉಪಸ್ಥಿತರಿದ್ದರು. ಅಧ್ಯಕ್ಷತೆ ವಹಿಸಿದ್ದ ಗ್ರಾಪಂ ಮಾಜಿ ಅಧ್ಯಕ್ಷ ಜಿ.ವಾಯ್.ಹೆರಕಲ್ ಮಾತನಾಡಿದರು.

ವೈಜಾಪೂರ, ಗ್ಯಾನಪ್ಪ ಚಲವಾದಿ, ಮಲ್ಲಪ್ಪ ಹೆರಕಲ್, ಸಿದ್ದು ಕುರಿ, ಸಂಗಮೇಶ ಇಂಡಿ, ಮಡ್ಡೇಸಾಬ ಗುರಗುನ್ನಿ, ವಕೀಲ ಬಿ.ಬಿ.ತೆಗ್ಗಿನಮನಿ, ಬಸವರಾಜ ಮಸಬಿನಾಳ ಅತಿಥಿಗಳಾಗಿದ್ದರು.

**11 ಜೋಡಿಗಳ ವಿವಾಹ:** ವಿವಾಹ ಕಾರ್ಯಕ್ರಮದಲ್ಲಿ 11 ಜೋಡಿ ವಧು–ವರರು ಸಪ್ತಪದಿ ತುಳಿದು ಹೊಸ ಜೀವನಕ್ಕೆ ಅಡಿಯಿಟ್ಟರು.






Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)